

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಡಿಸೆಂಬರ್ 7 ಶನಿವಾರ 2024

45

ಸಂಪುಟ: 45 | ಸಂಚಿಕೆ: 230 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695 ಸುದ್ದಿ
ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4



ಕೊಳ್ಳೇಗಾಲ ನಗರದಲ್ಲಿ ಆನೆಗಳ ಮುಂಜಾನೆ ವಿಹಾರ!

● ಇಡೀ ನಗರದ ಗಲ್ಲಿ ರಸ್ತೆಗಳಲ್ಲಿ ಸುತ್ತಾಡಿರುವ ಎರಡು ಆನೆ ● ಮಾರ್ಗದುದ್ದಕ್ಕೂ ಯಾವುದೇ ಹಾನಿ ಮಾಡಿಲ್ಲ; ಬೆಳಗ್ಗೆ ವಿಷಯ ತಿಳಿದು ಜನತೆ ಆತಂಕ ● ಕೆಆರ್ ನಗರ ಬಳಿ ಎರಡು ಆನೆ ಬಯಲಾಟ

ಕೊಳ್ಳೇಗಾಲ, ಡಿ. 6–ಇಂದು ಮುಂಜಾನೆ ಕೊಳ್ಳೇಗಾಲ ನಗರದ ಬೀದಿಗಳಲ್ಲಿ ಎರಡು ಕಾಡಾನೆಗಳು ವಿಹಾರ ನಡೆಸಿವೆ. ತಮ್ಮ ಪಾಡಿಗೆ ತಾವು ಗಲ್ಲಿ ರಸ್ತೆಗಳಲ್ಲಿ ಸಾಗಿದ್ದರೂ ಜನತೆ ಮಾತ್ರ ಆತಂಕಗೊಂಡಿದ್ದಾರೆ.

ಕೊಳ್ಳೇಗಾಲ ಪಟ್ಟಣಕ್ಕೆ ಹೊಂದಿಕೊಂಡಂತೆ ಯಾವುದೇ ಅರಣ್ಯವಿಲ್ಲ. ಹೀಗಿದ್ದರೂ ಎರಡು ಕಾಡಾನೆಗಳು ಕೊಳ್ಳೇಗಾಲ ನಗರ ಪ್ರವೇಶಿಸಿರುವುದು ಅಚ್ಚರಿಗೆ ಕಾರಣವಾಗಿದೆ. ಸಿಸಿ ಕ್ಯಾಮರಾ ದೃಶ್ಯಾವಳಿಗಳನ್ನು ಗಮನಿಸಿದಾಗ ಮುಂಜಾನೆ 2 ಗಂಟೆಯ ನಂತರ ಕಾಡಾನೆಗಳು ಪಟ್ಟಣದ ಜನ ವಸತಿ ಪ್ರದೇಶದಲ್ಲಿ ಸುತ್ತಾಡುತ್ತಿರುವುದು ಕಂಡುಬಂದಿದೆ. ಆ ವೇಳೆ ಜನ ಸಂಚಾರ ವಿಲ್ಲದ ಕಾರಣ ಯಾವುದೇ ರೀತಿಯ ಅನಾಹುತ ಸಂಭವಿಸಿಲ್ಲ. ಜನವಸತಿ ಪ್ರದೇಶಿಸುವ ಮುನ್ನ ಪಟ್ಟಣಕ್ಕೆ ಹೊಂದಿಕೊಂಡಿರುವ ಗದ್ದೆಗಳನ್ನು ಹಾದು ಆನೆಗಳು ಬಂದಿವೆಯಾದರೂ, ಯಾವುದೇ ಬೆಳೆಯನ್ನು ತಿಂದಿಲ್ಲ, ಇಲ್ಲವೇ ಹಾಳು ಮಾಡಿಲ್ಲ ಎಂದು ಹೇಳಲಾಗಿದೆ.

ಗದ್ದೆ ಬಯಲಿನಿಂದ ದೇವಾಂಗ ಪೇಟೆಯ ದುಬಟಿ ವೀರಶೆಟ್ಟಿ ಬೀದಿ, ನಡುಕಲ ಬೀದಿ, ಚೌಡೇಶ್ವರಿ ಗುಡಿ ಬೀದಿಯಲ್ಲಿ ಆನೆಗಳು ಸಂಚರಿಸಿರುವುದು ಸಿಸಿ ಕ್ಯಾಮರಾದಲ್ಲಿ ಸೆರೆಯಾಗಿದೆ. ಚೌಡೇಶ್ವರಿ ಗುಡಿ ಬೀದಿಯಲ್ಲಿ 2 ಆನೆಗಳೂ ಬೇರ್ಪಟ್ಟಿದ್ದು, ದೇವಸ್ಥಾನದ ಸುತ್ತಮುತ್ತಲೇ ಜನವಸತಿ ಬೀದಿಗಳಲ್ಲೇ ಸುತ್ತಾಡಿ ■ 6ನೇ ಪುಟಕ್ಕೆ




ಕೊಳ್ಳೇಗಾಲ ನಗರದಲ್ಲಿ ಶುಕ್ರವಾರ ಮುಂಜಾನೆ ಎರಡು ಆನೆಗಳು ಗಲ್ಲಿ... ರಸ್ತೆಗಳಲ್ಲಿ ನಿರಾತಂಕವಾಗಿ ವಿಹರಿಸಿ, ಬೆಳಗ್ಗೆ ಆಗುತ್ತಲೇ ಹೊರನಡೆದವು... ವಿಷಯ ತಿಳಿದು, ಸಾರ್ವಜನಿಕರು ಬೆಚ್ಚಿಬಿದ್ದಿದ್ದಾರೆ.

ಸಿಎಫ್‌ಟಿಆರ್‌ಐನಲ್ಲಿ **'ಸಿರಿಧಾನ್ಯ ಉತ್ಕೃಷ್ಟತಾ ಹಾಗೂ ಇನ್‌ಕ್ಯೂಬೇಶನ್ ಕೇಂದ್ರ'** ಸ್ಥಾಪನೆ

● ಕೃಷಿ ಸಚಿವ ಚಲುವರಾಯಸ್ವಾಮಿ ಉದ್ಘಾಟನೆ ● ಸಿರಿಧಾನ್ಯ ಬಳಕೆಯಿಂದ ಆರೋಗ್ಯ ಸಂರಕ್ಷಣೆ ವಿಶ್ವಾಸ ■ ಪುಟ–5

ಸಿದ್ದರಾಮಯ್ಯಗೆ ಸೆಡ್ಡು ಹೊಡೆಯಲು

ಡಿ.15ರಂದು ಮಂಡ್ಯದಲ್ಲಿ ಜೆಡಿಎಸ್ ಭಾರಿ ಸಮಾವೇಶ

ಮಾಜಿ ಪ್ರಧಾನಿ ದೇವೇಗೌಡರ ನೇತೃತ್ವದಲ್ಲೇ ಪ್ರತಿ ಸವಾಲು; ಕೇಂದ್ರ ಸಚಿವ ಕುಮಾರಸ್ವಾಮಿ ಜನ್ಮದಿನದ ಹಿನ್ನೆಲೆಯಲ್ಲಿ ಅಭಿನಂದನೆ ನೆಪದಲ್ಲಿ ಬೃಹತ್ ಸಮಾವೇಶ; ಹಳೇ ಮೈಸೂರು ಭಾಗದ ಜೆಡಿಎಸ್ ಪ್ರಾಬಲ್ಯವುಳ್ಳ ಜಿಲ್ಲೆಗಳ ಲಕ್ಷಾಂತರ ಜನರ ಸೇರಿಸಲು ನಿರ್ಧಾರ; ಇದಕ್ಕೂ ಮುನ್ನ ಜಿ.ಟಿ.ದೇವೇಗೌಡರ ಮನವೊಲಿಕೆ ಯತ್ನ





ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಜೆಡಿಎಸ್ ಸಮಾವೇಶ ಸ್ಥಳ ಪರಿಶೀಲಿಸುತ್ತಿರುವುದು.

ಬೆಂಗಳೂರು, ಡಿ.6(ಕೆಎಂಶಿ)– ಹಾಸನದ ಜನಕಲ್ಯಾಣ ಸಮಾವೇಶಕ್ಕೆ ಪ್ರತಿಯಾಗಿ ಡಿ.15ರಂದು ಮಂಡ್ಯದಲ್ಲಿ ಜೆಡಿಎಸ್ ಬೃಹತ್ ಸಮಾವೇಶ ಆಯೋಜಿಸಿದೆ.

ಹಾಸನದ ಸಮಾವೇಶ ಮುಗಿಯುತ್ತಿದ್ದಂತೆ ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡರ ದೆಹಲಿ ನಿವಾಸದಲ್ಲಿ ಅವರ ಸಮ್ಮುಖದಲ್ಲೇ ಈ ನಿರ್ಣಯ ಕೈಗೊಳ್ಳಲಾಗಿದೆ. ದೇವೇಗೌಡರಲ್ಲದೆ, ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ, ಮಾಜಿ ಸಚಿವ ಎಚ್.ಡಿ.ರೇವಣ್ಣ, ಮಾಜಿ ಶಾಸಕರಾದ ಸಾ.ರಾ. ಮಹೇಶ್ ಹಾಗೂ ಸಿ.ಎಸ್.ಪುಟ್ಟರಾಜು ಉಪಸ್ಥಿತರಿದ್ದರು. ಕೇಂದ್ರ ಸಚಿವರಾದ ಎಚ್.ಡಿ. ಕುಮಾರಸ್ವಾಮಿ ಅವರಿಗೆ ಅಭಿನಂದನೆ ಸಲ್ಲಿಸುವ ನೆಪದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ತಕ್ಕ ಪ್ರತ್ಯುತ್ತರ ನೀಡಲು ಈ ಸಮಾವೇಶ ■ 6ನೇ ಪುಟಕ್ಕೆ

ರಾಜ್ಯದಲ್ಲಿ ಕೆಲವೇ ದಿನದಲ್ಲಿ ರಾಜಕೀಯ ಭೂಕಂಪ

ಸಿ.ಎಸ್.ಪುಟ್ಟರಾಜು ಭವಿಷ್ಯ

ಮಂಡ್ಯ, ಡಿ.6– ರಾಜ್ಯದಲ್ಲಿ ಕೆಲವೇ ದಿನದಲ್ಲಿ ರಾಜಕೀಯ ಭೂಕಂಪವಾಗಲಿದ್ದು, ಕಾಂಗ್ರೆಸ್ ಸರ್ಕಾರವೇ ಬದಲಾದರೂ ಅಚ್ಚರಿ ಇಲ್ಲ ಎಂದು ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಭವಿಷ್ಯ ನುಡಿದರು. ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಾಂಗ್ರೆಸ್ ನಾಯಕರು ಯಾವ ಒಪ್ಪಂದ ಮಾಡಿಕೊಂಡಿದ್ದಾರೋ ಗೊತ್ತಿಲ್ಲ. ಆದರೆ ನೂರಕ್ಕೆ ನೂರರಷ್ಟು ಕಾಂಗ್ರೆಸ್ ಬಣ್ಣ ಬಯಲಾಗುತ್ತದೆ. ■ 6ನೇ ಪುಟಕ್ಕೆ

ಅಧಿಕಾರ ಹಂಚಿಕೆ ಆದರೂ ಖುಷಿಯಿಂದಲೇ ಆಗುತ್ತೆ

● ಮಂಡ್ಯ ಉಸ್ತುವಾರಿ ಸಚಿವ ಚಲುವರಾಯಸ್ವಾಮಿ ಪ್ರತಿಕ್ರಿಯೆ
● ಸಿಎಂ ಆಯ್ಕೆ, ಬದಲಾವಣೆ ಹೈಕಮಾಂಡ್ ನಿರ್ಧರಿಸುತ್ತೆ



ಚಲುವರಾಯಸ್ವಾಮಿ

ಮೈಸೂರು, ಡಿ.6(ಎಸ್‌ಬಿಡಿ)– ಅಧಿಕಾರ ಹಂಚಿಕೆ ಪಕ್ಷದ ಆಂತರಿಕ ವಿಚಾರ. ಯಾವುದೇ ತೀರ್ಮಾನವಾದರೂ ಖುಷಿಯಿಂದಲೇ ಆಗುತ್ತದೆ ಎಂದು ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವರೂ ಆದ ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ಹೇಳಿದರು.

ಮೈಸೂರಿನಲ್ಲಿ ಶುಕ್ರವಾರ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನಡುವೆ ವಿವಾದದ ಪ್ರಶ್ನೆಯೇ ಇಲ್ಲ. ನಾವೆಲ್ಲರೂ ಒಂದೇ. ನಮ್ಮ ನಡುವೆ ಯಾವುದೇ ವ್ಯತ್ಯಾಸವಿಲ್ಲ. ರಾಹುಲ್ ಗಾಂಧಿ, ಸೋನಿಯಾ ಗಾಂಧಿ, ಮಲ್ಲಿಕಾರ್ಜುನ ಖರ್ಗೆ ಅವರ ಮೇಲೆ ಎಲ್ಲರಿಗೂ ಅಪಾರ ಗೌರವ ಇದೆ. ಮುಖ್ಯಮಂತ್ರಿ ಆಯ್ಕೆ ಅಥವಾ ಬದಲಾವಣೆ ಬಗ್ಗೆ ಹೈಕಮಾಂಡ್ ತೀರ್ಮಾನಿಸುತ್ತದೆ. ಬಿಜೆಪಿ–ಜೆಡಿಎಸ್‌ನವರನ್ನು ತೀರ್ಮಾನ ಮಾಡಿ ಎಂದು ಯಾರೂ ಕೇಳಿಲ್ಲ. ಅಧಿಕಾರ ■ 6ನೇ ಪುಟಕ್ಕೆ

ಮಗನ ಸೋಲನ್ನು ಸಂಭ್ರಮಿಸುತ್ತಾರಾ?

ಹಾಸನದಲ್ಲಿ ನಡೆದ ಕಾಂಗ್ರೆಸ್ ಜನಕಲ್ಯಾಣ ಸಮಾವೇಶಕ್ಕೆ ಕೌಂಟರ್ ಎನ್ನುವಂತೆ ಮಂಡ್ಯದಲ್ಲಿ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರ ಹುಟ್ಟುಹಬ್ಬವನ್ನು ಅದ್ಧೂರಿಯಾಗಿ ಆಚರಿಸಲು ಸಿದ್ಧತೆ ನಡೆದಿದೆ ಎಂಬ ವಿಚಾರಕ್ಕೆ ಪ್ರತಿಕ್ರಿಯಿಸಿದ ಚಲುವರಾಯಸ್ವಾಮಿ, ಕುಮಾರಸ್ವಾಮಿ ಅವರಿಗೆ ಮಗ ಸೋತರೂ ಸಮಾಧಾನ ಆಗಿಲ್ಲ ಎನ್ನಿಸುತ್ತದೆ. ನಿಖಿಲ್‌ನ ಮೂರು ಸೋಲಿಗೆ ತಂದೆ–ಮಗನ ಮಾತುಗಳೇ ಕಾರಣ. ಮಗನ ಸೋಲನ್ನು ಮಂಡ್ಯದಲ್ಲಿ ಸೆಲೆಬ್ರೇಟ್ ಮಾಡ್ತಾರಾ, ಮಾಡಲಿ ಬಿಡಿ. ನಮಗೇನು ಬೇಜಾರಿಲ್ಲ. ಆದರೆ ಕಾಂಗ್ರೆಸ್‌ಗೆ ಕೌಂಟರ್ ಕೊಡಲು ಅವರ್‍ಯಾರು. ಜನರ ಆಶೀರ್ವಾದದಿಂದ ಐದು ವರ್ಷ ಯಶಸ್ವಿಯಾಗಿ ಅಧಿಕಾರ ಪೂರ್ಣಗೊಳಿಸಿ, 2028ಕ್ಕೆ ಮತ್ತೆ ಅಧಿಕಾರಕ್ಕೆ ಬರುತ್ತೇವೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ನೀರಿನ ಬಿಲ್ ಬಾಕಿ ಹಣ ಗುಳುಂ ಪ್ರಕರಣ

ವಾಣಿ ವಿಲಾಸ ವಾಟರ್ ವರ್ಕ್ಸ್‌ನ ಆರು ಮಂದಿ ಕೆಲಸದಿಂದ ವಜಾ

15 ಮಂದಿ ಹೊರಗುತ್ತಿಗೆ ನೌಕರರ ಕೆಲಸಕ್ಕೂ ಕುತ್ತು



ಮೈಸೂರು, ಡಿ. 6(ಆರ್‌ಕೆ)–ಗ್ರಾಹಕರಿಂದ ವಸೂಲು ಮಾಡಿದ ಕುಡಿಯುವ ನೀರಿನ ಬಾಕಿ ಹಣವನ್ನು ಗುಳುಂ ಮಾಡಿದ್ದ ಮೈಸೂರು ಮಹಾನಗರ ಪಾಲಿಕೆಯ ವಾಣಿ ವಿಲಾಸ ವಾಟರ್ ವರ್ಕ್ಸ್‌ನ 6 ಮಂದಿ ಟೈಂ ಸ್ಕೇಲ್ ಸಿಬ್ಬಂದಿಗಳನ್ನು ಸೇವೆಯಿಂದ ವಜಾ ಮಾಡಲಾಗಿದೆ.

ವಾಟರ್ ಇನ್‌ಸ್ಪೆಕ್ಟರ್ (ಜಲ ನಿರೀಕ್ಷಕರು)ಗಳಾದ ಚೆನ್ನೇಗೌಡ, ಕೆ.ಮಹೇಶ್, ಎನ್.ಮೋಹನ್, ಮೀಟರ್ ರೀಡರ್‌ಗಳಾದ ವೆಂಕಟೇಶ್ ಮತ್ತು ಸೈಫುಲ್ಲಾ ಸೇವೆಯಿಂದ ವಜಾಗೊಂಡಿದ್ದಾರೆ. ಈ ಸಂಬಂಧ ಇಂದು ಮೈಸೂರು ಮಹಾನಗರ ಪಾಲಿಕೆ ಆಯುಕ್ತ ಅಶಾದ್ ಉರ್ ರೆಹಮಾನ್ ಷರೀಫ್ ಎಲ್ಲಾ 6 ಮಂದಿಗೂ ಪ್ರತ್ಯೇಕ ಆದೇಶ ಹೊರಡಿಸಿದ್ದು, ಸಾರ್ವಜನಿಕರಿಂದ ಸಂಗ್ರಹಿಸಿದ ಕುಡಿಯುವ ನೀರಿನ ಬಿಲ್ ಹಣವನ್ನು ಪಾಲಿಕೆ ಖಾತೆಗೆ ಜಮಾ ಮಾಡದೇ ವಂಚಿಸಿರುವುದಲ್ಲದೇ, ಸಾಫ್ಟ್‌ವೇರ್ ಮಾಡ್ಯೂಲ್ ಬಳಸಿ ನಕಲಿ ರಶೀದಿ ಸೃಷ್ಟಿಸಿ ಗ್ರಾಹಕರಿಗೆ ತಲುಪಿಸುತ್ತಿದ್ದರು. ಇಂತಹ ಕ್ರಿಮಿನಲ್ ಕೃತ್ಯ ಎಸಗಿರುವುದರಿಂದ ಸರ್ಕಾರಿ ಸೇವಾ ನಿಯಮಗಳನುಸಾರ ಸೇವೆಯಿಂದ ವಜಾಗೊಳಿಸಿ ಆಯುಕ್ತರು ಆದೇಶ ಹೊರಡಿಸಿದ್ದಾರೆ.

ಜೊತೆಗೆ ಹೊರಗುತ್ತಿಗೆ ಆಧಾರದಲ್ಲಿ ವಾಣಿ ವಿಲಾಸ ವಾಟರ್ ವರ್ಕ್ಸ್‌ನಲ್ಲಿ ಮೀಟರ್ ರೀಡರ್‌ಗಳಾಗಿ ಕೆಲಸ ಮಾಡುತ್ತಿದ್ದ 15 ಮಂದಿಯನ್ನು ಸಹ ಕರ್ತವ್ಯದಿಂದ ಬಿಡುಗಡೆ ಮಾಡಲಾಗಿದೆ. ಈ ಕ್ರಮ ವಹಿಸುವ ಮುನ್ನವೇ ಈ ಸಿಬ್ಬಂದಿಗಳಿಂದ ತಪ್ಪೊಪ್ಪಿಗೆ ಪತ್ರ ಬರೆಸಿಕೊಂಡು, ದುರುಪಯೋಗಪಡಿಸಿಕೊಂಡ ಸುಮಾರು 1 ಕೋಟಿ ರೂ.ವರೆಗೆ ಹಣವನ್ನು ವಸೂಲಿ ಮಾಡಲಾಗಿತ್ತು.

ಕಳೆದ ಒಂದೂವರೆ ವರ್ಷದಿಂದ ವಾಟರ್ ವರ್ಕ್ಸ್‌ನಲ್ಲಿ ಕುಡಿಯುವ ನೀರಿನ ಬಿಲ್ ವಸೂಲಿಗೆ ಬಳಸುತ್ತಿದ್ದ ಸಾಫ್ಟ್‌ವೇರ್ ಮಾಡ್ಯೂಲ್ ಹ್ಯಾಕ್ ಮಾಡಿ ನಕಲಿ ರಶೀದಿ ಸೃಜಿಸಿ, ಹಣ ಗುಳುಂ ಮಾಡುತ್ತಿದ್ದ ವಿಷಯ ತಿಳಿದೊಡನೆಯೇ ಪಾಲಿಕೆ ಸೂಪರಿಂಟೆಂಡಿಂಗ್ ಇಂಜಿನಿಯರ್ ಕೆ.ಜೆ. ಸಿಂಧೂ ನೇತೃತ್ವದಲ್ಲಿ ತನಿಖೆ ನಡೆಸಿ ನೀಡಿದ ವರದಿ ಆಧರಿಸಿ ಪಾಲಿಕೆ ಆಯುಕ್ತ ಅಶಾದ್ ಉರ್ ರೆಹಮಾನ್ ಷರೀಫ್ ವಂಚಕರ ವಿರುದ್ಧ ಖಡಕ್ ಕ್ರಮ ವಹಿಸಿದ್ದಾರೆ.

ಹೊರಗುತ್ತಿಗೆ ಆಧಾರದ ಮೇಲೆ ನೌಕರರನ್ನು ಪೂರೈಸಿದ್ದ ಸಂಸ್ಥೆ ಮುಖ್ಯಸ್ಥರಿಗೂ ನೋಟಿಸ್ ನೀಡಿ ಕಪ್ಪು ಪಟ್ಟಿಗೆ ಸೇರಿಸುವ ಸಂಬಂಧ ಪ್ರಕ್ರಿಯೆ ನಡೆಯುತ್ತಿದ್ದು, ಸಾಫ್ಟ್‌ವೇರ್ ಸೇವೆ ಒದಗಿಸುತ್ತಿದ್ದ ಸೆಮನಲ್ ಸಂಸ್ಥೆ ಹಾಗೂ ನಿರ್ವಹಣೆ ಮಾಡುತ್ತಿದ್ದ ಮಲ್ಲಿಕಾರ್ಜುನ ವಿರುದ್ಧವೂ ಕ್ರಮ ಕೈಗೊಳ್ಳಲು ಪಾಲಿಕೆ ಅಧಿಕಾರಿಗಳು ತಯಾರಿ ನಡೆಸಿದ್ದಾರೆ.

ಸೆಮಿನಲ್ ಸಂಸ್ಥೆಯ ಮಲ್ಲಿಕಾರ್ಜುನ ಸೇರಿ ನಾಲ್ವರ ವಿರುದ್ಧ ಕ್ರಿಮಿನಲ್ ಕೇಸ್

ಮೈಸೂರು ಮಹಾನಗರ ಪಾಲಿಕೆಯ ವಾಣಿ ವಿಲಾಸ ವಾಟರ್ ವರ್ಕ್ಸ್‌ನಲ್ಲಿ ಕುಡಿಯುವ ನೀರಿನ ಶುಲ್ಕ ಸಂಗ್ರಹಕ್ಕೆ ಬಳಸಲಾಗುತ್ತಿದ್ದ ಸಾಫ್ಟ್‌ವೇರ್ ದುರ್ಬಳಕೆ ಮಾಡಿ ಬಿಲ್ ಹಣ ಗುಳುಂ ಮಾಡಿರುವ ಪ್ರಕರಣದ ಪ್ರಮುಖ ಆರೋಪಿ ಸೆಮಿನಲ್ ಕಂಪನಿಯ ಮಲ್ಲಿಕಾರ್ಜುನ ಸೇರಿದಂತೆ ನಾಲ್ವರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಲು ಪಾಲಿಕೆ ಅಧಿಕಾರಿಗಳು ಮುಂದಾಗಿದ್ದಾರೆ. ವಂಚನೆ ಪ್ರಕರಣ ಬಯಲಾಗುತ್ತಿದ್ದಂತೆಯೇ 6 ಮಂದಿ ಟೈಂ ಸ್ಕೇಲ್ ನೌಕರರನ್ನು ಸೇವೆಯಿಂದ ವಜಾಗೊಳಿಸಿರುವ ಪಾಲಿಕೆ ಆಯುಕ್ತ ಅಶಾದ್ ಉರ್ ರೆಹಮಾನ್ ಷರೀಫ್, ಇತರ 15 ಮಂದಿ ಹೊರ ಗುತ್ತಿಗೆ ಸಿಬ್ಬಂದಿಯನ್ನು ಸೇವೆಯಿಂದ ಬಿಡುಗಡೆ ಮಾಡಿದ್ದು, ಪ್ರಕರಣದ ಪ್ರಮುಖ ಆರೋಪಿ ಮಲ್ಲಿಕಾರ್ಜುನ ಹಾಗೂ ವಾಣಿ ವಿಲಾಸ ವಾಟರ್ ವರ್ಕ್ಸ್‌ನ ಮೂವರು ಮೀಟರ್ ರೀಡರ್‌ಗಳ ವಿರುದ್ಧ ವಿವಿ ಪುರಂ ಠಾಣೆಗೆ ದೂರು ನೀಡಿ ಕ್ರಿಮಿನಲ್ ಕೇಸು ದಾಖಲಿಸುವಂತೆಯೂ ಅಧೀನಾಧಿಕಾರಿಗಳಿಗೆ ನಿರ್ದೇಶನ ನೀಡಿದ್ದಾರೆ. ಅಗತ್ಯ ದಾಖಲೆಗಳೊಂದಿಗೆ ವಿವಿ ವಾಟರ್ ವರ್ಕ್ಸ್ ಅಧಿಕಾರಿಗಳು, ನಾಳೆ (ಡಿ. 7) ಲಿಖಿತ ದೂರು ನೀಡಲಿದ್ದಾರೆ.

ಡಿ.28ರಂದು ಹನುಮ ಜಯಂತಿ



ಮೈಸೂರು ಹನುಮ ಹಬ್ಬದ ಪೋಸ್ಟರ್ ಅನ್ನು ಉಡುಪಿ ಶ್ರೀ ಪೇಜಾವರ ಮಠದ ಶ್ರೀ ವಿಶ್ವೇಶ್ವರ ತೀರ್ಥ ಪ್ರಸನ್ನ ಸ್ವಾಮೀಜಿ ಬಿಡುಗಡೆ ಮಾಡಿದರು.

ಮೈಸೂರು, ಡಿ.6(ಎಂಕೆ)– ಹನುಮೋತ್ಸವ ಸಮಿತಿ ವತಿಯಿಂದ ಡಿ.28 ರಂದು ಹಮ್ಮಿಕೊಂಡಿರುವ ಹನುಮ ಜಯಂತಿ(ಮೈಸೂರು ಹನುಮ ಹಬ್ಬ) ಪೋಸ್ಟರ್ ಅನ್ನು ಉಡುಪಿ ಶ್ರೀ ಪೇಜಾವರ ಮಠದ ಶ್ರೀ ವಿಶ್ವೇಶ್ವರ ತೀರ್ಥ ಪ್ರಸನ್ನ ಸ್ವಾಮೀಜಿ ಬಿಡುಗಡೆ ಮಾಡಿದರು. ಬಳಿಕ ಮಾತನಾಡಿದ ಅವರು, ಮೈಸೂರಲ್ಲಿ ಪ್ರತಿವರ್ಷದಂತೆ ಈ ವರ್ಷವೂ ಅತ್ಯಂತ ವಿಜೃಂಭಣೆ ಹಾಗೂ ಭಕ್ತಿಯಿಂದ ಹನುಮ ಜಯಂತಿ ಆಚರಣೆ ಹಮ್ಮಿಕೊಂಡಿರುವುದು ಸಂತೋಷದ ವಿಚಾರವಾಗಿದೆ. ಹಿಂದೂ ಸಮಾಜದಲ್ಲಿ ಇಂತಹ ಕಾರ್ಯಕ್ರಮಗಳು ಹೆಚ್ಚೆಚ್ಚು ನಡೆಯುತ್ತಿರಬೇಕು. ಯುವಕರಲ್ಲಿ ಹನುಮ ಜಾಗೃತಿ ಮೂಡಿಸಬೇಕು. ಜಯಂತಿ ಮಹತ್ವನ್ನು ತಿಳಿಸುವ ನಿಟ್ಟಿನಲ್ಲಿ ಯುವ ಸಮೂಹ ಹೆಚ್ಚೆಚ್ಚು ತೊಡಗಿಕೊಳ್ಳಬೇಕು ಎಂದು ಆಶೀರ್ವದಿಸಿದರು.

ಖ್ಯಾತ ಉದ್ಯಮಿ ಶ್ರೀಕಾಂತ್ ದಾಸ್, ವಿಜಯ ವಿಠಲ ವಿದ್ಯಾಸಂಸ್ಥೆಯ ಕಾರ್ಯದರ್ಶಿ ವಾಸುದೇವ್ ಭಟ್, ಯುವ ಮುಖಂಡರಾದ ಸಂತೋಷ್ ಶಂಭು, ಹೇಮಂತ್, ಮನುಶೈವ್, ಪುನೀತ್, ಸಂಜು ಮತ್ತಿತರರು ಉಪಸ್ಥಿತರಿದ್ದರು.

ಮೈಸೂರಲ್ಲಿ ಮೂರು ದಿನಗಳ ಜಿಲ್ಲಾ ಪೊಲೀಸ್ ಕ್ರೀಡಾಕೂಟ ಆರಂಭ





ರಾಜ್ಯ ಮತ್ತು ರಾಷ್ಟ್ರ ಮಟ್ಟದ ಕಿಕ್ ಬಾಕ್ಸಿಂಗ್ ಕ್ರೀಡಾಪಟು ಕು.ಎಂ.ಸಹನಾ ಅವರು ಬಲೂನು ಹಾರಿ ಬಿಡುವ ಮೂಲಕ ಮೈಸೂರು ಜಿಲ್ಲಾ ಪೊಲೀಸ್ ಕ್ರೀಡಾಕೂಟಕ್ಕೆ ಚಾಲನೆ ನೀಡಿದರು.

ಮೈಸೂರು, ಡಿ. 6(ಆರ್‌ಕೆ)–ಮೈಸೂರಿನ ಜ್ಯೋತಿ ನಗರದಲ್ಲಿರುವ ಡಿಎಆರ್ ಕವಾಯತು ಮೈದಾನದಲ್ಲಿ ಮೂರು ದಿನಗಳ ಜಿಲ್ಲಾ ಪೊಲೀಸ್ ವಾರ್ಷಿಕ ಕ್ರೀಡಾಕೂಟ ಇಂದಿನಿಂದ ಆರಂಭವಾಯಿತು.

ರಾಜ್ಯ ಮತ್ತು ರಾಷ್ಟ್ರ ಮಟ್ಟದ ಕಿಕ್ ಬಾಕ್ಸಿಂಗ್ ಕ್ರೀಡಾಪಟು ಕು.ಎಂ.ಸಹನಾ ಅವರು ಬಲೂನು ಹಾರಿ ಬಿಡುವ ಮೂಲಕ 2024ರ ಮೈಸೂರು ಜಿಲ್ಲಾ ಪೊಲೀಸ್ ಕ್ರೀಡಾಕೂಟಕ್ಕೆ ಚಾಲನೆ ನೀಡಿದರು. ಇದೇ ಸಂದರ್ಭ ಕ್ರೀಡಾಕೂಟದಲ್ಲಿ ಭಾಗವಹಿಸಿದ್ದ ಪೊಲೀಸರನ್ನು ಉದ್ದೇಶಿಸಿ ಮಾತನಾಡಿದ ಅವರು, ಕ್ರೀಡೆಗೆ ಏಕಾಗ್ರತೆ, ಸಮಚಿತ್ತ ಮನಸ್ಸು ಹಾಗೂ ಸಮಯ ಪಾಲನೆ ಬಹಳ ಪ್ರಮುಖವಾದುದು. ಪೊಲೀಸರು ನಿತ್ಯ ಒತ್ತಡದಲ್ಲಿ ಕರ್ತವ್ಯ ನಿರ್ವಹಿಸುವುದರಿಂದ ಕ್ರೀಡೆ ಮಾನಸಿಕ ಮತ್ತು ದೈಹಿಕ ಸಾಮರ್ಥ್ಯವನ್ನು ರೂಪಿಸಿ ಮನಸ್ಸಿಗೆ ಉತ್ಸಾಹ ನೀಡುತ್ತದೆ. ಆದ್ದರಿಂದ ಪ್ರತಿಯೊಬ್ಬರೂ ಕ್ರೀಡಾ ಚಟುವಟಿಕೆಯಲ್ಲಿ ಪಾಲ್ಗೊಳ್ಳುವುದು ಅತ್ಯಗತ್ಯ ಎಂದರು.

ನಮ್ಮ ತಂದೆ ಮಹದೇವಯ್ಯ ಅವರು ಇದೇ ಜಿಲ್ಲಾ ಪೊಲೀಸ್ ಘಟಕದಲ್ಲಿ ಸುದೀರ್ಘ ಸೇವೆ ಸಲ್ಲಿಸಿ ನಿವೃತ್ತಿ ಹೊಂದಿದ್ದಾರೆ. ಅವರು ಕೆಲಸ ಮಾಡಿದ ಸ್ಥಳದಲ್ಲಿ ಜಿಲ್ಲಾ ಪೊಲೀಸ್ ವಾರ್ಷಿಕ ಕ್ರೀಡಾಕೂಟದಲ್ಲಿ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡು ಉದ್ಘಾಟನೆ ಮಾಡಿದ್ದು ನನ್ನ ಪೂರ್ವಜನ್ಮದ ಪುಣ್ಯ ಎಂದು ಭಾವಿಸಿದ್ದೇನೆ. ಸೋಲು–ಗೆಲುವು ಮುಖ್ಯವಲ್ಲ. ಸ್ಪರ್ಧೆಯಲ್ಲಿ ಭಾಗವಹಿಸುವುದು ಪ್ರಮುಖವಾಗಿದೆ. ಈ ನಿಟ್ಟಿನಲ್ಲಿ ಎಲ್ಲಾ ಸ್ಪರ್ಧಾಳುಗಳಿಗೆ ಜಯವಾಗಲಿ ಎಂದು ಸಹನಾ ಶುಭ ಹಾರೈಸಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎನ್. ವಿಷ್ಣುವರ್ಧನ, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಎಲ್. ನಾಗೇಶ್ ಹಾಗೂ ಜಿಲ್ಲಾ ಸಶಸ್ತ್ರ ಮೀಸಲು ಪಡೆಯ ಡಿವೈಎಸ್ಪಿ ವೀರಣ್ಣ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಡಿಎಆರ್‌ನ ಜಿ.ಜಿ. ರಘುನಂದನ ಅವರು ಕ್ರೀಡಾಜ್ಯೋತಿಯನ್ನು ತಂದು ಮುಖ್ಯ ಅತಿಥಿಗಳಿಗೆ ಸಮರ್ಪಿಸಿ ಬಳಿಕ ಕೊಂಡೊಯ್ದರು. ಸಬ್ ಇನ್ಸ್‌ಪೆಕ್ಟರ್ ದೀವಿಪ್ರಸಾದ್ ಅವರು ಕ್ರೀಡಾ ಪ್ರತಿಜ್ಞಾವಿಧಿ ಬೋಧಿಸಿದರು.

ಮೂರು ದಿನಗಳ ಕ್ರೀಡಾಕೂಟದಲ್ಲಿ 400 ಮೀಟರ್, 100 ಮೀಟರ್ ಓಟದ ಸ್ಪರ್ಧೆ, ಗುಂಡು ಎಸೆತ, ಉದ್ದ ಜಿಗಿತ, ಎತ್ತರ ಜಿಗಿತ, ಕಬಡ್ಡಿ, ವಾಲಿಬಾಲ್, ವೇಗ ನಡಿಗೆ, ಶೂಟಿಂಗ್, ಟಗ್ ಆಫ್ ವಾರ್, 4x400 ಮೀಟರ್ ರಿಲೇ, ಬ್ಯಾಡ್ಮಿಂಟನ್ ಮುಂತಾದ ಕ್ರೀಡೆಗಳು ನಡೆಯಲಿದ್ದು, ಡಿ. 8 ರಂದು ಕ್ರೀಡಾಕೂಟದ ಸಮಾರೋಪ ಸಮಾರಂಭ ನಡೆಯಲಿದ್ದು, ದಕ್ಷಿಣ ವಲಯ ಡಿಐಜಿ ಡಾ. ಎಂ.ಬಿ. ಬೋರಲಿಂಗಯ್ಯ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡು ಕ್ರೀಡೆಂುಲ್ಲಿ ವಿಜೇತರಾದವರಿಗೆ ಬಹುಮಾನ ವಿತರಿಸುವರು.

ಹೆಣ್ಣು ಮಕ್ಕಳು ಆರ್ಥಿಕವಾಗಿ ಸ್ವಾವಲಂಬಿಗಳಾಗಬೇಕು

ಬುದ್ಧ ವಂದನಾ ಕಾರ್ಯಕ್ರಮದಲ್ಲಿ ಚಿಂತಕ ಆರ್.ಮಹದೇವಪ್ಪ ಅಭಿಮತ



ನಿವೃತ್ತ ಶುಶ್ರೂಷಕರಾದ ರಾಜಮ್ಮ ಮತ್ತು ಕೆನರಾ ಬ್ಯಾಂಕ್‌ನ ನಿವೃತ್ತ ನೌಕರರಾದ ಬಿ.ಗಾಂುತ್ರಿದೇವಿ ಅವರನ್ನು ಸನ್ಮಾನಿಸಲಾಯಿತು.

ಮೈಸೂರು, ಡಿ.6–ಮಹಿಳೆಯರು ಆರ್ಥಿಕವಾಗಿ ಸ್ವಾವಲಂಬಿಗಳಾದಾಗ ಮಾತ್ರ ಕುಟುಂಬವನ್ನು ನಿಭಾಯಿಸಲು ಸಾಧ್ಯ ಎಂದು ಕರ್ನಾಟಕ ಬುದ್ಧ ಧರ್ಮ ಸಮಿತಿ ಪ್ರಧಾನ ಕಾರ್ಯದರ್ಶಿ ಆರ್.ಮಹದೇವಪ್ಪ ಹೇಳಿದರು.

ಮೈಸೂರಿನ ವಿಜಯನಗರ 1ನೇ ಹಂತದ ಡಿ.ಸಂಜೀವಯ್ಯ ಸ್ಮಾರಕ ಶಿಕ್ಷಣ ಸಂಸ್ಥೆ ಆವರಣದಲ್ಲಿರುವ ಬುದ್ಧ ವಿಹಾರದಲ್ಲಿ ಕರ್ನಾಟಕ ಬುದ್ಧ ಧಮ್ಮ ಸಮಿತಿ ವತಿಯಿಂದ ಆಯೋಜಿಸಿದ್ದ ಬುದ್ಧ ವಂದನಾ ಮತ್ತು ಸನ್ಮಾನ ಕಾರ್ಯಕ್ರಮದಲ್ಲಿ ಬುದ್ಧರ ಮೂರ್ತಿಗೆ ಪುಷ್ಪನಮನ ಸಲ್ಲಿಸಿ, ಮಾತನಾಡಿದರು. ಕುಟುಂಬ ನಿರ್ವಹಣೆಯಲ್ಲಿ ಮಹಿಳೆಯರ ಪಾತ್ರ ಪ್ರಮುಖವಾದದ್ದು, ಅವರಿಗೆ ಆರ್ಥಿಕ ಸ್ವಾವಲಂಬನೆ ಇಲ್ಲದಿದ್ದರೂ ಬದುಕುವ ಶಕ್ತಿ ಇರುತ್ತದೆ. ಗ್ರಾಮೀಣ ಭಾಗದ ಜನರಿಗೆ ಕೂಲಿನಾಲಿ ಮಾಡಿ ಸಾಕಾಗಿರುತ್ತದೆ. ತಮ್ಮ ಮಕ್ಕಳು ಓದಿ, ಕೆಲಸಕ್ಕೆ ಸೇರಿಕೊಂಡರೆ ನಮ್ಮನ್ನು ಸಲಹುತ್ತಾರೆ ಎಂಬ ನಂಬಿಕೆ ಪೋಷಕರಿಗೆ ಹಿಂದಿನಿಂದಲೂ ಇದೆ. ಈಗಲೂ ಇದೆ ಎಂದರು. ಇದೇ ವೇಳೆ ನಿವೃತ್ತ ಶುಶ್ರೂಷಕಿ ರಾಜಮ್ಮ ಮತ್ತು ಕೆನರಾ ಬ್ಯಾಂಕ್‌ನ ನಿವೃತ್ತ ನೌಕರರಾದ ಬಿ.ಗಾಯತ್ರಿ ದೇವಿ ಅವರನ್ನು ಸನ್ಮಾನಿಸಲಾಯಿತು.

ಚಂದ್ರಮುನಿ ಬಂತೇಜಿ, ಎಚ್.ಶಿವ ರಾಜ್, ಸಾವಕಯ್ಯ, ಆರ್.ನಟರಾಜ್, ರಾಜು, ನಿಸರ್ಗ ಸಿದ್ದರಾಜು, ಗೋಪಾಲ್, ಕೇಶವಯ್ಯ, ಲಿಂಗಣ್ಣಯ್ಯ, ಪುಟ್ಟಸ್ವಾಮಿ, ಅಕ್ಷಂುಾ, ಇಂದಿರಾ, ಲೋಲಾಕ್ಷಿ, ಡಾ.ಮಂಜು, ಶಶಿಕಲಾ, ಮಾ.ನಾಗಂುು, ಪ್ರೇಮಲತಾ, ಡಾ.ಅನಿತಾ, ಗಂಗಾಧರ್, ಮಹದೇವಸ್ವಾಮಿ ಇತರರಿದ್ದರು.

ನೃತ್ಯ ಕಾರ್ಯಕ್ರಮ

ಮೈಸೂರು, ಡಿ.6– ಮೈಸೂರಿನ ಶ್ರೀ ದುರ್ಗಾ ನೃತ್ಯ ಅಕಾಡೆಮಿ ಚಾರಿಟಬಲ್ ಟ್ರಸ್ಟ್ ವತಿಯಿಂದ ಅವಲೋಕನ ಶೀರ್ಷಿಕೆಯಡಿ 10ನೇ ವರ್ಷದ ನೃತ್ಯ ಕಾರ್ಯಕ್ರಮವನ್ನು ಡಿ.7 ಮತ್ತು 8ರಂದು ರಾಮಕೃಷ್ಣನಗರದ ರಮಾಗೋವಿಂದ ಸಭಾಂಗಣದಲ್ಲಿ ಏರ್ಪಡಿಸಲಾಗಿದೆ.

ಡಿ.7ರ ಕಾರ್ಯಕ್ರಮದಲ್ಲಿ ವಿಶೇಷ ಆಹ್ವಾನಿತರಾಗಿ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಮಾಜಿ ಪ್ರಧಾನ ಸಾರ್ವಜನಿಕ ಸಂಪರ್ಕಾಧಿಕಾರಿ ಡಾ.ಕೆ.ಜಯಪ್ರಕಾಶ್ ರಾವ್ ಭಾಗವಹಿಸಲಿದ್ದಾರೆ. ಸಂಜೆ 6ಕ್ಕೆ ಸಂಗೀತ ಹಾಗೂ ನಾಟಕ ಅಕಾಡೆಮಿ ಪ್ರಶಸ್ತಿ ಪುರಸ್ಕೃತರಾದ ಚೆನ್ನೈನ ಶಿಜಿತ್ ನಂಬಿಯಾರ್ ಹಾಗೂ ಪಾರ್ವತಿ ಮೆನನ್ ಅವರಿಂದ ಯುಗಳ ನೃತ್ಯದ 'ಮಾರ್ಗಂ' ವಿಷಯಾಧಾರಿತ ನೃತ್ಯ ಪ್ರದರ್ಶನ ಪ್ರಸ್ತುತ ಪಡಿಸಲಿದ್ದಾರೆ.

ಡಿ.8ರ ಕಾರ್ಯಕ್ರಮದಲ್ಲಿ ಮಹರ್ಷಿ ಪಬ್ಲಿಕ್ ಶಾಲೆ ವ್ಯವಸ್ಥಾಪಕ ಡಾ.ಭವಾನಿ ಶಂಕರ್, ಸರಿಗಮಪ ರನ್ನರ್ ಅಪ್ ಕು. ತನುಶ್ರೀ ರಾವ್ ಭಾಗವಹಿಸಲಿದ್ದಾರೆ. ಸಂಜೆ 4.30ಕ್ಕೆ ಶ್ರೀ ದುರ್ಗಾ ನೃತ್ಯ ಅಕಾಡೆಮಿಯ ಮೈಸೂರು ಹಾಗೂ ಕೊಳ್ಳೇಗಾಲ ಶಾಖೆಯ ವಿದ್ಯಾರ್ಥಿಗಳಿಂದ ಭರತನಾಟ್ಯ ಮತ್ತು ಸಂಜೆ 6ಕ್ಕೆ ಕು.ಕಾವ್ಯ ಕಾಶಿನಾಥನ್ ಅವರಿಂದ ಕರುನಾಡ ದಶ ದೇಗುಲ ದರ್ಶನ ಏಕವ್ಯಕ್ತಿ ನೃತ್ಯ ಪ್ರದರ್ಶನ ಪ್ರಸ್ತುತಪಡಿಸಲಿದ್ದಾರೆ.

ಅಭಿರುಚಿ ಬಳಗದಿಂದ ಕನ್ನಡ ಸಾಹಿತ್ಯೋತ್ಸವ– ಸಾಹಿತಿಗಳಿಂದ ಅನುಭವ ಹಂಚಿಕೆ, ಕವಿಗೋಷ್ಠಿ



'ಭುವನೇಶ್ವರದಿಂದ ಭೂತಾನ್‌ವರೆಗೆ' ಕೃತಿಯನ್ನು ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಬಿಡುಗಡೆ ಮಾಡಿದರು.

ಮೈಸೂರು, ಡಿ.6– ಅಭಿರುಚಿ ಬಳಗವು ಸಂಸ್ಥಾಪಕ ಎನ್.ವಿ.ರಮೇಶ್ ಅವರ 74ನೇ ಜನ್ಮದಿನದ ಅಂಗವಾಗಿ ಕೃಷ್ಣಮೂರ್ತಿಪುರಂನ ನಮನ ಕಲಾ ಮಂಟಪದಲ್ಲಿ ಭಾನುವಾರ ಏರ್ಪಡಿಸಿದ್ದ ಸಾಹಿತ್ಯೋತ್ಸವಕ್ಕೆ ಹಿರಿಯ ಪತ್ರಕರ್ತ ಅಂಶಿಪ್ರಸನ್ನಕುಮಾರ್ ಚಾಲನೆ ನೀಡಿದರು. ನಂತರ ಮಾತನಾಡಿ, ಓದುವುದರಿಂದ ಜ್ಞಾನಾರ್ಜನೆಯ ಜೊತೆಗೆ ಮನಸ್ಸಿಗೆ ನೆಮ್ಮದಿ ಸಿಗುತ್ತದೆ. ಆದ್ದರಿಂದ ಟಿವಿ, ಮೊಬೈಲ್ ಬದಲು ಸಾಹಿತ್ಯ ಕೃತಿಗಳು ಹಾಗೂ ಪತ್ರಿಕೆಗಳನ್ನು ಓದುವ ಕಡೆ ಗಮನ ನೀಡುವಂತೆ ಸಲಹೆ ಮಾಡಿದರು.

ಸಮಾಜ ಸೇವಕ ಕೆ. ರಘುರಾಂ ವಾಜಪೇಯಿ ಮಾತನಾಡಿ, ಗಡಿನಾಡು ಕಾಸರಗೋಡಿನಲ್ಲಿರುವಂತೆ ಪ್ರತಿಯೊಬ್ಬ ಕನ್ನಡಿಗನು ಕನ್ನಡ ಭಾಷೆಯ ಬಗ್ಗೆ ಪ್ರೀತಿ ಬೆಳೆಸಿಕೊಳ್ಳಬೇಕು ಎಂದು ಕರೆ ನೀಡಿದರು.

ಮಂಗಳೂರಿನ ಕೊಳ್ಚಪ್ಪೆ ಗೋವಿಂದಭಟ್, ಪ್ರದೀಪ್ ಕುಮಾರ್ ಮುಖ್ಯ ಅತಿಥಿಗಳಾಗಿದ್ದರು. ಲೇಖಕಿ ಬಿ.ಕೆ.ಮೀನಾಕ್ಷಿ ಕೃತಿ ಪರಿಚಯಿಸಿದರು. ಗಂಗಾವತಿಯ ಜಿ. ಶ್ರೀದೇವಿ ಕೃಷ್ಣಪ್ಪ ಹಿರೇಜಂತಕಲ್ ಅಧ್ಯಕ್ಷತೆ ವಹಿಸಿದ್ದರು. ಜಿಲ್ಲಾ ಕಸಾಪ ಗೌರವ ಕಾರ್ಯದರ್ಶಿ ಮ.ನ. ಲತಾ ಮೋಹನ್ ಇದ್ದರು.

ಹೇಮಲತಾ ಕುಮಾರಸ್ವಾಮಿ ಪ್ರಾರ್ಥಿಸಿದರು. ಉಮಾ ರಮೇಶ್ ಸ್ವಾಗತಿಸಿದರು. ಸುಮಾ ಪಂಚವಳ್ಳಿ ನಿರೂಪಿಸಿದರು. ರಾಜೇಂದ್ರಪ್ರಸಾದ್, ಡಿ.ಪುಟ್ಟಸ್ವಾಮಿ, ಸುಭಾಷಿಣಿ ಚಂದ್ರ ಕಾಸರಗೋಡು, ಶೀಲಾ ಶಂಕರನಾರಾಯಣ, ರಾಧಾಮಣಿ ಕೋಲಾರ, ಆರ್.ಎ. ಕುಮಾರ್, ತೇಜೋವತಿ, ಲಲಿತಾ ಸಾಂಸ್ಕೃತಿಕ ಕಾರ್ಯಕ್ರಮ ನಡೆಸಿಕೊಟ್ಟರು. ಲಕ್ಷ್ಮೀ ಭಟ್ ಮುಕ್ತಕಗಳನ್ನು ವಾಚಿಸಿದರು.

ಸುವರ್ಣ ರತ್ನ ಪ್ರಶಸ್ತಿ ಪ್ರದಾನ: ಸ್ಟೈಲ್ ಶಿವು, ಚಲನಚಿತ್ರ ಹಾಗೂ ರಂಗಭೂಮಿ ಕಲಾವಿದರು– ಬೆಂಗಳೂರು, ಅಂಶಿ ಪ್ರಸನ್ನಕುಮಾರ್, ಹಿರಿಂು ಪತ್ರಕರ್ತರು – ಮೈಸೂರು, ಮಡ್ಡೀಕೆರೆ ಗೋಪಾಲ್, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷರು–ಮೈಸೂರು, ವೈಲೇಶ್, ಚಾಲಕರು ಹಾಗೂ ಕನ್ನಡ ಸಾಹಿತ್ಯ ಪ್ರೇಮಿ– ಕೊಡಗು, ಬಿ.ಎನ್. ಸೌಮ್ಯಾ ಕೋಠಿ, ಆಧ್ಯಾತ್ಮಿಕ ಚಿಂತಕರು– ಮೈಸೂರು, ಕಂಠೆಯ್ಯ ಅರಳಿಕಟ್ಟಿಮಠ, ಸಮಾಜ ಸೇವಕರು – ಕೊಪ್ಪಳ, ಸಂತೋಷ್ ಜಾಧವ್, ಲೇಖಕರು– ಭದ್ರಾವತಿ, ಗಿರಿಮಲ್ಲಪ್ಪ ಹನುಮಂತಪ್ಪ ಪೂಜಾರಿ, ಚಿತ್ರಕಲಾವಿದರು– ಮುಧೋಳ, ಅನಿಲ್‌ರಾಜ, ಶಿಕ್ಷಣ ಹಾಗೂ ಸಾಹಿತ್ಯ– ಮೈಸೂರು ಅವರಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು.

ವಸತಿ ಗೃಹ ದುರಸ್ತಿ ಕಾಮಗಾರಿಗೆ ಚಾಲನೆ



ಮೈಸೂರು ನಗರ ಪಾಲಿಕೆ ವ್ಯಾಪ್ತಿಂು 50ನೇ ವಾರ್ಡ್‌ನ ಸುಣ್ಣದಕೇರಿಯಲ್ಲಿ ವಿವಿಧ ದುರಸ್ತಿ ಕಾಮಗಾರಿಗೆ ಶಾಸಕ ಟಿ.ಎಸ್.ಶ್ರೀವತ್ಸ ಚಾಲನೆ ನೀಡಿದರು. ಮುಖಂಡ ಜೋಗಪ್ಪ, ಮೈಸೂರು ನಗರ ಎಸ್‌ಟಿ ಮೋರ್ಚಾ ಪ್ರಧಾನ ಕಾರ್ಯದರ್ಶಿ ಕೃಷ್ಣಕುಮಾರ್, ಗೋಪಣ್ಣ, ಆಡಿಟರ್ ಲೋಕೇಶ್, ಕೆ.ಆರ್. ಕ್ಷೇತ್ರದ ಕಾರ್ಯದರ್ಶಿ ಲಿಂಗರಾಜು, 50ನೇ ವಾರ್ಡ್ ಉಸ್ತುವಾರಿ ಕಿಶೋರ್, ವಾರ್ಡ್ ಅಧ್ಯಕ್ಷ ಮಂಜುನಾಥ್, ಎಸ್‌ಟಿ ಮೋರ್ಚಾ ಅಧ್ಯಕ್ಷ ನಂದೀಶ್, ಪ್ರಧಾನ ಕಾರ್ಯದರ್ಶಿ ವಿಜಂುಾ, ಹೇಮಂತ್, ವಿನೋದ್, ಇಮ್ರಾನ್ ಉಪಸ್ಥಿತರಿದ್ದರು.

ನಿಧನ

ವೈ.ವ್ಯಾಸರಾವ್



ಮೈಸೂರು, ಡಿ. 6–ಮೈಸೂರಿನ ಕುವೆಂಪುನಗರ ನಿವಾಸಿ ಮತ್ತು ನಿವೃತ್ತ ಪೋಸ್ಟ್ ಮಾಸ್ಟರ್ ವೈ. ವ್ಯಾಸರಾವ್ (85) ಶುಕ್ರವಾರ ಬೆಳಗ್ಗೆ ನಿಧನರಾದರು. ಮೃತರು ಪತ್ನಿ ರೋಹಿಣಿ ರಾವ್, ಪುತ್ರ ರಘುನಂದನರಾವ್ (ಚಾರ್ಟರ್ಡ್ ಅಕೌಂಟೆಂಟ್), ಪುತ್ರಿಯರಾದ ಪೂರ್ಣಪ್ರಜ್ಞಾ ಕುಟೀರ ಆಯುರ್ವೇದ ಸೆಂಟರ್‌ನ ಡಾ.ಪೂರ್ಣಿಮಾ ಕೃಷ್ಣಮೂರ್ತಿ ಮತ್ತು ಪ್ರತಿಮಾ ಸೇರಿದಂತೆ ಅಪಾರ ಬಂಧು ಮಿತ್ರರನ್ನು ಅಗಲಿದ್ದಾರೆ.


ಅಂತ್ಯಕ್ರಿಯೆ ಚಾಮುಂಡಿಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಚಂದ್ರಶೇಖರ ಮೂರ್ತಿ



ಮೈಸೂರು, ಡಿ. 6– ಮೈಸೂರಿನ ಸಾತಗಳ್ಳಿ ನಿವಾಸಿ ಹಾಗೂ ನಿವೃತ್ತ ರೈಲ್ವೆ ಸೂಪರಿಂಟೆಂಡೆಂಟ್ ಚಂದ್ರಶೇಖರ ಮೂರ್ತಿ (66) ಗುರುವಾರ ನಿಧನರಾದರು. ಮೃತರು ಪತ್ನಿ ವನಜಾಕ್ಷಿ, ಮಕ್ಕಳಾದ ರಾಘವೇಂದ್ರ ಗೌರವ್ ಮತ್ತು ಮೌನ, ಅಳಿಯ ಚಂದ್ರಶೇಖರ್ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಚಾಮುಂಡಿಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ಶುಕ್ರವಾರ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಹೋಟೆಲ್ ಉದ್ಯಮಿ ಧರ್ಮಪ್ರಕಾಶ್




ಮೈಸೂರು, ಡಿ.6– ಮೈಸೂರಿನ ಇಟ್ಟಿಗೆಗೂಡಿನಲ್ಲಿರುವ ದರ್ಶನ್ ಪ್ಯಾಲೇಸ್ ಹೋಟೆಲ್ ಮಾಲೀಕರಾದ ಡಿ. ಧರ್ಮಪ್ರಕಾಶ್(74) ಶುಕ್ರವಾರ ರಾತ್ರಿ ಯಾದವಗಿರಿಯ ತಮ್ಮ ನಿವಾಸದಲ್ಲಿ ತೀವ್ರ ಹೃದಯಾಘಾತದಿಂದ ನಿಧನರಾದರು.

ದಿವಂಗತರು ಪತ್ನಿ ಸುಶೀಲಾದೇವಿ, ಪುತ್ರ ವಿಕ್ರಂ, ಪುತ್ರಿಯರಾದ ಪಿಂಕಿ, ಅರ್ಚನಾ ಮತ್ತು ಪೂನಂ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಮೃತರ ಪುತ್ರಿಂುೊಬ್ಬರು ಅಮೇರಿಕಾದಲ್ಲಿ ನೆಲೆಸಿದ್ದು, ಅವರು ಮೈಸೂರಿಗೆ ಹಿಂತಿರುಗಿದ ನಂತರ ಮೈಸೂರಿನ ಚಾಮುಂಡಿಬೆಟ್ಟದ ತಪ್ಪಲಿನಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಸಂತಾಪ: ಧರ್ಮಪ್ರಕಾಶ್ ಅವರ ನಿಧನಕ್ಕೆ ಮೈಸೂರು ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ ಹಾಗೂ ಪದಾಧಿಕಾರಿಗಳು ಸಂತಾಪ ಸೂಚಿಸಿದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

07.12.2024 ಶನಿವಾರ, ಮಳೆ ನಕ್ಷತ್ರ: ಜ್ಯೇಷ್ಠ, 02.12.2024 ರಿಂದ 15.12.2024
ಕ್ರೋಧಿನಾಮ ಸಂವತ್ಸರ, ದಕ್ಷಿಣಾಯನ, ಹೇಮಂತ ಋತು, ಮಾರ್ಗಶಿರ ಮಾಸ, ಶುಕ್ಲ ಪಕ್ಷ,
ತಿಥಿ: ಷಷ್ಠಿ, ನಕ್ಷತ್ರ: ಧನಿಷ್ಠ, ರಾಹುಕಾಲ: ಬೆಳಗ್ಗೆ 9 ರಿಂದ 10.30ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಕುತ್ತಿಗೆ ಹಾಗೂ ಬೆನ್ನು ನೋವಿಗೆ ಅಕ್ಯೂಪಂಕ್ಚರ್ ಮತ್ತು ಯೋಗ ಶಿಬಿರ, ಬೆನ್ನು ನೋವಿನ ಕಾರಣಗಳು, ಲಕ್ಷಣಗಳು ಮತ್ತು ಚಿಕಿತ್ಸೆ ಬಗ್ಗೆ ತಜ್ಞ ವೈದ್ಯರಿಂದ ಸಲಹೆ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9 ರಿಂದ.

■ **ಶ್ರೀರಾಮಕೃಷ್ಣ ವಿದ್ಯಾಶಾಲೆ :** ಕಾಲೇಜು ವಾರ್ಷಿಕೋತ್ಸವದ ಪ್ರಯುಕ್ತ ಬಹುಮಾನ ವಿತರಣೆ ಕಾರ್ಯಕ್ರಮ, ಮುಖ್ಯ ಅತಿಥಿಗಳು : ರಾಷ್ಟ್ರೀಯ ಶಿಕ್ಷಣ ಸಮಿತಿ ಅಧ್ಯಕ್ಷ ಡಾ.ಎಂ.ಪಿ.ಶ್ಯಾಮ್, ಅಧ್ಯಕ್ಷತೆ: ಶ್ರೀರಾಮಕೃಷ್ಣ ಆಶ್ರಮದ ಅಧ್ಯಕ್ಷರು ಹಾಗೂ ಶ್ರೀರಾಮಕೃಷ್ಣ ಮಿಷನ್ ಬೇಲೂರು ಮಠದ ಟ್ರಸ್ಟಿ ಸ್ವಾಮಿ ಮುಕ್ತಿದಾನಂದಜೀ ಮಹಾರಾಜ್, ಉಪಸ್ಥಿತರು : ಶ್ರೀರಾಮಕೃಷ್ಣ ವಿದ್ಯಾಶಾಲೆಯ ಮುಖ್ಯಸ್ಥ (ಕರೆಸ್ಪಾಂಡೆಂಟ್) ಸ್ವಾಮಿ ಯುಕ್ತೇಶಾನಂದಜೀ, ಶ್ರೀರಾಮಕೃಷ್ಣ ವಿದ್ಯಾಶಾಲೆಯ ಪ್ರಾಂಶುಪಾಲ ಟಿ.ಕೆ.ಚಂದ್ರಶೇಖರ್, ಸ್ಥಳ: ಶ್ರೀ ರಾಮಕೃಷ್ಣ ವಿದ್ಯಾಶಾಲೆ, ಯಾದವಗಿರಿ, ಬೆಳಗ್ಗೆ 9ಕ್ಕೆ.

■ **ರೋಟರಿ ಮೈಸೂರು ಮಿಡ್‌ಟೌನ್, ಸ್ಪೋರ್ಟ್ಸ್ ಅಂಡ್ ಕಲ್ಚರಲ್ ಅಕಾಡೆಮಿ ಫಾರ್ ಡಿಫರೆಂಟ್ಲಿ ಏಬಲ್ಡ್ :** ಬೆಳಗ್ಗೆ 9ಕ್ಕೆ ಬಾಂಧವ್ಯ ಕ್ರೀಡಾ ಮಹೋತ್ಸವ–2024ದ ಉದ್ಘಾಟನಾ ಸಮಾರಂಭ, ಸಾನ್ನಿಧ್ಯ: ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಮುಖ್ಯ ಅತಿಥಿಗಳು : ಎನ್.ರಂಗರಾವ್ ಅಂಡ್ ಸನ್ಸ್ ಪ್ರೈವೇಟ್ ಲಿಮಿಟೆಡ್ ಸಿಇಓ ಅರ್ಜುನ್ ರಂಗ, ಸಹಾಯಕ ಗೌರ್ನರ್ ರೋ. ಡಾ. ಕೆ.ಎ. ಪ್ರಹ್ಲಾದ್, ಬಾಂಧವ್ಯ ಛೇರ್ಮನ್ ರೋ. ಆರ್. ವೆಂಕಟೇಶ್, ಉಪಾಧ್ಯಕ್ಷ ಆರ್. ರವೀಂದ್ರ ಬಾಬು, ಕಮ್ಯೂನಿಟಿ ಸರ್ವೀಸ್ ನಿರ್ದೇಶಕ ರೋ. ಆರ್. ನಾಗರಾಜ್, ಎಸ್. ಕುಮಾರಸ್ವಾಮಿ, ಎಲಿಜರ್ ಮಿಲ್ಟನ್; ಸಂಜೆ 4.30ಕ್ಕೆ ಸಮಾರೋಪ ಸಮಾರಂಭ, ಮುಖ್ಯ ಅತಿಥಿಗಳು : ಹಿರಿಯ ರಂಗಭೂಮಿ ಕಲಾವಿದೆ ಶ್ರೀಮತಿ ಇಂದಿರಾ ನಾಯರ್, ಡಿಸ್ಟ್ರಿಕ್ಟ್ ಗೌರ್ನರ್ ಪಿ.ಕೆ.ರಾಮಕೃಷ್ಣ, ಸ್ಥಳ: ಓವಲ್ ಮೈದಾನ, ಮೈಸೂರು ವಿಶ್ವವಿದ್ಯಾನಿಲಯ.

■ **ರಾಮ್‌ಸನ್ಸ್ ಪ್ರತಿಷ್ಠಾನ:** ಬೊಂಬೆ ಮನೆ ದಸರೆ ಬೊಂಬೆ ಪ್ರದರ್ಶನ 20ನೇ ಅವತರಣಿಕೆ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, 91, ಆಮ್ರಪಾಲಿ ಸೀರೆ ಮಳಿಗೆ ಮೇಲೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ.

■ **ಕರ್ನಾಟಕ ರೋಲರ್ ಸ್ಕೇಟಿಂಗ್ ಸಂಸ್ಥೆ :** ರಾಷ್ಟ್ರ ಮಟ್ಟದ ರೋಲರ್ ಸ್ಕೇಟಿಂಗ್ ಚಾಂಪಿಯನ್‌ಶಿಪ್ ಪಂದ್ಯಾವಳಿ, ಸ್ಥಳ: ಉನ್ನತಿನಗರ ಬಡಾವಣೆ, ಬೆಳಗ್ಗೆ 10 ರಿಂದ.

■ **ಶ್ರೀ ಸೂತ್ರ ಆಯುರ್ಧಾಮ :** ಕೂದಲಿನ ಉದುರುವಿಕೆ, ಇತರ ಕೂದಲಿನ ಸಮಸ್ಯೆಗಳಿಗೆ ಉಚಿತ ವೈದ್ಯಕೀಯ ತಪಾಸಣಾ ಶಿಬಿರ, ಸ್ಥಳ: ಶ್ರೀ ಸೂತ್ರ ಆಯುರ್ಧಾಮ, ಚಾಮುಂಡಿಪುರಂ, ಬೆಳಗ್ಗೆ 10 ರಿಂದ.

■ **ಶ್ರೀ ಅಮೃತೇಶ್ವರಸ್ವಾಮಿ ದೇವಸ್ಥಾನದ ಶ್ರೀ ಸುಬ್ರಹ್ಮಣ್ಯಸ್ವಾಮಿ ಸನ್ನಿಧಿ:** ಷಷ್ಠಿ ಪ್ರಯುಕ್ತ ವಿಶೇಷ ಪೂಜೆ, ಶ್ರೀ ಸುಬ್ರಹ್ಮಣ್ಯಹೋಮ, ಕುಜದೋಷ, ನಾಗದೋಷ ನಿವಾರಣಾ ಹೋಮ, ಕಾಲಸರ್ಪಶಾಂತಿ ಹೋಮ ಹಾಗೂ ಸಂಜೆ ದೀಪಾರಾಧನೆ, ಸ್ಥಳ: ಶ್ರೀ ಅಮೃತೇಶ್ವರಸ್ವಾಮಿ ದೇವಸ್ಥಾನ, ದಿವಾನ್ಸ್ ರಸ್ತೆ, ಬೆಳಗ್ಗೆ 10ರಿಂದ.

■ **ದೀಪಾ ಸಂಯುಕ್ತ ಪಿಯು ಕಾಲೇಜು :** ಅಂತರ ಶಾಲಾ ಸ್ಪರ್ಧೆ, ಮುಖ್ಯ ಅತಿಥಿಗಳು : ಹಿರಿಂು ಉಪಾಧ್ಯಾಯ ಹೆಚ್.ಸಿ. ಮುರಳೀಧರ್, ಅಧ್ಯಕ್ಷತೆ : ದೀಪಾ ಶಿಕ್ಷಣ ಸಂಸ್ಥೆ ಅಧ್ಯಕ್ಷ ಎಂ. ರಾಮಪ್ಪ, ಸ್ಥಳ: ವಿವೇಕಾನಂದ ಸಭಾಂಗಣ, ಬೆಳಗ್ಗೆ 10.30ಕ್ಕೆ.

■ **ಮೈಸೂರು ವಿಶ್ವವಿದ್ಯಾನಿಲಂು, ಶಾಲೆಗಳಲ್ಲಿ ವಿಜ್ಞಾನ ಶಿಕ್ಷಣ ಕೇಂದ್ರ :** ಪ್ರೌಢಶಾಲಾ ವಿದ್ಯಾರ್ಥಿಗಳಲ್ಲಿ ವಿಜ್ಞಾನ ಕಲಿಕಾ ಆಸಕ್ತಿ ಮೂಡಿಸುವ ದೃಷ್ಟಿಯಿಂದ ವಿಜ್ಞಾನ ಸಂವಾದ ಕಾರ್ಯಕ್ರಮ, ಉಪಸ್ಥಿತರು : ವಿಶ್ರಾಂತ ಕುಲಪತಿ ಪ್ರೊ. ಪಿ. ವೆಂಕಟರಾಮಯ್ಯ, ನಿವೃತ್ತ ವಿಜ್ಞಾನಿ ಡಾ. ಭಾಗ್ಯಲಕ್ಷ್ಮಿ, ಪ್ರೊ. ಎಸ್.ಎನ್. ಹೆಗ್ಡೆ, ಡಾ. ಶಶಿಕಾಂತ್, ಪ್ರೊ. ಎಸ್.ಎನ್. ಪ್ರಸಾದ್, ಪ್ರೊ. ಬಸವರಾಜು ಮಧುಸೂದನ್, ಡಾ. ಎಂ.ಎಸ್. ಚಂದ್ರಶೇಖರ, ಸ್ಥಳ: ವಿಜ್ಞಾನ ಭವನ, ಮಾನಸಗಂಗೋತ್ರಿ, ಬೆಳಗ್ಗೆ 10.30ಕ್ಕೆ

■ **ಅಂಕಿತ ಪ್ರಕಾಶನ, ಬೆಂಗಳೂರು, ಶ್ರೀ ಜಯಚಾಮರಾಜ ಅರಸು ಎಜುಕೇಷನ್ ಟ್ರಸ್ಟ್ :** ಡಾ ಗಜಾನನ ಶರ್ಮರ ರಾಜಮಾತೆ ಕೆಂಪುನಂಜಮ್ಮಣ್ಣಿ ಎಂಬ 'ಮಾದರಿ ಮೈಸೂರಿನ ತಾಯಿಬೇರು' ಕೃತಿ ಬಿಡುಗಡೆ ಸಮಾರಂಭ, ಕೃತಿ ಲೋಕಾರ್ಪಣೆ: ರಾಜಮಾತೆ ಪ್ರಮೋದಾದೇವಿ, ಅಧ್ಯಕ್ಷತೆ : ಮೈಸೂರು ಲೋಕಸಭಾ ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಗೌರವ ಅತಿಥಿಗಳು: ವಿಭಾಗೀಯ ದಾಖಲೆಗಳ ಕಚೇರಿ ನಿವೃತ್ತ ಉಪ ನಿರ್ದೇಶಕರಾದ ಡಾ.ಜೆ.ವಿ.ಗಾಯತ್ರಿ, ಮಹಾರಾಣಿ ಮಹಿಳಾ ಕಲಾ ಕಾಲೇಜು ನಿವೃತ್ತ ಪ್ರಾಧ್ಯಾಪಕರಾದ ಡಾ. ಬಿ.ವಿ. ಸುಧಾಮಣಿ, ಸ್ಥಳ: ಜಗನ್ಮೋಹನ ಅರಮನೆ, ಸಂಜೆ 4:30ಕ್ಕೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 CFTRI ಶೋಧ – ಅನುಶೋಧ– ಪ್ರಾಯೋಜಿತ ಬಾನುಲಿ ಸರಣಿ, ಪ್ರಾಂಯೋಜಕರು : CSIR, CFTRI, Mysuru, 6.40 ಸಕ್ಕರೆ ನಾಡಿನ ಅಕ್ಕರೆಯ ಲೇಖಕರು, ಲೇಖನ ಹಾಗೂ ಪ್ರಸ್ತುತಿ : ಶಭಾನ ಮತ್ತು ಕೀರ್ತಿ. ಎಸ್. ಬೈಂದೂರು, ಪರಿಕಲ್ಪನೆ : ಅಬ್ದುಲ್ ರಶೀದ್, 6.50 ರೈತರಿಗೆ ಸಲಹೆ, 7.15 ಜೀವನ ಜೋಪಾನ– ಹೆಚ್‌ಐವಿ–ಅಂದು ಇಂದು, ಪ್ರಾಂಯೋಜಕರು – ಕರ್ನಾಟಕ ರಾಜ್ಯ ಏಡ್ಸ್ ನಿಯಂತ್ರಣ ಮಂಡಳಿ, 8.30 ಹಾದಿಯಲ್ಲಿ ಕಂಡ ಮುಖ–ಬಾನುಲಿ ಸರಣಿ, ಪ್ರಸ್ತುತಿ : ಅಬ್ದುಲ್ ರಶೀದ್, 9.00 ಚಿತ್ರಗೀತೆಗಳು, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ : ಕೆ.ಎಸ್. ಗೋಪಾಲಕೃಷ್ಣನ್–ಕೊಳಲು ವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ 'ನಮ್ಮೂರ್ ಹೆಸರು', ಪ್ರಸ್ತುತಿ : ಡಾ. ಮೈಸೂರು ಉಮೇಶ್

ಮಧ್ಯಾಹ್ನ: 12.35 ಆಯುಷ್‌ವಾಣಿ–ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು : ಆಯುಷ್ ಇಲಾಖೆ, ಕರ್ನಾಟಕ ಸರ್ಕಾರ, 12.40 ದೇವರನಾಮ, 12.45 ಜನಪದ ಸಂಗೀತ, 1.00 ಪ್ರಗತಿ ಪಥ, 1.20 ಭಾವಗೀತೆಗಳು, 2.40 ಹಿಂದಿ ಚಿತ್ರಗೀತೆಗಳು, 3.00 ಹಳ್ಳಿ ಹಾಡು, 3.30 ಮಕ್ಕಳ ಮಂಟಪ–ರಂಗರಾವ್ ಸ್ಮಾರಕ ವಿಕಲಚೇತನ ಹೆಣ್ಣು ಮಕ್ಕಳ ಉಚಿತ ವಸತಿಶಾಲೆ ಮಕ್ಕಳಿಂದ ಕಾರ್ಯಕ್ರಮ ವೈವಿಧ್ಯ, 4.00 ನಾಟಕ–ಅಭಿನವ ಶಾಕುಂತಲ, ರಚನೆ–ಜಯಶ್ರೀ ಹೆಗಡೆ, ನಿರ್ಮಾಣ– ಪ್ರಭುಸ್ವಾಮಿ ಮಳಿಮಠ್, 4.30 ನೆನಪಿನಂಗಳ (ಧ್ವನಿ ಭಂಡಾರದಿಂದ), 6.50 ಕೃಷಿರಂಗ: ಕಿಸಾನ್ ವಾಣಿ– ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ ಸಮಗ್ರ ಕೃಷಿಯ ಪ್ರಾಮುಖ್ಯತೆ ಈ ಕುರಿತು ಕೆ.ಆರ್. ಪೇಟೆ ತಾಲ್ಲೂಕು ಮಡುವಿನಕೋಡಿ ಗ್ರಾಮದ ಎಂ. ಜೆ. ಯೋಗೀಶ್ ಅವರೊಂದಿಗೆ ಸಂದರ್ಶನ. ಸಂದರ್ಶಕರು : ಎನ್.ಕೇಶವಮೂರ್ತಿ, 8.00 ಸವಿನೆನಪು–ಹಳೆಯ ಕನ್ನಡ ಚಿತ್ರಗೀತೆಗಳು, 9.30 ಯುವವಾಣಿ, 10.00 ರಾಷ್ಟ್ರೀಂು ಸಂಗೀತ ಕಾರ್ಯಕ್ರಮ, ಇಂದ್ರಾಣಿ ಮುಖರ್ಜಿ – ಗಾಯನ

■ **ಇಸ್ರೇ :** ಉರ್‌ಜವರನ್–2024, ರಾಷ್ಟ್ರೀಯ ತಾಂತ್ರಿಕ ವಿಚಾರ ಸಂಕಿರಣ, ಮುಖ್ಯ ಅತಿಥಿಗಳು: ವಿದ್ಯಾವರ್ಧಕ ಸಂಘದ ಕಾರ್ಯದರ್ಶಿ ಪಿ. ವಿಶ್ವನಾಥ್, ಪ್ರಾಜೆಕ್ಟ್ ಡೈರೆಕ್ಟರ್ (ನಿವೃತ್ತ) ಡಾ. ಟಿ.ಕೆ. ಬೇರಾ, ಅಧ್ಯಕ್ಷತೆ : ಇಸ್ರೇ ಅಧ್ಯಕ್ಷೆ ಅರಣಿ ಶ್ರೀನಿವಾಸ್, ಸ್ಥಳ: ಹೋಟೆಲ್ ಕಲ್ಯಾಣಿ, ರಿಂಗ್ ರಸ್ತೆ, ಸಂಜೆ 4.30ಕ್ಕೆ.

■ **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ಮಹಾಮೇಧಾನಂದ ಅವರಿಂದ ಸರ್ವೀಸ್ ಅಂಡ್ ಸಾಲ್ವೇಷನ್ – ಲೆಟರ್ಸ್ ಆಫ್ ಸ್ವಾಮಿ ವಿವೇಕಾನಂದ ಕುರಿತು ಪ್ರವಚನ, ಸ್ಥಳ: ಸ್ವಾಮಿ ಶಾಂಭವಾನಂದಜಿ ಸ್ಮಾರಕ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ಕಲಾಸಂಸ್ಥೆ :** ಬಾಲಸುಬ್ರಹ್ಮಣ್ಯ ಅವರಿಂದ ಬಾನ್ಸುರಿ ವಾದನ, ಪಂಡಿತ್ ಪರಮೇಶ್ವರ್ ಹೆಗಡೆ– ತಬಲಾ, ಸ್ಥಳ:ಸುರುಚಿ ರಂಗಮನೆ, ಕುವೆಂಪುನಗರ, ಸಂಜೆ 6.30ಕ್ಕೆ.

■ **ಶ್ರೀ ದುರ್ಗಾ ನೃತ್ಯ ಅಕಾಡೆಮಿ ಚಾರಿಟಬಲ್ ಟ್ರಸ್ಟ್ :** ಸಂಜೆ 4.45ಕ್ಕೆ ಅವಲೋಕನ ಶೀರ್ಷಿಕೆಯಡಿ 10ನೇ ವರ್ಷದ ನೃತ್ಯ ಕಾರ್ಯಕ್ರಮ, ವಿಶೇಷ ಆಹ್ವಾನಿತರು : ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಮಾಜಿ ಪ್ರಧಾನ ಸಾರ್ವಜನಿಕ ಸಂಪರ್ಕಾಧಿಕಾರಿ ಡಾ.ಕೆ. ಜಯಪ್ರಕಾಶ್ ರಾವ್, ಗೌರವಾನ್ವಿತ ಗುರುಗಳು : ರಾಸವೃಂದ ನೃತ್ಯ ಶಾಲೆ ನಿರ್ದೇಶಕರಾದ ವಿದುಷಿ ನಂದಿನಿ ಈಶ್ವರ್, ನಂದಿನಿ ನೃತ್ಯಾಲಯದ ವಿದ್ವಾನ್ ಆರ್.ಕಣ್ಣನ್, ನೃತ್ಯಾಲಯ ಟ್ರಸ್ಟ್ ನಿರ್ದೇಶಕರಾದ ಡಾ. ತುಳಸಿ ರಾಮಚಂದ್ರ, ನೃತ್ಯ ಭಾರತಿ, ಮಂಗಳೂರು, ಕಲಾಶ್ರೀ ಗುರು ಶ್ರೀಮತಿ ಗೀತಾ ಸರಳಾಯ, ನೂಪುರ ಕಲಾವಿದರು ಸಾಂಸ್ಕೃತಿಕ ಟ್ರಸ್ಟ್‌ನ ನಾಟ್ಯಾಚಾರ್ಯ ಕೆ. ರಾಮಮೂರ್ತಿರಾವ್, ಭರತಾಂಜಲಿ ನೃತ್ಯ ಶಾಲೆ ನಿರ್ದೇಶಕರಾದ ಕರ್ನಾಟಕ ಕಲಾಶ್ರೀ ಡಾ. ಶೀಲಾ ಶ್ರೀಧರ್, ಗುರುದೇವ ಅಕಾಡೆಮಿ ಆಫ್ ಫೈನ್ ಆರ್ಟ್ಸ್, ಮಂಡ್ಯ ನಿರ್ದೇಶಕರಾದ ವಿದುಷಿ ಡಾ. ಚೇತನಾ ರಾಧಾಕೃಷ್ಣ; ಸಂಜೆ 6 ರಿಂದ ಶಿಜಿತ್ ನಂಬಿಯಾರ್ ಹಾಗೂ ಪಾರ್ವತಿ ಮೆನನ್ ಅವರಿಂದ ಭರತನಾಟ್ಯ ಪ್ರಸ್ತುತಿ 'ಮಾರ್ಗಂ', ಉಂುದಶಂಕರ್ ಲಾಲ್–ನಟುವಾಂಗ, ಬಿನು ವೇಣುಗೋಪಾಲ್–ಹಾಡುಗಾರಿಕೆ, ಶಿವಪ್ರಸಾದ್–ಮೃದಂಗ, ಈಶ್ವರ್ ರಾಮಕೃಷ್ಣನ್–ಪಿಟೀಲು, ಸ್ಥಳ: ರಮಾಗೋವಿಂದ ಸಭಾಂಗಣ, ರಾಮಕೃಷ್ಣನಗರ.

ಸುತ್ತೂರಿನಲ್ಲಿಂದು, ನಂಜನಗೂಡು ತಾ.

■ **ಜೆಎಸ್‌ಎಸ್ ಮಹಾವಿದ್ಯಾಪೀಠ :** ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳ ಸಂಸ್ಮರಣಾ ಜೆಎಸ್‌ಎಸ್ ಅಂತರ ಸಂಸ್ಥೆಗಳ ಕ್ರೀಡಾಕೂಟ, ಸ್ಥಳ: ಸುತ್ತೂರು ಕ್ಷೇತ್ರ, ಬೆಳಗ್ಗೆ 10 ರಿಂದ.

ಬಿಜೆಪಿಯದ್ದು ಮನೆಯೊಂದು ಮೂರು ಬಾಗಿಲಾದ್ರೆ ಕಾಂಗ್ರೆಸ್‌ನದ್ದು ಊರು ಬಾಗಿಲು

ಮೆಡಿಕಲ್ ಮಾಫಿಯಾ ಕೈವಾಡ: ವಿಪಕ್ಷ ನಾಯಕ ಅಶೋಕ್ ಲೇವಡಿ

ಬೆಂಗಳೂರು, ಡಿ.6– ಬಿಜೆಪಿಯದ್ದು ಮನೆಯೊಂದು ಮೂರು ಬಾಗಿಲು ಅಂತಾರಲ್ಲ, ಕಾಂಗ್ರೆಸ್‌ನವರದ್ದು ಊರು ಬಾಗಿಲಾಗಿದೆಯಲ್ಲ ಎಂದು ವಿಪಕ್ಷ ನಾಯಕ ಆರ್. ಅಶೋಕ್ ಲೇವಡಿ ಮಾಡಿದ್ದಾರೆ.



ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾಂಗ್ರೆಸ್‌ನಲ್ಲಿ ಪವರ್ ಶೇರಿಂಗ್ ಫೈಟ್ ವಿಚಾರ ಕುರಿತು ಪ್ರತಿಕ್ರಿಯೆ ನೀಡಿದರು. ಪರಮೇಶ್ವರ್ ಈಗ ಮಾತಾಡಿದ್ದಾರಲ್ಲ, ಮೊದಲು ಸಿಎಂ ಆಗೋದಿಕ್ಕೆ ಅವರಿಗೇ ಆದ್ಯತೆ ಸಿಗಬೇಕು. ಅದಕ್ಕೇ ಅವರು ಮೊನ್ನೆ ಡಿಮ್ಯಾಂಡ್ ಇಟ್ಟಿದ್ದು. ಪರಮೇಶ್ವರ್ ಎರಡು ಸಲ ಅಧ್ಯಕ್ಷ ಆಗಿದ್ದವರು. ಸಿಎಂ ಆಗ್ತಾರೆ ಅಂತ ಅವರನ್ನು ಕಳೆದ ಸಲ ಸೋಲಿಸಲಾಯ್ತು. ಸಿಎಂ ಪೋಸ್ಟ್ ಬಿಟ್ಟುಕೊಡಲ್ಲ ಅಂತ ಸಿದ್ದರಾಮಯ್ಯ ಅವರೇ ಹೇಳಿದ್ದಾರಲ್ಲ, ಡಿಕೆಶಿಗೆ ಪೆನ್ನು ಪೇಪರ್ ಇನ್ನೆಲ್ಲಿ ಸಿಗುತ್ತೆ, ಬಿಜೆಪಿಯದ್ದು ಮನೆಯೊಂದು ಮೂರು ಬಾಗಿಲು ಅಂತಾರಲ್ಲ, ಕಾಂಗ್ರೆಸ್‌ನವ್ರದ್ದು ಊರು ಬಾಗಿಲಾಗಿದೆಯಲ್ಲ ಎಂದು ಲೇವಡಿ ಮಾಡಿದರು.

ಸಿಎಂ ಹೊಣೆ ಹೊರಬೇಕು: ಬಾಣಂತಿಯರ ಸಾವಿನ ಹೊಣೆ ಸಿಎಂ ಹೊತ್ತು ಸಿಎಂ ರಾಜೀನಾಮೆ ಕೊಡಬೇಕು. ಪುಡಿಗಳ ರಾಜೀನಾಮೆ ಬೇಡ. ಅಲ್ಲದೇ ಬಾಣಂತಿಯರ ಸಾವಿನ ಪ್ರಕರಣವನ್ನು ಲೋಕಾಯುಕ್ತ ತನಿಖೆಗೆ ವಹಿಸಬೇಕು. ನಮ್ಮ ಪಕ್ಷದಿಂದ, ಲೋಕಾಯುಕ್ತಕ್ಕೆ ದೂರು ನೀಡಲಿದ್ದೇವೆ ಎಂದು ಹೇಳಿದರು.

ಇನ್ನೂ ಸೆಂಟ್ರಲ್ ಲ್ಯಾಬ್‌ನಲ್ಲಿ ದ್ರಾವಣ ಬಳಕೆಗೆ ಯೋಗ್ಯ ಅಂತ ವರದಿ ಬಂದ ವಿಚಾರಕ್ಕೆ ಪ್ರತಿಕ್ರಿಯಿಸಿ, ಇವರು ಯಾವ ಸ್ಯಾಂಪಲ್ ಕಳಿಸಿದರು ಅಂತ ಬೇಕಲ್ಲ. ಕೇಂದ್ರದ ಯಾವುದೇ ಅಧಿಕಾರಿ ತಪ್ಪು ಮಾಡಿದರೂ ಕ್ರಮ ಆಗಲಿ, ಡ್ರಗ್ ಮಾಫಿಯಾ ಕೇಂದ್ರದ ಸಂಸ್ಥೆಗಳನ್ನು ಬಿಟ್ಟಿಲ್ಲ. ರಾಜ್ಯದಲ್ಲಿ ಕಳಪೆ ದ್ರಾವಣ ಖರೀದಿ ಹಿಂದೆ ಮೆಡಿಕಲ್ ಮಾಫಿಯಾ ಕೈವಾಡ ಇದೆ, ಈ ಸರ್ಕಾರದವರ ಕೈವಾಡ ಇದೆ ಎಂದು ಆರೋಪಿಸಿದರು.

ರಾಜ್ಯ ಆರೋಗ್ಯ ಇಲಾಖೆ ಅನಾರೋಗ್ಯ ಇಲಾಖೆ ಆಗಿದೆ. ಬಳ್ಳಾರಿ ಆಸ್ಪತ್ರೆಗೆ ನಾನೂ ಕೂಡ ಭೇಟಿ ಕೊಟ್ಟಿದ್ದೆ. ಐವಿ ದ್ರಾವಣ ಕಳಪೆಯಾಗಿತ್ತು, ಆದ್ದರಿಂದ ಬಾಣಂತಿಯರ ಸಾವಾಗಿದೆ. ಒಂದೇ ಗಂಟೆಯಲ್ಲಿ ಕಿಡ್ನಿ, ಲಿವರ್ ಫೇಲ್ ಆಗಿ ಸತ್ತಿದ್ದಾರೆ ಅಂತ ವೈದ್ಯರು ಹೇಳಿದ್ರು, ಮತ್ತೆ ಒಬ್ಬರು ಬಾಣಂತಿಯರ ಸಾವಾಗಿದೆ. ರಾಜ್ಯದಲ್ಲಿ ಕಳೆದ ತಿಂಗಳಲ್ಲಿ 111 ನವಜಾತ ಶಿಶುಗಳು, 29 ಬಾಣಂತಿಯರ ಸಾವಾಗಿದೆ. ಈ ಸಾವುಗಳಿಗೆ ನ್ಯಾಯ ಕೊಡೋರು ಯಾರು ಅಂತ ಪ್ರಶ್ನೆ ಮಾಡಿದರು.

ಬಾಣಂತಿ ಸಾವಾದ ದಿನವೇ ಹಾಸನ ಸಮಾವೇಶ: ಬಿಜೆಪಿ ಅವಧಿಯಲ್ಲಿ ಕೋವಿಡ್ ವೇಳೆ ಸಾವಾಗಿದೆ ಎಂದು ಆರೋಪ ಮಾಡುವ ಕಾಂಗ್ರೆಸ್‌ನವರು ಈಗ ಬಾಣಂತಿಯರ ಸಾವಿನ ಬಗ್ಗೆ ಏನಂತಾರೆ. ಬಾಣಂತಿ ಸಾವಾದ ದಿನವೇ ಹಾಸನ ಸಮಾವೇಶ ಮಾಡಿದ್ದೀರಿ. ಸಾವಿಗೆ ಒಂದು ಹನಿ ಕಣ್ಣಲ್ಲಿ ನೀರು ಹಾಕಿಲ್ಲ. ಸಮಾವೇಶದಲ್ಲಿ ವಿಪಕ್ಷಗಳನ್ನು ಬೈಯೋದು ಬಿಟ್ಟು, ಬಾಣಂತಿಯರ ಸಾವಿನ ಬಗ್ಗೆ ಒಂದು ಮಾತು ಆಡಲಿಲ್ಲ ಸಿಎಂ. 6 ತಿಂಗಳ ಹಿಂದೆಯೇ ಡ್ರಗ್ ಇಲಾಖೆ ಕಳಪೆ ದ್ರಾವಣ ಅಂತ ವರದಿ ಕೊಟ್ಟಿತ್ತು, ಸರ್ಕಾರ ಎಚ್ಚೆತ್ತುಕೊಳ್ಳಲಿಲ್ಲ ಎಂದು ಕಿಡಿ ಕಾರಿದರು.

20 ಕೋಟಿ ಎಲ್ಲಿಂದ ಬಂತು: ಸಿದ್ದರಾಮಯ್ಯಗೆ ಕಿಂಚಿತ್ ಕರುಣೆ ಬೇಡವಾ. ಮಕ್ಕಳು, ಬಾಣಂತಿಯರನ್ನು ಉಳಿಸೋ ಕೆಲಸ ಮಾಡದೇ ಇಂಥ ನೂರು ಸಮಾವೇಶ ಮಾಡಿದರೂ ವ್ಯರ್ಥ. ಪಾಪ, ಶಾಪದಲ್ಲೇ ನಿಮ್ಮ ಸರ್ಕಾರ ಸತ್ತು ಹೋಗಲಿದೆ. ಹಾಸನ ಸಮಾವೇಶಕ್ಕೆ 20 ಕೋಟಿ ಖರ್ಚಾಗಿದೆ, ಎಲ್ಲಿಂದ ಬಂತು, ಯಾರು ಕೊಟ್ಟರು ಎಂದು ಪ್ರಶ್ನೆ ಮಾಡಿದರು.

ಬಸ್, ವಾಟರ್ ಟ್ಯಾಂಕರ್ ನಡುವೆ ಭೀಕರ ಅಪಘಾತ: 8 ಜನರು ದುರ್ಮರಣ

ಕನೌಜ್: ಬಸ್ ಹಾಗೂ ವಾಟರ್ ಟ್ಯಾಂಕರ್ ನಡುವೆ ಸಂಭವಿಸಿದ ಭೀಕರ ಅಪಘಾತದಲ್ಲಿ 8 ಜನರು ಸಾವನ್ನಪ್ಪಿರುವ ಘಟನೆ ಉತ್ತರ ಪ್ರದೇಶದ ಕನೌಜ್ ಜಿಲ್ಲೆಯಲ್ಲಿ ನಡೆದಿದೆ.



ಲಕ್ನೋ–ಆಗ್ರಾ ಹೆದ್ದಾರಿಯಲ್ಲಿ ಈ ದುರಂತ ಸಂಭವಿಸಿದೆ. 7 ಜನರು ಸ್ಥಳದಲ್ಲೇ ಸಾವನ್ನಪ್ಪಿದ್ದು, ಓರ್ವ ಗಾಯಾಳು ಆಸ್ಪತ್ರೆಗೆ ಸಾಗಿಸುವಾಗ ಮಾರ್ಗ ಮಧ್ಯೆಯೇ ಸಾವನ್ನಪ್ಪಿದ್ದಾರೆ. ಅಪಘಾತದಲ್ಲಿ 19 ಜನರು ಗಂಭೀರವಾಗಿ ಗಾಯಗೊಂಡಿದ್ದಾರೆ. ಗಾಯಾಳುಗಳನ್ನು ಸೈಫಾಯಿ ವೈದ್ಯಕೀಯ ಕಾಲೇಜು ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಎಸ್.ಪಿ.ಅಮಿತ್ ಕುಮಾರ್ ತಿಳಿಸಿದ್ದಾರೆ. ಸ್ಲೀಪರ್ ಬಸ್ ಲಕ್ನೋದಿಂದ ಆಗ್ರಾದತ್ತ ಬರುತ್ತಿತ್ತು. ಈ ವೇಳೆ ರಾಂಗ್ ಸೈಡ್ ನಿಂದ ಬರುತ್ತಿದ್ದ ವಾಟರ್ ಟ್ಯಾಂಕರ್ ಗೆ ಡಿಕ್ಕಿ ಹೊಡೆದಿದೆ. ಅಪಘಾತದ ವೇಳೆ ಬಸ್ ನಲ್ಲಿ ಸುಮಾರು 40 ಜನರು ಇದ್ದರು. ಸ್ಥಳದಲ್ಲೇ 7 ಜನರು ಸೇರಿ ಒಟ್ಟು 8 ಜನರು ಮೃತಪಟ್ಟಿದ್ದಾರೆ.

ಹಾಸನ ಸಮಾವೇಶ ಯಶಸ್ಸಿಗೆ ಧನ್ಯವಾದ

ಮೈಸೂರು, ಡಿ.6– ಕಾಂಗ್ರೆಸ್ ಪಕ್ಷ, ವಿವಿಧ ಪ್ರಗತಿಪರ ಸಂಘಟನೆಗಳ ಒಕ್ಕೂಟದ ಆಶ್ರಯದಲ್ಲಿ ಹಾಸನದಲ್ಲಿ ನಡೆದ ಜನಕಲ್ಯಾಣ ಸಮಾವೇಶದಲ್ಲಿ ಪಾಲ್ಗೊಂಡು ಯಶಸ್ವಿಗೊಳಿಸಿದ ಲಕ್ಷಾಂತರ ಜನರಿಗೆ ಮತ್ತು ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಸಹಕರಿಸಿದವರಿಗೆ ಕರ್ನಾಟಕ ಪ್ರದೇಶ ಕುರುಬರ ಸಂಘದ ಮಾಜಿ ಅಧ್ಯಕ್ಷ ಬಿ. ಸುಬ್ರಹ್ಮಣ್ಯ ಧನ್ಯವಾದ ತಿಳಿಸಿದ್ದಾರೆ. ಈ ಸಮಾವೇಶ ಗುಣಾತ್ಮಕ ನಾಯಕತ್ವ ಬಲಪಡಿಸುವ ಸಮಾವೇಶವಾಗಿತ್ತು. ಸುದೀರ್ಘ 40 ವರ್ಷಗಳ ಕಾಲ ರಾಜ್ಯ ರಾಜಕಾರಣದಲ್ಲಿ ನಿಷ್ಕಳಂಕ ಹಾಗೂ ನೈತಿಕತೆಯ ಸಾಕ್ಷಿ ಪ್ರಜ್ಞೆಯಾಗಿರುವ ಸಿದ್ದರಾಮಯ್ಯ ಅವರು 2ನೇ ಬಾರಿಗೆ ಮುಖ್ಯಮಂತ್ರಿ ಆಗಿ ಜನಪರ ಆಡಳಿತ ನಡೆಸುತ್ತಿದ್ದಾರೆ. ಅವರ ನೈತಿಕತೆಗೆ ಬಲ ತುಂಬುವ ಕೆಲಸ ಇಲ್ಲಿ ಆಯಿತು ಎಂದು ಅವರು ತಿಳಿಸಿದ್ದಾರೆ.



ಪ್ಲಾಸ್ಟಿಕ್ ಬಳಕೆ ನಿಷೇಧಿಸಿ ಪರಿಸರವನ್ನು ಕಾಪಾಡಿ

ಹಸಿರು ನಮ್ಮ ಉಸಿರು

ನಕ್ಕರೆ ಅದೇ ಸ್ವರ್ಗ

ವಿದ್ಯಾರ್ಥಿ : ಸರ್ ಹತ್ತನೇ ತರಗತಿ ಕನ್ನಡ ಪುಸ್ತಕ ಇದೆಯೇ?
ಅಂಗಡಿಯವ : ಇಲ್ಲಪ್ಪಾ... ಐದನೇ ತರಗತಿ ಪುಸ್ತಕ ಇದೆ.
ವಿದ್ಯಾರ್ಥಿ : ಹಾಗಾದರೆ ಐದನೇ ತರಗತಿಯ ಎರಡು ಕನ್ನಡ ಪುಸ್ತಕ ಕೊಡಿ.

ಮೈಸೂರು ಮಿತ್ರ
ಶನಿವಾರ, 7 ಡಿಸೆಂಬರ್ 2024
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ.........

ಮನುಷ್ಯ ಉರಿಯುವ ದೀಪದಂತೆ, ಆಸಕ್ತಿ ಅದಕ್ಕೆ ಹಾಕುವ ಎಣ್ಣೆಯಂತೆ.
– ಡಾ. ಎ.ಪಿ.ಜೆ.ಅಬ್ದುಲ್ ಕಲಾಂ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಸ್ವಾರ್ಥ ಉಳಿಸಿದವ ಪಾಪಾತ್ಮ, ನಿಸ್ವಾರ್ಥ ಗಳಿಸಿದವ ಪುಣ್ಯಾತ್ಮ.

ನಿಮ್ಮ ಪತ್ರಗಳು

ಕಾಂಗ್ರೆಸ್ ಬಣಗಳ ರಾಜಕೀಯ ತಿರುವು ನಿಗೂಢ ಪ್ರಶ್ನೆ

ಮಾನ್ಯರೆ,

ಎರಡೂವರೆ ವರ್ಷದ ನಂತರ ಮುಖ್ಯಮಂತ್ರಿ ಸ್ಥಾನವನ್ನು ಬಿಟ್ಟುಕೊಡಬೇಕೆಂಬ ವಿಚಾರಕ್ಕೆ ಸಂಬಂಧಪಟ್ಟಂತೆ ಕಾಂಗ್ರೆಸ್ ಪಕ್ಷದಲ್ಲಿ ಸಣ್ಣದಾಗಿ ಕಿಡಿ ಹೊತ್ತಿಕೊಳ್ಳುತ್ತಿದೆ. ಇದು ಮುಂದೆ ಯಾವ ಜ್ವಾಲೆಯಾಗಿ ಹೊರಹೊಮ್ಮುತ್ತದೆ ಎಂಬುದೇ ಕೌತುಕದ ಪ್ರಶ್ನೆಯಾಗಿದೆ. ಕಾಂಗ್ರೆಸ್ ಹೈಕಮಾಂಡ್, ಸಿದ್ದರಾಮಯ್ಯ ಹಾಗೂ ಡಿ.ಕೆ.ಶಿವಕುಮಾರ್ ನಡುವೆ ರಹಸ್ಯ ಒಳ ಒಪ್ಪಂದವಾಗಿರುವ ಬಗ್ಗೆ ಸ್ವತಃ ಡಿಕೆಶಿ ಅವರೇ ಸಂದರ್ಶನವೊಂದರಲ್ಲಿ ಬಹಿರಂಗಪಡಿಸಿದ್ದಾರೆ. ಆದರೆ ಸಿದ್ದರಾಮಯ್ಯನವರು ಇದನ್ನು ನಯವಾಗೇ ಅಲ್ಲಗಳೆದಿದ್ದು, ಇದು ಮುಂದೆ ಕಾಂಗ್ರೆಸ್‌ನಲ್ಲಿ ನಡೆಯಬಹುದಾದ ಪ್ರಸಂಗಗಳಿಗೆ ಮುನ್ನುಡಿ ಬರೆದಂತಾಗಿದೆ. ರಾಜಕೀಯ ಎಂಬುದು ಫುಟ್‌ಬಾಲ್ ಆಟ ಅಲ್ಲ. ಅದೊಂದು ಚದುರಂಗದಾಟ ಎಂದು ಹೇಳುವ ಮೂಲಕ ಡಿ.ಕೆ.ಶಿವಕುಮಾರ್ ಅವರು ಪಕ್ಷದ ಸಾರ್ವಭೌಮತ್ವವನ್ನು ಸಂಪೂರ್ಣ ತಮ್ಮ ಹಿಡಿತಕ್ಕೆ ಸೆಳೆಯುವಲ್ಲಿ ಸಫಲರಾಗುತ್ತಿದ್ದು, ಇದಕ್ಕೆ ಹಾಸನದಲ್ಲಿ ನಡೆದ ಕಾಂಗ್ರೆಸ್ ಸಮಾವೇಶವೇ ಒಂದು ತಾಜಾ ಉದಾಹರಣೆ ಎನ್ನಬಹುದು.


ಮುಖ್ಯಮಂತ್ರಿ ಸ್ಥಾನಪಲ್ಲಟದ ದಿನಗಳು ಹತ್ತಿರ ಬರುತ್ತಿರುವಂತೆ ಜಾಗೃತರಾಗಿರುವ ಸಿದ್ದರಾಮಯ್ಯ ಬೆಂಬಲಿಗರು ಜೆಡಿಎಸ್ ಭದ್ರಕೋಟೆ ಹಾಸನದಲ್ಲಿ "ಸಿದ್ಧರಾಮೋತ್ಸವ" ಎಂಬ ಸಮಾವೇಷ ನಡೆಸಿ ಶಕ್ತಿ ಪ್ರದರ್ಶನಕ್ಕೆ ಅಣಿಯಾಗುತ್ತಿರುವುದನ್ನು ಅರಿತ ಡಿಕೆಶಿ ಅವರು ಸಮಾವೇಶದ ಸಂಪೂರ್ಣ ದಿಕ್ಕನ್ನೇ ಬದಲಿಸಿ ಜನಕಲ್ಯಾಣ ಸ್ವಾಭಿಮಾನಿ ಸಮಾವೇಷ ಎಂದು ಹೆಸರಿಡುವ ಮೂಲಕ ವಿರೋಧಿಗಳಿಗೆ ಚೆಕ್‌ಮೇಟ್ ಇಟ್ಟಂತೆ ಕಂಡುಬರುತ್ತಿದೆ. ಏನೇ ಇದ್ದರೂ ಗುಪ್ತಗಾಮಿನಿಯಂತೆ ಕಂಡುಬರುತ್ತಿರುವ ಕಾಂಗ್ರೆಸ್ ಬಣಗಳ ರಾಜಕೀಯ ಮುಂದೆ ಯಾವ ತಿರುವು ಪಡೆಯಬಹುದು ಎಂಬುದೇ ನಮ್ಮ ಮುಂದಿರುವ ನಿಗೂಢ ಪ್ರಶ್ನೆಯಾಗಿದೆ.

– ಹೆಚ್. ಆರ್. ಪ್ರಸಾದ್, ವಿವೇಕಾನಂದ ನಗರ, ಮೈಸೂರು.

ಪಾಲಿಕೆ ಕೌನ್ಸಿಲ್ ಸಭಾಂಗಣದ ಮೇಲ್ಛಾವಣಿ ಕಳಚಿ ಬಿದ್ದಿಲ್ಲ

ಮಾನ್ಯರೆ,

ಡಿ.3ರಂದು 'ಮೈಸೂರು ಮಿತ್ರ'ದಲ್ಲಿ 'ಕಳಚಿ ಬಿದ್ದ ಪಾಲಿಕೆ ಕೌನ್ಸಿಲ್ ಸಭಾಂಗಣದ ಅಲಂಕಾರಿಕ ಮೇಲ್ಪದರ' ಶೀರ್ಷಿಕೆಯಡಿ ವರದಿ ಪ್ರಕಟವಾಗಿತ್ತು. ಅದರಲ್ಲಿ



'ಮೈಸೂರು ಮಹಾನಗರ ಪಾಲಿಕೆ ಕಚೇರಿ ಪರಂಪರಿಕ ಕಟ್ಟಡದ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಕೌನ್ಸಿಲ್ ಸಭಾಂಗಣದ ಪ್ಲಾಸರ್ ಆಫ್ ಪ್ಯಾರೀಸ್ ಅಲಂಕಾರಿಕ ಮೇಲ್ಪದರ (ಫಾಲ್ಸ್ ಸೀಲಿಂಗ್)ಕಳಚಿ ಬಿದ್ದಿದೆ. ಭಾನುವಾರ ರಾತ್ರಿಯಿಂದ ನಿರಂತರವಾಗಿ ಸುರಿದ ಮಳೆಯಿಂದಾಗಿ ಪಾಲಿಕೆ ಕಚೇರಿ ಕಟ್ಟಡದ ಮೊದಲ ಮಹಡಿಯ ತಾರಸಿಯೇ ಸೋರುತ್ತಿದ್ದು, ಅದೇ ವೇಳೆ ಹೊಸ ಕೌನ್ಸಿಲ್ ಸಭಾಂಗಣದ ಒಂದು ಭಾಗದಲ್ಲಿ ಅಳವಡಿಸಿರುವ ಪ್ಲಾಸ್ಟರ್ ಆಫ್ ಪ್ಯಾರೀಸ್ ಅಲಂಕಾರಿಕ ಮೇಲ್ಪದರ ಕಳಚಿ ಬಿದ್ದಿದ್ದು, ಅದರಿಂದ ಇಡೀ ಸಭಾಂಗಣದಲ್ಲಿರುವ ಬೆಲೆ ಬಾಳುವ ಪೀಠೋಪಕರಣಗಳು ಹಾಗೂ ಅದರಲ್ಲಿರಿಸಲಾಗಿದ್ದ ಕೆಲ ಕಡತಗಳ ಬಂಡಲ್‌ಗಳು ಹಾಳಾಗಿವೆ ಎಂದು ಪ್ರಕಟಿಸಲಾಗಿದೆ.

ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಕೌನ್ಸಿಲ್ ಸಭಾಂಗಣವನ್ನು ಸುಮಾರು 20 ವರ್ಷಗಳ ಹಿಂದೆ ನಿರ್ಮಿಸಲಾಗಿದ್ದು, ಪ್ರಸ್ತುತ ಮೇಲ್ಛಾವಣಿಯನ್ನು ದುರಸ್ತಿಪಡಿಸಲಾಗುತ್ತಿದೆ. ದುರಸ್ತಿಯ ವೇಳೆ ಮೇಲ್ಛಾವಣಿಯ ಶೀಟ್‌ಗಳನ್ನು ಬದಲಾಯಿಸುತ್ತಿದ್ದು, ಬಲಾಯಿಸುವ ವೇಳೆ ಪ್ರಸ್ತುತ ಸಮಯದಲ್ಲಿ ಮಳೆಯ ನಿರೀಕ್ಷೆ ಇಲ್ಲದಿದ್ದರಿಂದ ತೆರೆದಿಟ್ಟ ಶೀಟ್‌ಗಳಿಂದ ಮೇಲ್ಛಾವಣಿಯು ತೆರೆದಿದ್ದು, ಮಳೆಯ ನೀರು ಕೌನ್ಸಿಲ್ ಸಭಾಂಗಣದಲ್ಲಿ ಬಿದ್ದು, ಫಾಲ್ಸ್ ಸೀಲಿಂಗ್ ಹಾಳಾಗಿದೆ. ಆದರೆ ಯಾವುದೇ ರೀತಿಯಲ್ಲಿ ಮೇಲ್ಛಾವಣಿ ಕಳಚಿ ಬಿದ್ದಿರುವುದಿಲ್ಲ. ಮಳೆಯು ಬಿದ್ದ ದಿನ ಭಾನುವಾರವಾದ್ದರಿಂದ ಕೆಲಸಗಾರರು ರಜೆಯಲ್ಲಿದ್ದು, ತಕ್ಷಣ ಯಾವುದೇ ಕ್ರಮ ಕೈಗೊಳ್ಳಲು ಸಾಧ್ಯವಾಗಿರುವುದಿಲ್ಲ. ಪ್ರಸ್ತುತ ಸಂಪೂರ್ಣ ಮೇಲ್ಛಾವಣಿಯು ಮುಚ್ಚಿದ್ದು, ಮುಂದಿನ ಮಳೆಗಳಲ್ಲಿ ಯಾವುದೇ ರೀತಿಯಲ್ಲೂ ಸೋರಿಕೆ ಉಂಟಾಗುವುದಿಲ್ಲ.

– ಕಾರ್ಯಪಾಲಕ ಅಭಿಯಂತರರು
ಸಿವಿಲ್ (ಪೂರ್ವ), ಮೈಸೂರು ನಗರ ಪಾಲಿಕೆ, ಮೈಸೂರು

ಬಾಬಾ ಸಾಹೇಬರಿಲ್ಲದ ಭಾರತಕ್ಕೆ 68 ವರ್ಷ!

ಮಾನ್ಯರೇ,

ಭಾರತದ ಸಂವಿಧಾನ ಶಿಲ್ಪಿ ಬಾಬಾ ಸಾಹೇಬ್ ಡಾ. ಬಿ.ಆರ್. ಅಂಬೇಡ್ಕರ್ ಅವರು ದೈಹಿಕವಾಗಿ ಭಾರತೀಯರಿಂದ ದೂರವಾಗಿ ಈ ದಿನಕ್ಕೆ ಸುಮಾರು 68 ವರ್ಷಗಳು ಕಳೆದಿದೆ. ತಮ್ಮ ಜೀವಿತದುದ್ದಕ್ಕೂ ದೇಶದ ಶೋಷಿತರು, ಮಹಿಳೆಯರು ಮತ್ತು ನೊಂದವರ ಪರವಾಗಿ ಎದೆಕೊಟ್ಟು ನಿಂತು ಸಾಮಾಜಿಕ, ಶೈಕ್ಷಣಿಕ ಮತ್ತು ಆರ್ಥಿಕ ವಲಯದಲ್ಲೂ ದೇಶದ ಪ್ರತಿಯೊಬ್ಬ ನಾಗರಿಕನಿಗೂ ಕೂಡ ಸಮಾನತೆ ಎಂಬುದು ಸಂಪೂರ್ಣವಾಗಿ ದೊರಕಬೇಕು ಎಂಬ ಆಶಯದೊಂದಿಗೆ ಸುದೀರ್ಘವಾದ ಹೋರಾಟ ಮಾಡಿದ ಮಹಾನಾಯಕ.

ಶತ ಶತಮಾನಗಳಿಂದ ದೌರ್ಜನ್ಯದ ದಬ್ಬಾಳಿಕೆಗೆ ಗುರಿಯಾಗಿದ್ದ ಅಸಂಖ್ಯಾತ ಜನರ ಬಾಳಿಗೆ ಬೆಳಕಾದ ಬಾಬಾ ಸಾಹೇಬರು ತಮ್ಮ ಆರೋಗ್ಯವನ್ನು ಲೆಕ್ಕಿಸದೆ ನನ್ನ ಜನ ಅಂದರೆ ಭಾರತೀಯರು ಸಮಾನತೆಯಿಂದ ಬದುಕುವ ಭಾತೃತ್ವದ ವಾತಾವರಣವನ್ನು ನಿರ್ಮಿಸುವಲ್ಲಿ ಮತ್ತು ನಿರಂತರವಾಗಿ ಅಧ್ಯಯನ ಮಾಡುವುದರಲ್ಲಿ ತಮ್ಮನ್ನು ತಾವೇ ತೊಡಗಿಸಿಕೊಂಡು ಆರೋಗ್ಯದ ಬಗ್ಗೆ ಕಾಳಜಿ ವಹಿಸದೆ ಭಾರತೀಯರಿಗಾಗಿ ದುಡಿದ ಮೇರು ಪರ್ವತ ಬಾಬಾಸಾಹೇಬರು. ಸಂವಿಧಾನವನ್ನು ಈ ದೇಶಕ್ಕೆ ನೀಡುವುದರ ಮೂಲಕ ಸಮಾಜದ ಕಟ್ಟ ಕಡೆಯ ವ್ಯಕ್ತಿಯು ಕೂಡ ಸಮಾನತೆಯಿಂದ ಬದುಕನ್ನು ಕಟ್ಟಿಕೊಳ್ಳಬಹುದಾದ ಸಾಮಾಜಿಕ ಹಕ್ಕುಗಳನ್ನು ನೀಡಿ ಸಮಗ್ರ ಭಾರತೀಯರ ಧ್ವನಿಯಾಗಿದ್ದ ಬಾಬಾ ಸಾಹೇಬ್ ಡಾ. ಬಿ.ಆರ್.ಅಂಬೇಡ್ಕರ್ ಅವರನ್ನು ನಾವು ಕಳೆದುಕೊಂಡು ಹಿಂದಿಗೆ 68 ವರ್ಷಗಳು ಕಳೆದಿದ್ದರೂ ಬಾಬಾ ಸಾಹೇಬರ ಚಿಂತನೆಗಳು ಮತ್ತು ಆಲೋಚನೆಗಳು ಇನ್ನು ಸಾವಿರ ವರ್ಷಗಳು ಕಳೆದರೂ ಜೀವಂತ ಎನ್ನುವುದಕ್ಕೆ ಸಾಕ್ಷಿ ಭಾರತದ ಪವಿತ್ರ ಗ್ರಂಥ ಸಂವಿಧಾನವೇ ಆಗಿದೆ.

–ಪವನ್ ಜಯರಾಂ, ಸಿದ್ದಯ್ಯನಪುರ, ಚಾಮರಾಜನಗರ.

ಚಿನ್ನಕ್ಕಿಂತ ಅನ್ನ ಮುಖ್ಯ ಎಂದವರು ರಾಜಮಾತೆ ಕೆಂಪನಂಜಮ್ಮಣ್ಣಿ

ವಸಾಹತುಶಾಹಿ ಬ್ರಿಟಿಷರಿಂದ 1881ರ ಮಾರ್ಚ್ ತಿಂಗಳಲ್ಲಿ ಮೈಸೂರು ಒಡೆಯರ್ ವಂಶದ ಹತ್ತನೇ ಚಾಮರಾಜೇಂದ್ರ ಒಡೆಯರ್ ಅವರಿಗೆ ಸಂಸ್ಥಾನದ ಆಡಳಿತ ಹಸ್ತಾಂತರವಾಗುವ ಮೂಲಕ ಆಧುನಿಕತೆ ಮತ್ತು ಅಭಿವೃದ್ಧಿಯ ಹೊಸ ಶಕೆ ತೆರೆದುಕೊಂಡಿತು. ಜನಪರ ಮತ್ತು ಅಭಿವೃದ್ಧಿಪರ ಆಡಳಿತದ ಮೂಲಕ ಚಾಮರಾಜೇಂದ್ರ ಒಡೆಯರ್, ಭೀಕರ ಬರಗಾಲಕ್ಕೆ ಸಿಲುಕಿ ಹೈರಾಣಾಗಿದ್ದ ಸಂಸ್ಥಾನದ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಿದರು. ರಾಜ್ಯದಲ್ಲಿ ಹಲವು ಹೊಸ ಪ್ರಗತಿಪರ ಕಾರ್ಯಗಳಿಗೆ ನಾಂದಿ ಹಾಡಿದರು. ತಮ್ಮಷ್ಟೇ ಆಧುನಿಕ ದೃಷ್ಟಿಕೋನ ಹೊಂದಿದ್ದ ಇವರ ಧರ್ಮಪತ್ನಿ, ಮಹಾರಾಣಿ ಕೆಂಪನಂಜಮ್ಮಣ್ಣಿಯವರ ಪಾತ್ರ ಶ್ಲಾಘನೀಯ. ರಾಜ್ಯದಲ್ಲಿ ಶಿಕ್ಷಣ, ಕೈಗಾರಿಕೆ, ನೈರ್ಮಲ್ಯ, ಕೃಷಿ, ಕೈಗಾರಿಕೆ, ಗಣಿಗಾರಿಕೆ, ಹೀಗೆ ಹಲವು ಕ್ಷೇತ್ರಗಳ ಪ್ರಗತಿಗೆ ದಂಪತಿ ಕಾರಣರಾದರು. ಇದೇ ವೇಳೆಗೆ ರಾಜ್ಯಕ್ಕೆ ಅನಾಮಿಕರಾಗಿ ಆಗಮಿಸಿದ ಸ್ವಾಮಿ ವಿವೇಕಾನಂದರ ಆಧ್ಯಾತ್ಮಿಕ ಪ್ರಭಾವದಿಂದ ಪೌರಾತ್ಯರ ಆಧ್ಯಾತ್ಮಿಕ ಮತ್ತು ಪಾಶ್ಚಾತ್ಯರ ಲೌಕಿಕ ವಿದ್ಯೆಗಳೆರಡನ್ನೂ ಒಗ್ಗೂಡಿಸಿ ಅಭಿವೃದ್ಧಿಯ ಹೊಸ ಹಾದಿಯನ್ನೇ ನಿರ್ಮಿಸಿದರು. ಮುಂದೆ ಸ್ವಾಮಿ ವಿವೇಕಾನಂದರು ಸೆಪ್ಟೆಂಬರ್ ಹನ್ನೊಂದರ ಚಿಕಾಗೋ ಸರ್ವಧರ್ಮ ಸಮ್ಮೇಳನಕ್ಕೆ ತೆರಳಲು ಆರ್ಥಿಕ ಸಹಾಯವನ್ನೂ ಮಾಡಿದರು.

1894ರಲ್ಲಿ ಜನಾನುರಾಗಿ ದೊರೆ ಚಾಮರಾಜೇಂದ್ರ ಒಡೆಯರು ಡಿಫ್ತೀರಿಯಾ ರೋಗಕ್ಕೆ ತುತ್ತಾಗಿ ದೂರದ ಕಲ್ಕತ್ತಾದಲ್ಲಿ ಮರಣಹೊಂದಿದ ನಂತರ ರಾಜ್ಯದ ಮತ್ತು ಪ್ರಜೆಗಳ ಹಿತದೃಷ್ಟಿಯಿಂದ ಕೆಂಪನಂಜಮ್ಮಣ್ಣಿಯವರು ರೀಜೆಂಟ್ ಹುದ್ದೆಯನ್ನು ಸ್ವೀಕರಿಸಿ, ತಮ್ಮ ಪತಿಯ ಕನಸನ್ನು ಈಡೇರಿಸಿದರು. ರಾಜ್ಯವನ್ನು ಆರ್ಥಿಕವಾಗಿ ಸುಭದ್ರಗೊಳಿಸುವುದರ ಜೊತೆಗೆ ಮಹಿಳೆಯರ ಶಿಕ್ಷಣ, ವಿಧವಾ ಪುನರ್ವಸತಿ, ಆರೋಗ್ಯ, ನೈರ್ಮಲ್ಯ, ಕೃಷಿ ಕೈಗಾರಿಕೆಗಳ ಉತ್ತೇಜನಕ್ಕೆ ಶ್ರಮಿಸಿದರು. ಬೆಂಗಳೂರಿಗೆ ಕುಡಿಯುವ ನೀರು ಕಲ್ಪಿಸಲು ಹೆಸರಘಟ್ಟ ಯೋಜನೆ ಮತ್ತು ಮೈಸೂರು ನಗರಕ್ಕೆ ಚಾಮರಾಜ ವಾಟರ್ ವರ್ಕ್ಸ್ ಆರಂಭಿಸಿ, ಜನರಿಗೆ ಕೊಳಾಯಿ ನೀರು ಒದಗಿಸಿದರು. ಬೆಂಗಳೂರಿನಲ್ಲಿ ಭಾರತದಲ್ಲಿಯೇ ದೊಡ್ಡದೆನ್ನಿಸಿದ್ದ ವಿಕ್ಟೋರಿಯಾ ಆಸ್ಪತ್ರೆ ಸ್ಥಾಪಿಸಿ, ಜನತೆಗೆ ಆರೋಗ್ಯ ರಕ್ಷಣೆ ನೀಡಿದರು. ಮಾರೀಕಣಿವೆಯಲ್ಲಿ ಆ ಕಾಲಕ್ಕೆ ಭಾರತದಲ್ಲೇ ಬೃಹತ್ ಎನ್ನಿಸಿದ್ದ ವಾಣಿವಿಲಾಸ ಸಾಗರ ಜಲಾಶಯವನ್ನು ನಿರ್ಮಿಸಿ, ಕೃಷಿಕ್ರಾಂತಿಗೂ ನೆರವಾದರು.


ಶಿವನಸಮುದ್ರದಲ್ಲಿ ಭಾರತದ ಮೊದಲ ಬೃಹತ್ ವಿದ್ಯುತ್ ಸ್ಥಾವರ ನಿರ್ಮಿಸಿ, ಪ್ರಪಂಚದಲ್ಲೇ ಉದ್ದವಾದ ಪ್ರಸರಣ ಮಾರ್ಗದ ಮೂಲಕ ಕೋಲಾರದ ಚಿನ್ನದ ಗಣಿಗೆ ವಿದ್ಯುತ್ ವ್ಯವಸ್ಥೆ ಒದಗಿಸಿದರು. ಈ ಮೂಲಕ 1905ರಲ್ಲಿ ಬೆಂಗಳೂರು ಮತ್ತು 1908ರಲ್ಲಿ ಮೈಸೂರಿಗೆ ವಿದ್ಯುತ್ ವ್ಯವಸ್ಥೆಗೆ ಅಡಿಗಲ್ಲು ಹಾಕಿದರು. ವಿದ್ಯಾರ್ಥಿನಿಯರಿಗೆ ಹಾಸ್ಟೆಲ್, ವಿದ್ಯಾರ್ಥಿ ವೇತನ, ಹಿಂದುಳಿದವರು ಶಿಕ್ಷಣ ಪಡೆಯಲು ಪ್ರೋತ್ಸಾಹ, ಇಂತಹ ಹತ್ತಾರು ಕಾರ್ಯಕ್ರಮಗಳಿಂದ ಸಮಾಜದಲ್ಲಿ ಸ್ತ್ರೀ ಸಬಲತೆಗೆ ಇನ್ನಿಲ್ಲದ ಆದ್ಯತೆ ನೀಡಿದರು.



ರಾಜಮಾತೆ ಕೆಂಪುನಂಜಮ್ಮಣ್ಣಿ

ಇಂದು ರಾಜಮಾತೆ ಕೆಂಪನಂಜಮ್ಮಣ್ಣಿ, ಮಾದರಿ ಮೈಸೂರಿನ ತಾಯಿಬೇರು ಕೃತಿ ಬಿಡುಗಡೆ

ಬೆಂಗಳೂರಿನ ಅಂಕಿತ ಪ್ರಕಾಶನ, ಶ್ರೀ ಜಯಚಾಮರಾಜ ಅರಸು ಎಜುಕೇಷನ್ ಟ್ರಸ್ಟ್ ಸಂಯುಕ್ತ ಆಶ್ರಯದಲ್ಲಿ ಡಾ ಗಜಾನನ ಶರ್ಮರ ರಾಜಮಾತೆ ಕೆಂಪುನಂಜಮ್ಮಣ್ಣಿ 'ಮಾದರಿ ಮೈಸೂರಿನ ತಾಯಿಬೇರು' ಕೃತಿಯನ್ನು ನಾಳೆ (ಡಿ.7) ಸಂಜೆ 4:30ಕ್ಕೆ ಮೈಸೂರಿನ ಜಗನ್ಮೋಹನ ಅರಮನೆಯಲ್ಲಿ ರಾಜಮಾತೆ ಪ್ರಮೋದಾದೇವಿ ಬಿಡುಗಡೆ ಮಾಡುವರು.



ಮೈಸೂರು ಲೋಕಸಭಾ ಸಂಸದರಾದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಅಧ್ಯಕ್ಷತೆ ವಹಿಸಲಿದ್ದು, ಗೌರವ ಅತಿಥಿಗಳಾಗಿ ವಿಭಾಗೀಯ ದಾಖಲೆಗಳ ಕಚೇರಿ ನಿವೃತ್ತ ಉಪ ನಿರ್ದೇಶಕರಾದ ಡಾ. ಜೆ.ವಿ. ಗಾಯತ್ರಿ, ಮಹಾರಾಣಿ ಮಹಿಳಾ ಕಲಾ ಕಾಲೇಜು ನಿವೃತ್ತ ಪ್ರಾಧ್ಯಾಪಕರಾದ ಡಾ. ಬಿ.ವಿ. ಸುಧಾಮಣಿ ಭಾಗವಹಿಸುವರು.

ಮುಖ್ಯವಾಗಿ ಸ್ವಾಮಿ ವಿವೇಕಾನಂದರ ಪ್ರೇರಣೆಯಂತೆ ಜೇಮ್‌ಶೇಠಜೀ ಟಾಟಾರವರು ಟಾಟಾ ವಿಜ್ಞಾನ ಮಂದಿರದ ಸ್ಥಾಪನೆಗೆ ಮುಂದಾದಾಗ ಬೆಂಗಳೂರಿನ ಆಯಕಟ್ಟಿನ ತಾಣದಲ್ಲಿ ಸುಮಾರು 400 ಎಕರೆ ಭೂಮಿ ಮತ್ತು ಅಪಾರ ಧನ ಸಹಾಯ ಮಾಡಿದರು. ಆ ಮೂಲಕ ಬೆಂಗಳೂರಿನಲ್ಲಿ ವಿಜ್ಞಾನ ಶಿಕ್ಷಣ ಮತ್ತು ಸಂಶೋಧನೆ ಆರಂಭಕ್ಕೆ ಕಾರಣರಾದರು. ಬೆಂಗಳೂರು ಪ್ರಸ್ತುತ ಐಟಿ–ಬಿಟಿ ನಗರವಾಗಲು ಮುಖ್ಯ ಕಾರಣಕರ್ತರು ರಾಜಮಾತೆ ಕೆಂಪನಂಜಮ್ಮಣ್ಣಿಯವರು. ಇಷ್ಟು ಮಾತ್ರವಲ್ಲದೆ ರಾಜ್ಯದ ಅಂದಿನ ಒಂಭತ್ತೂ ಜಿಲ್ಲೆಗಳಲ್ಲಿನ ಪಟ್ಟಣಗಳ ಅಭಿವೃದ್ಧಿ, ರಸ್ತೆ, ಸೇತುವೆ, ಕುಡಿಯುವ ನೀರು, ಶಿಕ್ಷಣ ಸಂಸ್ಥೆಗಳು ಹೀಗೆ ಬಹುತೇಕ ಗ್ರಾಮ, ಪಟ್ಟಣಗಳ ಅಭಿವೃದ್ಧಿಗೆ ಕಾರಣರಾದವರು ರಾಜಮಾತೆ ಕೆಂಪನಂಜಮ್ಮಣ್ಣಿ. ಬೆಂಗಳೂರಿನಲ್ಲಿ ಬಸವನಗುಡಿ, ಮಲ್ಲೇಶ್ವರಂ ಮುಂತಾದ ಬಡಾವಣೆಗಳು ಮಾತ್ರವಲ್ಲದೆ ಮೈಸೂರಿನಲ್ಲೂ ಹೊಸ ಬಡಾವಣೆಗಳು, ಅಗಲವಾದ ರಸ್ತೆಗಳು, ಕಟ್ಟಡಗಳು ಹೀಗೆ ಆಧುನೀಕರಣಕ್ಕೆ ಅಡಿಪಾಯ ಹಾಕಿದವರು ರಾಜಮಾತೆ ಕೆಂಪನಂಜಮ್ಮಣ್ಣಿ.

ಮೈಸೂರಿನ ಹಳೆಯ ಕಟ್ಟಿಗೆ ಅರಮನೆ ಅಗ್ನಿಗೆ ಆಹುತಿಯಾಗಿ ಭಗ್ನಗೊಂಡಾಗ, ಈಗಿನ ಬೃಹತ್ ಸುಂದರ ಅರಮನೆಯನ್ನು ಕಟ್ಟಿಸಿದವರು ಈ ತಾಯಿ. ಹೀಗೆ ರಾಜ್ಯದ ಅಭಿವೃದ್ಧಿಯ ಹೆಬ್ಬಾಗಿಲು ತೆರೆದು ಹೊಸ ಶತಮಾನಕ್ಕೆ ಸಂಸ್ಥಾನವನ್ನು ಸಜ್ಜುಗೊಳಿಸಿದವರು. ತಮ್ಮ ಇಬ್ಬರೂ ಗಂಡು ಮಕ್ಕಳಿಗೆ ರಾಜಯೋಗ್ಯ ಶಿಕ್ಷಣ ಮತ್ತು ಉತ್ತಮ ವ್ಯಕ್ತಿತ್ವವನ್ನು ಕಟ್ಟಿಕೊಟ್ಟರು. ಮಹಾತ್ಮಾಗಾಂಧೀಜಿಯವರಿಂದ ರಾಜರ್ಷಿ ಎಂಬ ಬಿರುದು ಪಡೆದ ನಾಲ್ವಡಿ ಕೃಷ್ಣರಾಜ ಒಡೆಯರಂತಹ ಮುತ್ಸದ್ದಿ ಮಹಾರಾಜರನ್ನು ನೀಡಿದ ಮಹಾತಾಯಿ.

ಅರಮನೆಯ ಚಿನ್ನವನ್ನು ಒತ್ತೆಯಿಟ್ಟು ಕೃಷ್ಣರಾಜಸಾಗರ ಜಲಾಶಯವನ್ನು ನಿರ್ಮಿಸಿ, ಮಂಡ್ಯ ಸೀಮೆ ಆಹಾರಧಾನ್ಯಗಳ ಕಣಜವಾಗಲು ರಾಜಮಾತೆ ಕೆಂಪನಂಜಮ್ಮಣ್ಣಿಯವರೇ ಕಾರಣ. ರಾಜಮಾತೆಯ ಈ ಗುಣ ಚಿನ್ನಕ್ಕಿಂತ ಅನ್ನ ಮುಖ್ಯ ಎಂಬ ಸಿದ್ಧಾಂತವನ್ನು ಜಗತ್ತಿಗೆ ಸಾರಿತು. ನೆಲದಾಳದಲ್ಲಿ ಬೇರುಬಿಟ್ಟ ದೇಶಿ ಸೊಗಡನ್ನು ಉಳಿಸಿಕೊಂಡೇ ಆಧುನಿಕತೆಯ ಅಂಬರದಲ್ಲಿ ಹೊಸ ಚಿಗುರಿನೊಂದಿಗೆ ಹರಡಿಕೊಂಡಿದ್ದು ವೈಶಿಷ್ಟ್ಯ. ರಾಜಮಾತೆಯಾದರೂ ಘೋಷಾ ಬಂಡಿಯಲ್ಲೇ ರೈಲುನಿಲ್ದಾಣಕ್ಕೆ ಹೋಗಿ, ರೈಲುಗಾಡಿಯ ತೆರೆದ ಬೋಗಿಯಲ್ಲೇ ಸಂಚರಿಸುವ ಮೂಲಕ ಸರಳತೆ ಮಹತ್ವ ಸಾರಿದರು. ಇಂತಹ ರಾಜಮಾತೆಯ ಎಷ್ಟೇ ಗುಣಗಾನ ಮಾಡಿದರೂ ಸಾಲದು. ಅವರಿಗೆ ಕೃತಜ್ಞರಾಗಿರಬೇಕು.

ಬೆಂಗಳೂರು, ಮೈಸೂರು ನಗರಗಳ ನಾಗರಿಕರು ಹನಿ ನೀರು ಕುಡಿಯುವ ಮುನ್ನ ಹೆಸರಘಟ್ಟದಿಂದ ಮೊದಲಿಗೆ ಕೊಳಾಯಿ ಮೂಲಕ ನೀರು ಕೊಟ್ಟ ರಾಜಮಾತೆ ಕೆಂಪನಂಜಮ್ಮಣ್ಣಿಯವರನ್ನು ವಿನಮ್ರವಾಗಿ ಸ್ಮರಿಸಬೇಕು. ಸ್ವಿಚ್ಚು ಅದುಮುವ ಮುನ್ನ ಶಿವನಸಮುದ್ರದಲ್ಲಿ ಮೊದಲಿಗೆ ವಿದ್ಯುತ್ ಉತ್ಪಾದಿಸಿದ ಅವರನ್ನು ನೆನೆಯಬೇಕು. ಹೆಣ್ಣುಮಕ್ಕಳು ಕಾಲೇಜಿಗೆ ಹೊರಡುವ ಮೊದಲು ಸ್ತ್ರೀ ಶಿಕ್ಷಣ ಹಾಗೂ ಅಭಿವೃದ್ಧಿಗೆ ಶ್ರಮಿಸಿದವರಿಗೆ ನಮಿಸಬೇಕು. ಭಾರತದ ವೈಸರಾಯ್ ಲಾರ್ಡ್ ಕರ್ಜನ್ನರು ರಾಜಮಾತೆ ಕೆಂಪನಂಜಮ್ಮಣ್ಣಿಯವರನ್ನು ಕುರಿತು 'She had set an example of 'public and domestic virtue (ಅವರು ಸಾಮಾಜಿಕ ಮತ್ತು ಕುಟುಂಬ ಮೌಲ್ಯಗಳಿಗೆ ಒಂದು ಆದರ್ಶದ ನಿದರ್ಶನ ಒದಗಿಸಿದವರು)' ಬಣ್ಣಿಸಿದ್ದಾರೆ.

–ಶ್ರೀದೇವಿ ಎನ್ ಪ್ರಭಾಕರ್

ರಾಜ್ಯ ಸಭೆಯಲ್ಲಿ ಅಭಿಷೇಕ್ ಮನು ಸಿಂಘ್ವಿ ಆಸನದಲ್ಲಿ ನೋಟಿನ ಕಂತೆ!

ತನಿಖೆಗೆ ಧನಕರ್ ಆದೇಶ; ಕಾಂಗ್ರೆಸ್ ಸಂಸದ ತಿರುಗೇಟು



ಮನು ಸಿಂಘ್ವಿ

ನವದೆಹಲಿ, ಡಿ.6– ಚಳಿಗಾಲದ ಅಧಿವೇಶನದ ಆರಂಭ'ದಲ್ಲೇ ಹಲವು ನಾಟಕೀಯ ಬೆಳವಣಿಗೆಗಳು ನಡೆಯುತ್ತಿದ್ದು, ಕಾಂಗ್ರೆಸ್ ಸಂಸದನ ಆಸನದಲ್ಲಿ ಹಣದ ಕಂತೆ ಪತ್ತೆಯಾಗಿರುವುದು ಇದೀಗ ಭಾರಿ ಸುದ್ದಿಗೆ ಗ್ರಾಸವಾಗಿದೆ.

ಕಾಂಗ್ರೆಸ್ ಸಂಸದ ಅಭಿಷೇಕ್ ಮನು ಸಿಂಘ್ವಿ ಅವರಿಗೆ ಮೀಸಲಾಗಿದ್ದ ಆಸನದಲ್ಲಿ ಕಂತೆ ಕಂತೆ ನೋಟು ಪತ್ತೆಯಾಗಿವೆ. ಈ ಕುರಿತು ತನಿಖೆಗೆ ಆದೇಶಿಸಲಾಗಿದೆ ಎಂದು ರಾಜ್ಯಸಭೆ ಸಭಾಪತಿ ಜಗದೀಪ್ ಧನಕರ್ ಹೇಳಿದ್ದಾರೆ. ಗುರುವಾರ ಸದನವನ್ನು ಮುಂದೂಡಿದ ಬಳಿಕ ಪರಿಶೀಲನೆ ವೇಳೆ ಆಸನ ಸಂಖ್ಯೆ 222ರಲ್ಲಿ ಭದ್ರತಾ ಸಿಬ್ಬಂದಿ ಕಂತೆ ಕಂತೆ ನೋಟುಗಳನ್ನು ವಶಪಡಿಸಿಕೊಂಡಿದ್ದಾರೆ. ಈ ಕುರಿತು ಸದನಕ್ಕೆ ತಿಳಿಸುವುದು ನನ್ನ ಕರ್ತವ್ಯವಾಗಿದೆ. ನೋಟುಗಳು ನಕಲಿಯೋ ಅಥವಾ ಅಸಲಿಯೋ ಎಂಬುದು ತಿಳಿದು ಬಂದಿಲ್ಲ. ಸದನದ ಶಿಷ್ಟಾಚಾರದಂತೆ ತನಿಖೆಗೆ ಆದೇಶಿಸಲಾಗಿದೆ ಎಂದು ಜಗದೀಶ್ ಧನಕರ್ ಮಾಹಿತಿ ನೀಡಿದ್ದಾರೆ.

ಯಾರಾದರೂ ಕರೆನ್ಸಿ ನೋಟುಗಳು ತಮ್ಮದು ಎಂದು ಕೇಳುತ್ತಾರೆ ಎಂದು ನಾನು ನಿರೀಕ್ಷಿಸುತ್ತಿದ್ದೆ. ಆದರೆ ಯಾರೂ ಅದನ್ನು ಇಲ್ಲಿಯವರೆಗೆ ತಮ್ಮದೆಂದು ಒಪ್ಪಿಕೊಂಡಿಲ್ಲ. ಜನರು ಅದನ್ನು ಮರೆತು ಬಿಡುವ ಆರ್ಥಿಕತೆಯ ಸ್ಥಿತಿಯನ್ನು ಇದು ಪ್ರತಿಬಿಂಬಿಸುತ್ತದೆಯೇ ಎಂದು ಅವರು ಅಚ್ಚರಿ ವ್ಯಕ್ತಪಡಿಸಿದರು.

ಸಭಾಪತಿಗಳಿಗೆ ಕಾಂಗ್ರೆಸ್ ಸಂಸದ ತಿರುಗೇಟು: ಇನ್ನು ಜಗದೀಪ್ ಧನಕರ್ ಅವರ ಆರೋಪಕ್ಕೆ ಸಂಸದ ಸಿಂಘ್ವಿ ತಿರುಗೇಟು ನೀಡಿದ್ದು, ಇದನ್ನು ಕೇಳಿ ಆಶ್ಚರ್ಯವಾಯಿತು. ನಾನು ನಿನ್ನೆ ಮಧ್ಯಾಹ್ನ 12.57ಕ್ಕೆ ಸದನದ ಒಳಗೆ ಪ್ರವೇಶ ಮಾಡಿದೆ. 1 ಗಂಟೆಗೆ ಸದನ ಆರಂಭವಾಯಿತು. ಮಧ್ಯಾಹ್ನ 1 ರಿಂದ 1.30ರವರೆಗೆ ನಾನು ಅಯೋಧ್ಯಾ ಪ್ರಸಾದ್ ಅವರೊಂದಿಗೆ ಕುಳಿತುಕೊಂಡೆ.

ಮಧ್ಯಾಹ್ನ 1.30ಕ್ಕೆ ನಾನು ಸಂಸತ್ತನ್ನು ಬಿಟ್ಟೆ, ಸದನದಲ್ಲಿ ಒಟ್ಟು 3 ನಿಮಿಷಗಳು ಮತ್ತು ಕ್ಯಾಂಟೀನ್‌ನಲ್ಲಿ 30 ನಿಮಿಷಗಳು ಮಾತ್ರ ಇದೆ. ಅಂತಹ ವಿಷಯಗಳಲ್ಲಿಯೂ ರಾಜಕೀಯ ಮಾಡಲಾಗುತ್ತಿದೆ ಎಂದರು.

ಅಂತೆಯೇ ಆ ಹಣ ನನ್ನದಲ್ಲ. ಖಂಡಿತವಾಗಿ ಬೇರ್ಯಾರೋ ಅದನ್ನು ತಂದು ನನ್ನ ಆಸನದ ಬಳಿ ಇಟ್ಟು ಹೋಗಿರಬಹುದು. ಈ ಬಗ್ಗೆ ವಿಚಾರಣೆ ನಡೆಯಬೇಕು. ನಮ್ಮಲ್ಲಿ ಪ್ರತಿಯೊಬ್ಬರೂ ಆಸನವನ್ನು ಲಾಕ್ ಮಾಡಬಹುದಾದ ಮತ್ತು ಕೀಲಿಯನ್ನು ಸಂಸದರು ಮನೆಗೆ ಒಯ್ಯಬಹುದಾದ ಆಸನವನ್ನು ಹೊಂದಿರಬೇಕು ಎಂದು ಸಿಂಘ್ವಿ ವ್ಯಂಗ್ಯ ಮಾಡಿದರು.

ಭೀಮ ರಥದ ಮೆರವಣಿಗೆ



ಮಹಾಪರಿನಿಬ್ಬಾಣ ದಿನದ ಅಂಗವಾಗಿ 'ಭೀಮ ರಥ' ಮೆರವಣಿಗೆ ನಡೆಯಿತು.

ಮೈಸೂರು, ಡಿ.6(ಎಂಕೆ)– ಡಾ.ಬಿ.ಆರ್. ಅಂಬೇಡ್ಕರ್ ಅವರ 68ನೇ ಮಹಾಪರಿನಿಬ್ಬಾಣ ದಿನದ ಅಂಗವಾಗಿ ಮೈಸೂರಿನ ಅಶೋಕಪುರಂನಲ್ಲಿ 'ಭೀಮ ರಥ' ಮೆರವಣಿಗೆ ನಡೆಯಿತು.

ಇಲ್ಲಿನ ಅಂಬೇಡ್ಕರ್ ಉದ್ಯಾನವನದಿಂದ ಆರಂಭವಾದ 'ಭೀಮ ರಥ'ದ ಮೆರವಣಿಗೆ ನಗರದ ಪ್ರಮುಖ ರಸ್ತೆಗಳ ಮೂಲಕ ಟೌನ್ ಹಾಲ್ ಎದುರಿನ ಅಂಬೇಡ್ಕರ್ ಪ್ರತಿಮೆಯವರೆಗೆ ಸಾಗಿತು. ಇದರ ನಡುವೆ ಗಾಂಧಿನಗರದಲ್ಲಿರುವ ಅಂಬೇಡ್ಕರ್ ಪ್ರತಿಮೆಗೆ ನಟ ಚೇತನ್ ಅಹಿಂಸಾ ಪುಷ್ಪನಮನ ಸಲ್ಲಿಸಿ, ಕ್ಯಾಂಡಲ್ ಬೆಳಗಿಸಿ ನಮನ ಸಲ್ಲಿಸಿದ ನಂತರ 'ಭೀಮ ರಥ' ಮೆರವಣಿಗೆಯಲ್ಲೂ ಭಾಗವಹಿಸಿ, ವೇದಿಕೆ ಕಾರ್ಯಕ್ರಮದಲ್ಲಿ ಮಾತನಾಡಿದರು. ಮೆರವಣಿಗೆಯಲ್ಲಿ ಅಶೋಕಪುರಂ ಹಾಗೂ ಗಾಂಧಿನಗರದ ಸಾವಿರಾರು ಅಂಬೇಡ್ಕರ್ ಅಭಿಮಾನಿಗಳು, ವಿವಿಧ ಸಂಘಟನೆಗಳ ಮುಖಂಡರು, ಸ್ಥಳೀಯ ನಿವಾಸಿಗಳು ಕ್ಯಾಂಡಲ್ ಲೈಟ್ ಬೆಳಗಿ ನಮನ ಸಲ್ಲಿಸಿದರು.

ವೈಣಿಕ ವಿದ್ವಾನ್ ಡಾ.ವಿಶ್ವೇಶ್ವರನ್‌ರಿಗೆ ಸಂಗೀತ ವಿದ್ಯಾನಿಧಿ ಪ್ರಶಸ್ತಿ ಪ್ರದಾನ

ಮೈಸೂರು, ಡಿ.6(ಎಸ್‌ಪಿಎನ್)– ವೈಣಿಕ ವಿದ್ವಾನ್ ಡಾ.ವಿಶ್ವೇಶ್ವರನ್ ಅವರಿಗೆ 'ಸಂಗೀತ ವಿದ್ಯಾನಿಧಿ' ಪ್ರಶಸ್ತಿಯನ್ನು ಬೆಂಗಳೂರು ವಿಜಯನಗರ ಕ್ಷೇತ್ರದ ಶಾಸಕ ಎಂ.ಕೃಷ್ಣಪ್ಪ ಪ್ರದಾನ ಮಾಡಿದರು.

ಮೈಸೂರು ಸರಸ್ವತಿಪುರಂ ಜೆಎಸ್‌ಎಸ್ ಮಹಿಳಾ ಕಾಲೇಜು ಆವರಣದ ನವಜ್ಯೋತಿ ಸಭಾಂಗಣದಲ್ಲಿ ಡಾ.ಶಿವರಾತ್ರಿ ರಾಜೇಂದ್ರ ಸ್ವಾಮಿ ಅವರ ಸಂಸ್ಮರಣೆ ಅಂಗವಾಗಿ 29ನೇ ಸಂಗೀತ ಸಮ್ಮೇಳನ–2024ರ ಸಮಾರೋಪ ಸಮಾರಂಭದಲ್ಲಿ 'ಸಂಗೀತ ವಿದ್ಯಾನಿಧಿ' ಪ್ರಶಸ್ತಿಯನ್ನು ಪ್ರದಾನ ಮಾಡಿ, ಮಾತನಾಡಿದರು.



ವೈಣಿಕ ವಿದ್ವಾನ್ ಡಾ.ವಿಶ್ವೇಶ್ವರನ್ ಅವರಿಗೆ 'ಸಂಗೀತ ವಿದ್ಯಾನಿಧಿ' ಪ್ರಶಸ್ತಿಯನ್ನು ಬೆಂಗಳೂರು ವಿಜಯನಗರ ಕ್ಷೇತ್ರದ ಶಾಸಕ ಎಂ.ಕೃಷ್ಣಪ್ಪ ಪ್ರದಾನ ಮಾಡಿದರು.

ಜೆಎಸ್‌ಎಸ್ ಸಂಗೀತ ಸಭಾ ಟ್ರಸ್ಟ್ ವತಿಯಿಂದ ಸಂಯೋಜಿಸಿರುವ ರಾಷ್ಟ್ರೀಯ ಸಂಗೀತ ಸಮ್ಮೇಳನದಲ್ಲಿ ವಿದ್ವಾನ್ ಡಾ. ವಿಶ್ವೇಶ್ವರನ್ ಸಂಗೀತ ವಿದ್ಯಾನಿಧಿ' ಪ್ರಶಸ್ತಿ ನೀಡಿ, ಗೌರವಿಸಿರುವುದು ಸಂತೋಷದ ಸಂಗತಿ. ಜೆಎಸ್‌ಎಸ್ ಸಂಸ್ಥೆ ಅಕ್ಷು, ಆರೋಗ್ಯ, ಧಾರ್ಮಿಕ ದಾಸೋಹಕ್ಕೆ ಹೆಚ್ಚಿನ ಆದ್ಯತೆ ನೀಡಿದೆ. ಅಲ್ಲದೆ, ಸಂಗೀತ ಕ್ಷೇತ್ರಕ್ಕೂ ಆದ್ಯತೆ ನೀಡಿ, ಸಂಗೀತ ಸಾಧಕರನ್ನು ಸನ್ಮಾನಿಸಿರುವುದು ಸಂತೋಷದ ಸಂಗತಿ ಎಂದರು.

ಜೆಎಸ್‌ಎಸ್ ಸಂಸ್ಥೆ ದೇಶದ ಬೇರೆ ಬೇರೆ ರಾಜ್ಯ ಮತ್ತು ವಿದೇಶಗಳಲ್ಲಿ ಸಂಸ್ಥೆಗಳನ್ನು ಸ್ಥಾಪಿಸಿ, ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ನೀಡಿದೆ. ಅಲ್ಲದೆ, ಸಂಗೀತ ಕ್ಷೇತ್ರದಲ್ಲೂ ಎಲ್ಲಾ ಪ್ರಾಕಾರದ ಸಂಗೀತಕ್ಕೆ ಹೆಚ್ಚಿನ ಆದ್ಯತೆ ನೀಡುತ್ತಿರುವುದು ಉತ್ತಮ ಬೆಳವಣಿಗೆ. ಪ್ರಸ್ತುತ ಈ ವೇದಿಕೆಯಲ್ಲಿ 'ಸಂಗೀತ ವಿದ್ಯಾನಿಧಿ' ಪ್ರಶಸ್ತಿಗೆ ಭಾಜನರಾಗಿರುವ ಡಾ.ವಿಶ್ವೇಶ್ವರನ್ ಅವರು, ಸಂಗೀತ ಕ್ಷೇತ್ರದ ಸಾಧನೆ ಅಪಾರ ಎಂದು ತಿಳಿಸಿದರು.

ಸಂಗೀತಾ ವಿದ್ಯಾನಿಧಿ ಪ್ರಶಸ್ತಿ ಪುರಸ್ಕೃತ ಡಾ.ವಿಶ್ವೇಶ್ವರನ್ ಮಾತನಾಡಿ, ನೀವು (ಯುವ ಮಿತ್ರರಿಗೆ) ಯಾವುದೇ ಕ್ಷೇತ್ರದಲ್ಲಿ ಸಾಧನೆ ಮಾಡಿದರೂ, ನಾವು ಸಣ್ಣವರೇ ಎಂದು ಸಾರ್ವಜನಿಕವಾಗಿ ಪರಿಚಯಿಸಿಕೊಳ್ಳಬೇಕು. ಏಕೆಂದರೆ, ಸಾಧಕರಿಗೆ ವಿನಯವೇ ಸಂಪತ್ತು. ಸಾಧಕ ಎಷ್ಟೇ ಎತ್ತರಕ್ಕೆ ಬೆಳೆದರೂ ನಾವಿನ್ನು ಸಣ್ಣವರೇ ಎಂದು ಭಾವಿಸಿದಾಗ ಮಾತ್ರ ಎಲ್ಲಾ ವರ್ಗದ ಕಲಾರಸಿಕರು ನಿಮ್ಮ ಬಳಿ ಬಂದು ಆತ್ಮೀಯವಾಗಿ ಬೆರೆಯುತ್ತಾರೆ. ಇಲ್ಲದಿದ್ದರೆ, ನಿಮ್ಮ ಬಳಿ ಒಬ್ಬರೂ ಸುಳಿಯುವುದಿಲ್ಲ ಎಂದು ಅಭಿಪ್ರಾಯಪಟ್ಟರು.

ಜೆಎಸ್‌ಎಸ್ ಸಂಗೀತ ಸಭಾ ಟ್ರಸ್ಟ್ ಸಂಗೀತ ಕ್ಷೇತ್ರದ ಸಾಧನೆಗಾಗಿ 'ಕರ್ನಾಟಕ ಕಲಾಶ್ರೀ' ಪುರಸ್ಕಾರಕ್ಕೆ ಭಾಜನವಾಗಿದೆ. ಕಳೆದ ಮೂರು ದಶಕಗಳಿಂದ ನಾಡಿನ ವಿವಿಧ ರಾಜ್ಯ ಕಲಾವಿದರನ್ನು ಒಂದೆಡೆ ಸೇರಿಸಿ ಅವರನ್ನು ಸಾಂಸ್ಕೃತಿಕವಾಗಿ ಮುಖ್ಯವಾಹಿನಿಗೆ ತಂದು ಸಂಗೀತ ರಸಾನುಭವವನ್ನು ಶ್ರೋತೃಗಳಿಗೆ ದೊರೆಯುವಂತೆ ಮಾಡಿದೆ. ಮೈಸೂರಿನಲ್ಲಿ ಕರ್ನಾಟಕ ಸಂಗೀತದ ಸಂವರ್ಧನೆ ಮತ್ತು ಸಂರಕ್ಷಣೆಗಾಗಿ ಅಹರ್ನಿಶಿ ದುಡಿಯುತ್ತಿದೆ ಎಂದರು.

ಪ್ರತಿ ವರ್ಷವೂ ರಾಷ್ಟ್ರೀಯ ಸಂಗೀತ ಸಮ್ಮೇಳನವನ್ನು ಆಯೋಜಿಸಿ ಯಶಸ್ವಿಯಾಗಿ ನಡೆಸಿಕೊಂಡು ಬರುತ್ತಿರುವುದು ಶ್ಲಾಘನೆ ವಿಚಾರ. ನಾವು ಸಂಗೀತದಲ್ಲಿ ವಿವಿಧ ಕಲಾ ಪ್ರಾಕಾರಗಳಲ್ಲಿ ಆಸ್ವಾದನೆ ಮಾಡುವಾಗ ಸಂಗೀತದ ಲಯ ತಿಳಿದುಕೊಂಡು ಸಂಗೀತ ಆಸ್ವಾದನೆ ಮಾಡಬೇಕು ಎಂದು ಸಲಹೆ ನೀಡಿದರು.

ವೇದಿಕೆಯಲ್ಲಿ ವಿದುಷಿ ಪ್ರೊ.ಟಿ.ಎಸ್. ಸತ್ಯವತಿ ಸಮಾರೋಪ ಭಾಷಣ ಮಾಡಿದರು. ವಿದ್ವಾನ್ ಮೈಸೂರು ಎಂ.ಮಂಜುನಾಥ್, ಮೈಸೂರು ಎಂ.ನಾಗರಾಜ್, ಪ್ರೊ ಕೆ.ರಾಮಮೂರ್ತಿ ಸೇರಿದಂತೆ ಇತರರಿದ್ದರು. ಜೆಎಸ್‌ಎಸ್ ಸಂಗೀತ ಸಭಾ ಟ್ರಸ್ಟ್ ವ್ಯವಸ್ಥಾಪಕ ನಿರ್ದೇಶಕ ರಮೇಶ್ ಕಣ್ಣನ್, ವಿದ್ವಾನ್ ಡಾ.ವಿಶ್ವೇಶ್ವರನ್ ಅವರಿಗೆ ಶಿಷ್ಯರಾದ ಮಾನಸ ನಯನ, ಸಿ.ಎಸ್.ಶ್ರೀಧರ್, ಟಿ.ರಘುರಾಮ್, ಶಿವಶಂಕರಸ್ವಾಮಿ, ವಿ.ಎಸ್. ರಮೇಶ್, ತುಮಕೂರು ರವಿಶಂಕರ್, ನೀರಜಾ ಅವರು ಸನ್ಮಾನಿಸಿದರು.

ಇದಕ್ಕೂ ಮುನ್ನ ವಿದುಷಿ ಭಾರ್ಗವಿ ವೆಂಕಟರಾಂ ಅವರ ಗಾಯನ ಕಾರ್ಯಕ್ರಮ ನೆರವೇರಿತು. ವಿದ್ವಾನ್ ವೈಭವ್ ರಮಣಿ , ವಯೋಲಿನ್, ವಿದ್ವಾನ್ ಬಿ.ಎಸ್.ಪ್ರಶಾಂತ್ ಮೃದಂಗ ನುಡಿಸಿ, ಸಂಗೀತ ಕಛೇರಿಗೆ ಮೆರಗು ತಂದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: mysoorumithra@gmail.com For advertisements: mysoorumithra@gmail.com

ಸಿಎಫ್‌ಟಿಆರ್‌ಐನಲ್ಲಿ 'ಸಿರಿಧಾನ್ಯ ಉತ್ಕೃಷ್ಟತಾ ಅಂಡ್ ಇನ್‌ಕ್ಯೂಬೇಶನ್ ಕೇಂದ್ರ' ಸ್ಥಾಪನೆ

● ಕೃಷಿ ಸಚಿವ ಚಲುವರಾಯಸ್ವಾಮಿ ಉದ್ಘಾಟನೆ ● ಸಿರಿಧಾನ್ಯ ಬಳಕೆಯಿಂದ ಆರೋಗ್ಯ ಸಂರಕ್ಷಣೆ ವಿಶ್ವಾಸ





ಸಿಎಫ್‌ಟಿಆರ್‌ಐನಲ್ಲಿ 'ಸಿರಿಧಾನ್ಯ ಉತ್ಕೃಷ್ಟತಾ ಹಾಗೂ ಇನ್ ಕ್ಯೂಬೇಶನ್ ಕೇಂದ್ರ' ಉದ್ಘಾಟಿಸಿದ ಕೃಷಿ ಸಚಿವ ಚಲುವರಾಯಸ್ವಾಮಿ ಸಿರಿಧಾನ್ಯಗಳ ವೀಕ್ಷಣೆ ಮಾಡಿದರು.

ಮೈಸೂರು, ಡಿ.6(ಎಂಕೆ)– ಮೈಸೂರಿನಲ್ಲಿರುವ ಕೇಂದ್ರೀಯ ಆಹಾರ ತಂತ್ರಜ್ಞಾನ ಸಂಶೋಧನಾಲಯ (ಸಿಎಫ್‌ಟಿಆರ್‌ಐ)ದಲ್ಲಿ ನೂತನವಾಗಿ ನಿರ್ಮಿಸಿರುವ 'ಸಿರಿಧಾನ್ಯ ಉತ್ಕೃಷ್ಟತಾ ಹಾಗೂ ಇನ್ ಕ್ಯೂಬೇಶನ್ ಕೇಂದ್ರ'ವನ್ನು ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ಶುಕ್ರವಾರ ಉದ್ಘಾಟಿಸಿದರು.

ಬಳಿಕ ನೂತನ ಕೇಂದ್ರದ ಮೂರು ಘಟಕಗಳನ್ನು ವೀಕ್ಷಣೆ ಮಾಡಿ, ಯಂತ್ರೋಪಕರಣಗಳು ಹಾಗೂ ಅವುಗಳಿಂದ ತಯಾರಿಸುವ ಸಿರಿಧಾನ್ಯ ಪ್ಯಾಕೇಟ್‌ಗಳ ಪರಿಶೀಲನೆ ನಡೆಸಿದರಲ್ಲದೆ ಸಿರಿಧಾನ್ಯಗಳಿಂದ ತಯಾರಿಸುವ ಇತರೆ ಆಹಾರ ಉತ್ಪನ್ನಗಳು ಹಾಗೂ ಯಂತ್ರಗಳ ಕುರಿತು ಮಾಹಿತಿ ಪಡೆದುಕೊಂಡರು.


ಬಳಿಕ ನಡೆದ ವೇದಿಕೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಇತ್ತೀಚಿನ ದಿನಗಳಲ್ಲಿ ರೈತರು ಕೃಷಿ ಕಡೆಗೆ ಹೆಚ್ಚಿನ ಗಮನ ಹರಿಸುತ್ತಿದ್ದಾರೆ. ತಂತ್ರಜ್ಞಾನದ ಬಳಕೆ ಹೆಚ್ಚಾಗಿದೆ. ಕಬ್ಬು ಕಟಾವು ಯಂತ್ರದಿಂದ ಸುಮಾರು 25 ಟನ್ ಕಬ್ಬು ಉಳಿತಾಯದ ಜೊತೆಗೆ ಕೂಲಿ ಖರ್ಚು ಉಳಿಯಲಿದೆ. ಸಿರಿಧಾನ್ಯಗಳನ್ನು ಹೆಚ್ಚಾಗಿ ಬಳಸುತ್ತಿದ್ದ ನಮ್ಮ ಪೂರ್ವಿಕರು ಆರೋಗ್ಯಭರಿತ ಜೀವನ ನಡೆಸುತ್ತಿದ್ದರು. ಈಗ ಮತ್ತೆ ಸಿರಿಧಾನ್ಯದ ಕಡೆಗೆ ಜನರಲ್ಲಿ ಆಸಕ್ತಿ ಮೂಡಿದ್ದು, ಜನರ ಆಸಕ್ತಿಗೆ ಅನುಗುಣವಾಗಿ ಸಿಎಫ್‌ಟಿಆರ್‌ಐ ಗುಣಮಟ್ಟದ ಸಿರಿಧಾನ ಪದಾರ್ಥಗಳನ್ನು ತಯಾರಿಸುವಲ್ಲಿ ಕಾರ್ಯೋನ್ಮುಖವಾಗಿದೆ ಎಂದು ಶ್ಲಾಘಿಸಿದರು.

> **"ಸಿರಿಧಾನ್ಯ ಕುರಿತು ಇನ್ನೂರಕ್ಕೂ ಹೆಚ್ಚು ಪ್ರಕಟಣೆ ಹೊರಡಿಸಿದ್ದು, ಎರಡು ಸಾವಿರಕ್ಕೂ ಹೆಚ್ಚು ಪರೀಕ್ಷೆಗಳನ್ನು ನಡೆಸಿದ್ದೇವೆ.. ಕಳೆದ ನಾಲ್ಕು ವರ್ಷಗಳಿಂದ 20 ಕೋಟಿ ರೂ. ವೆಚ್ಚದಲ್ಲಿ ಈ ಕೇಂದ್ರವನ್ನು ನಿರ್ಮಿಸಲಾಗಿದೆ. ಸಿಎಫ್‌ಟಿಆರ್‌ಐ ಭಾರತ ಶೇ.70 ಸಿರಿಧಾನ್ಯ ಪದಾರ್ಥಗಳನ್ನು ಉತ್ಪಾದನೆ ಮಾಡುತ್ತಿದ್ದು, ವಿಶ್ವದಲ್ಲೇ ಮೊದಲ ಸ್ಥಾನಕ್ಕೇರುವ ವಿಶ್ವಾಸವಿದೆ.**
> –ಡಾ.ಶ್ರೀದೇವಿ ಅನ್ನಪೂರ್ಣ ಸಿಂಗ್, ಸಿಎಫ್‌ಟಿಆರ್‌ಐ ನಿರ್ದೇಶಕಿ

ರಾಜ್ಯ ಸರ್ಕಾರದ ಸಹಕಾರದೊಂದಿಗೆ ಸುಮಾರು 20 ಕೋಟಿ ರೂ.ವೆಚ್ಚದಲ್ಲಿ ನಿರ್ಮಿಸಿರುವ 'ಸಿರಿಧಾನ್ಯ ಉತ್ಕೃಷ್ಟತಾ ಹಾಗೂ ಇನ್ ಕ್ಯೂಬೇಶನ್ ಕೇಂದ್ರ'ದಿಂದ ರೈತರು ಮತ್ತು ಗ್ರಾಹಕರಿಗೆ ಅನುಕೂಲವಾಗಲಿದೆ. ಬೆಂಗಳೂರನ್ನು ಮಿಲೆಟ್ ರಾಜಧಾನಿಯನ್ನಾಗಿ ಮಾಡುವ ಉದ್ದೇಶವನ್ನು ರಾಜ್ಯ ಸರ್ಕಾರ ಹೊಂದಿದೆ. ಈ ನಿಟ್ಟಿನಲ್ಲಿ ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವುದು. ಸಿರಿಧಾನ್ಯ ಉತ್ಪನ್ನದಲ್ಲಿ ಇತರೆ ರಾಜ್ಯಗಳಿಂದ ಕರ್ನಾಟಕ ಮುಂದಿದೆ ಎಂದು ಹೇಳಿದರು. ಸರ್ಕಾರ ಸಾಲ–ಸೌಲಭ್ಯ ಹಾಗೂ ಇನ್ನಿತರೆ ಸೇವೆ ನೀಡುವಲ್ಲಿ ಕೃಷಿ ಇಲಾಖೆ ಇತರೆ ಇಲಾಖೆಗಳಿಗಿಂತ ಮುಂದಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರದ ಕಾರ್ಯಕ್ರಮಗಳನ್ನು ಪರಿಪೂರ್ಣವಾಗಿ ರೈತರಿಗೆ ತಲುಪಿಸುವ ನಿಟ್ಟಿನಲ್ಲಿ ಕೆಲಸ ಮಾಡಲಾಗುತ್ತಿದೆ. ಸರ್ಕಾರ ರೈತರಿಗೆ ಬೆಂಬಲವಾಗಿ ನಿಂತರೆ ಮಾತ್ರ ಆಹಾರ ಸಮಸ್ಯೆ ಬಗೆಹರಿಯಲು ಸಾಧ್ಯ ಎಂದರು.

ಇದೇ ವೇಳೆ ಸಿರಿಧಾನ್ಯಗಳ ಮಾಹಿತಿಯುಳ್ಳ ಕಿರು ಹೊತ್ತಿಗೆಯನ್ನು ಬಿಡುಗಡೆ ಮಾಡಲಾಯಿತು. ಚಾಮರಾಜ ವಿಧಾನ ಸಭಾ ಕ್ಷೇತ್ರದ ಶಾಸಕ ಕೆ.ಹರೀಶ್, ಮಾಜಿ ಸಭಾಪತಿ ವಿ.ಆರ್.ಸುದರ್ಶನ್, ಚೆಸ್ಕಾಂ ಅಧ್ಯಕ್ಷ ರಮೇಶ್ ಬಂಡಿ ಸಿದ್ದೇಗೌಡ, ಕೃಷಿ ಆಯುಕ್ತ ಪಾಟೀಲ್ ಉಪಸ್ಥಿತರಿದ್ದರು.

ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಪುಣ್ಯಾರಾಧನೆ, ಸುತ್ತೂರು ಜಾತ್ರಾ ಮಹೋತ್ಸವ ಸಭೆ



ಸುತ್ತೂರು, ಡಿ. 6– ಶ್ರೀ ಸುತ್ತೂರು ಕ್ಷೇತ್ರದಲ್ಲಿ ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 38ನೆಯ ಪುಣ್ಯಾರಾಧನೆಯ ಅಂಗವಾಗಿ ಪ್ರಾತ:ಕಾಲ ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಕರ್ತೃಗದ್ದುಗೆ ಹಾಗೂ ರಾಜೇಂದ್ರ ಶ್ರೀಗಳವರ ಗದ್ದುಗೆಗೆ ರುದ್ರಾಭಿಷೇಕ, ಅಷ್ಟೋತ್ತರ ಮೊದಲಾದ ವಿಶೇಷ ಪೂಜೆಗಳು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮಿಗಳವರ ದಿವ್ಯ ಸಾನ್ನಿಧ್ಯದಲ್ಲಿ ನೆರವೇರಿದವು.

2025ರ ಜ.26 ರಿಂದ 31 ರವರೆಗೆ ಶ್ರೀಕ್ಷೇತ್ರದಲ್ಲಿ ಜರುಗುವ ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಜಾತ್ರಾ ಮಹೋತ್ಸವದ ಮಂಟಪಗಳ ಭೂಮಿ ಪೂಜೆಯನ್ನು ನೆರವೇರಿಸಲಾಯಿತು.

ಇದೇ ಸಂದರ್ಭದಲ್ಲಿ ಸುತ್ತಮುತ್ತಲ ಗ್ರಾಮಸ್ಥರ ಉಪಸ್ಥಿತಿಯಲ್ಲಿ ಜಾತ್ರಾ ಮಹೋತ್ಸವದ ಪೂರ್ವಭಾವಿ ಸಮಾಲೋಚನಾ ಸಭೆ ನಡೆಯಿತು. ಈ ಸಂದರ್ಭದಲ್ಲಿ ವಾಟಾಳು, ಆಲಮಟ್ಟಿ, ಕುದೇರು ಶಂಕರಮಠ, ಬೆಟ್ಟದಪುರ, ನೀಲಕಂಠ ಸ್ವಾಮಿಮಠ, ರಾಮಾಪುರ, ದಂಡಿಕೆರೆ, ಹರವೆ, ಚಿಕ್ಕತುಪ್ಪೂರು, ಹುಲಿಯೂರು ದುರ್ಗ, ಚುಂಚನಹಳ್ಳಿ, ನವಿಲೂರು, ಕುದೇರು, ಕುಂದೂರು, ಪಡುಗೂರು, ಹೊನ್ನಲಗೆರೆ, ನಂಜನಗೂಡು, ಮಾದಳ್ಳಿ, ರಾಗಿಬೊಮ್ಮನಹಳ್ಳಿ, ಕೆಸವತ್ತೂರು ಮಠಗಳ ಶ್ರೀಗಳು, ಹರಗುರು ಚರಮೂರ್ತಿಗಳು, ಸಂಸ್ಥೆಯ ಅಧಿಕಾರಿಗಳು ಹಾಗೂ ಭಕ್ತಾದಿಗಳು ಉಪಸ್ಥಿತರಿದ್ದರು.

ಜಾತ್ರಾ ಮಹೋತ್ಸವ ಸಮಿತಿಯ ಸದಸ್ಯರಾಗಿದ್ದ ಆಲತ್ತೂರು ಗೌಡರಾದ ಶ್ರೀ ಸಿದ್ಧಲಿಂಗಪ್ಪ ಹಾಗೂ ಜೀಮಾರಹಳ್ಳಿ ಕುಮಾರಪ್ಪ ಅಗಲಿಕೆಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು. ಪ್ರೊ ಸುಬ್ಬಪ್ಪನವರು ಸ್ವಾಗತಿಸಿದರು. ಸಿ.ವಿ. ಬಸವರಾಜು ವಂದಿಸಿದರು. ಹೆಚ್.ಎಲ್.ಪ್ರಕಾಶ್ ಕಾರ್ಯಕ್ರಮ ನಿರೂಪಿಸಿದರು. ಸುತ್ತೂರು ಶಾಲೆಯ ಮಕ್ಕಳು ಪ್ರಾರ್ಥನೆ ಸಲ್ಲಿಸಿದರು.

'ನಟನ'ದಲ್ಲಿ ನಾಟಕ 'ನೀರ್ಮಾದಳ ಹೂವಿನೊಂದಿಗೆ..'

ಮೈಸೂರು, ಡಿ. 6– ಡಿ.8ರಂದು ಸಂಜೆ 6.30ಕ್ಕೆ ರಾಮಕೃಷ್ಣ ನಗರದಲ್ಲಿರುವ ನಟನ ರಂಗಶಾಲೆಯಲ್ಲಿ ಸಮತೆಂತೋ ಮೈಸೂರು ಪ್ರಸ್ತುತಪಡಿಸುವ ಏಕವ್ಯಕ್ತಿ ರಂಗಪ್ರಯೋಗ 'ನೀರ್ಮಾದಳ ಹೂವಿನೊಂದಿಗೆ.' ಪ್ರದರ್ಶನಗೊಳ್ಳಲಿದೆ. ಇಂದಿರಾ ನಾಯರ್ ಅವರು ಅಭಿನಯಿಸುತ್ತಿದ್ದು, ನಾಟಕದ ರಂಗಪಠ್ಯ, ವಿನ್ಯಾಸ ಮತ್ತು ನಿರ್ದೇಶನ ನಾಡಿನ ಹೆಸರಾಂತ ರಂಗ ನಿರ್ದೇಶಕರಾದ ಡಾ. ಶ್ರೀಪಾದ ಭಟ್ ಅವರದ್ದು.



ಮಾಹಿತಿಗೆ 7259537777, 9480468327, 9845595505 ಸಂಪರ್ಕಿಸಬಹುದು.

ಡಿ.9, 10ಕ್ಕೆ ವನಜಾಕ್ಷಮ್ಮ ಸಂಸ್ಮರಣಾ ನೃತ್ಯ ಆರಾಧನಾ ಉತ್ಸವ

ಮೈಸೂರು, ಡಿ.6– ನಾಟ್ಯಾಚಾರ್ಯ ಪ್ರೊ. ಕೆ.ರಾಮಮೂರ್ತಿರಾವ್ ಅವರ ನೂಪುರ ಕಲಾವಿದರ ಸಾಂಸ್ಕೃತಿಕ ಟ್ರಸ್ಟ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಕಾರದೊಂದಿಗೆ ಡಿ.9 ಮತ್ತು 10ರಂದು ಸಂಜೆ 6 ಗಂಟೆಗೆ ಕುವೆಂಪುನಗರ ಆದಿಚುಂಚನಗಿರಿ ರಸ್ತೆಯಲ್ಲಿರುವ ರಮಾಗೋವಿಂದ ಕಲಾ ವೇದಿಕೆಯಲ್ಲಿ ವಿಶೇಷ ನೃತ್ಯ ಆರಾಧನಾ ಮಹೋತ್ಸವ ಏರ್ಪಡಿಸಲಾಗಿದೆ.

ಡಿ.9ರಂದು ಸಂಜೆ 6 ಗಂಟೆಗೆ ನೂಪುರ ಕಲಾವಿದರು ಟ್ರಸ್ಟ್‌ನ ನಿರ್ದೇಶಕ ಕೆ.ರಾಮಮೂರ್ತಿರಾವ್ ಅವರ ಪುತ್ರ ಹಾಗೂ ಶಿಷ್ಯ ವಿದ್ವಾನ್ ಕೆ.ಆರ್. ವಿಶ್ವದೀಪ ಅವರಿಂದ ಭರತನಾಟ್ಯ, ಸಂಜೆ 7 ಗಂಟೆಗೆ ನೃತ್ಯಾನಿಕೇತನ ಕೊಡವೂರು ನಿರ್ದೇಶಕರಾದ ವಿದ್ವಾನ್ ಸುಧೀರ್ ಕೊಡವೂರು ಹಾಗೂ ವಿದುಷಿ ಮಾನಸಿ ಸುಧೀರ್ ಅವರ ತಂಡದಿಂದ ನೃತ್ಯ ವೈಭವ ಸಮೂಹ ನೃತ್ಯ ಪ್ರದರ್ಶನವಿದೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನಸ್ವಾಮಿ ಮುಖ್ಯ ಅತಿಥಿಗಳಾಗಿ ಉಪಸ್ಥಿತರಿರುವರು.

ಡಿ.10ರ ಸಂಜೆ 6 ಗಂಟೆಗೆ ನೃತ್ಯಾಲಯ ಟ್ರಸ್ಟ್ ನಿರ್ದೇಶಕಿ ಡಾ. ತುಳಸೀ ರಾಮಚಂದ್ರ ಅವರಿಗೆ 'ನೂಪುರಶ್ರೀ' ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದ್ದು, ಜೆಎಸ್‌ಎಸ್ ಮಹಾವಿದ್ಯಾಪೀಠದ ಪ್ರಕಟಣಾ ವಿಭಾಗದ ನಿರ್ದೇಶಕ ಪ್ರೊ. ಮೊರಬದ ಮಲ್ಲಿಕಾರ್ಜುನ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ಬಳಿಕ ನೂಪುರ ಕಲಾವಿದರು, ಸಂಸ್ಥೆಯ ವಿದ್ಯಾರ್ಥಿಗಳಿಂದ ನೃತ್ಯ ಪ್ರದರ್ಶನವಿದೆ. ಕಾರ್ಯಕ್ರಮದಲ್ಲಿ ಕೆ.ರಾಮಮೂರ್ತಿರಾವ್ ಅವರು ಗಾಯನ ಹಾಗೂ ನಟುವಾಂಗ, ಎಂ.ಆರ್. ಹನುಮಂತರಾಜು ಮೃದಂಗದಲ್ಲೂ, ಎಚ್.ಎಸ್. ತಾಂಡವಮೂರ್ತಿ ವಯೋಲಿನ್‌ನಲ್ಲಿ ಸಹಕಾರ ನೀಡಲಿದ್ದಾರೆ.

ನೇಮಕ



ಮೈಸೂರು, ಡಿ.6– ಶ್ರೀ ಮಲೆ ಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಕೀಳನಪುರ ಮಹದೇವಪ್ಪ ಅವರನ್ನು ನೇಮಕ ಮಾಡಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಪಡುವಾರಹಳ್ಳಿಯಲ್ಲಿ 'ಭೀಮ ಜ್ಯೋತಿ' ಮೆರವಣಿಗೆ



ಮೈಸೂರಿನ ಪಡುವಾರಹಳ್ಳಿಯಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಅವರ ಪರಿನಿಬ್ಬಾಣ ದಿನದ ಅಂಗವಾಗಿ 'ಭೀಮ ಜ್ಯೋತಿ' ಮೆರವಣಿಗೆ ನಡೆಯಿತು.

ಮೈಸೂರು, ಡಿ.6(ಎಂಕೆ)– ಮೈಸೂರಿನ ಪಡುವಾರಹಳ್ಳಿ(ವಿನಾಯಕನಗರ)ಯಲ್ಲಿ ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ಅವರ ಪರಿನಿಬ್ಬಾಣ ದಿನದ ಅಂಗವಾಗಿ 'ಭೀಮ ಜ್ಯೋತಿ' ಮೆರವಣಿಗೆ ನಡೆಸಲಾಯಿತು.

ಅಂಬೇಡ್ಕರ್ ಯುವಕರ ಸಂಘದ ವತಿಯಿಂದ ಪಡುವಾರಹಳ್ಳಿ ಸರ್ಕಲ್‌ನಲ್ಲಿರುವ ಅಂಬೇಡ್ಕರ್ ಪುತ್ಥಳಿ ಎದುರು ಕ್ಯಾಂಡಲ್ ಲೈಟ್ ಬೆಳಗಿಸಿ ನಮನ ಸಲ್ಲಿಸಲಾಯಿತು. ನಂತರ ಅಲ್ಲಿಂದ ಹೊರಟ 'ಭೀಮ ಜ್ಯೋತಿ' ಮೆರವಣಿಗೆ ಪಡುವಾರಹಳ್ಳಿಯ ಪ್ರಮುಖ ಬೀದಿಗಳನ್ನು ಸಾಗಿ ಕಡೆಗೆ ಅಂಬೇಡ್ಕರ್ ಪುತ್ಥಳಿ ಎದುರೇ ಮುಕ್ತಾಯವಾಯಿತು.

ಮಂಗಳವಾದ್ಯ ಗೋಷ್ಠಿಯೊಂದಿಗೆ ಸಾಗಿದ 'ಭೀಮಜ್ಯೋತಿ' ಮೆರವಣಿಗೆಯಲ್ಲಿ ನೂರಾರು ಪಡುವಾರಹಳ್ಳಿ ನಿವಾಸಿಗಳು, ಅಂಬೇಡ್ಕರ್ ಅನುಯಾಯಿಗಳು ಭಾಗವಹಿಸಿದ್ದರು. ಈ ವೇಳೆ ಮಾಜಿ ಮೇಯರ್ ಪುರುಷೋತ್ತಮ್ ಮಾತನಾಡಿ, ಭಾರತ ದೇಶದ ಉದ್ದಗಲಕ್ಕೂ ಅಂಬೇಡ್ಕರ್ ಪರಿನಿಬ್ಬಾಣ ದಿನವನ್ನು ಶ್ರದ್ಧಾಪೂರ್ವಕವಾಗಿ ಆಚರಣೆ ಮಾಡಲಾಗುತ್ತಿದೆ. ಅಂಬೇಡ್ಕರ್ ಅವರು ನನ್ನ ಜನರಿಗೆ ಸತ್ಯದ ಮಾರ್ಗವನ್ನು ತಿಳಿಸಿಕೊಡಬೇಕು. ಬೌದ್ಧ ಧರ್ಮವನ್ನು ಕೊಡಬೇಕು ಎಂಬ ಉದ್ದೇಶವನ್ನು ಹೊಂದಿದ್ದರು. ಅದರಂತೆ ಲಕ್ಷಾಂತರ ಜನ ಅವರೊಂದಿಗೆ ಬೌದ್ಧ ಧರ್ಮ ಸ್ವೀಕರಿಸಿದ್ದರು. ಕ್ರಿ.ಶ. 5ರಿಂದ 7 ಶತಮಾನದವರೆಗೆ ಭಾರತ ಬೌದ್ಧ ರಾಷ್ಟ್ರವಾಗಿತ್ತು. 84 ಸಾವಿರ ಬೌದ್ಧ ವಿಹಾರಗಳನ್ನು ನಿರ್ಮಿಸಲಾಗಿತ್ತು. ಈ ನೆಲದ ಮೂಲ ಧಮ್ಮವೇ ಬೌದ್ಧ ಧಮ್ಮ. ಸಮಾನತೆ ಎಂಬ ಮೂಲ ಆಶಯ ಹೊಂದಿರುವ ಸಂವಿಧಾನವನ್ನು ರಕ್ಷಣೆ ಮಾಡುವುದು ಎಲ್ಲರ ಜವಾಬ್ದಾರಿಯಾಗಿದೆ. ಸಂವಿಧಾನದ ವಿರುದ್ಧ ಮಾತನಾಡುವವರು ದೇಶದ್ರೋಹಿಗಳು ಎಂಬುದರಲ್ಲಿ ಯಾವುದೇ ಅನುಮಾನವಿಲ್ಲ ಎಂದರು. ಚಾಮರಾಜನಗರದ ಟಿ.ನರಸೀಪುರದ ಸುಗತಪಾಲ ಬಂತೇಜಿ ಸೇರಿದಂತೆ ಮುಖಂಡರು, ಅಂಬೇಡ್ಕರ್ ಅನುಯಾಯಿಗಳು ಉಪಸ್ಥಿತರಿದ್ದರು.

ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗಳಲ್ಲಿ 'ಅಲ್ಪ' ವಿದ್ಯಾರ್ಥಿಗಳಿದ್ದರೂ ಅನುದಾನ

● ಸೂಕ್ತ ತಿದ್ದುಪಡಿಗೆ ಸಚಿವ ಸಂಪುಟ ಸಭೆ ಮಹತ್ವದ ತೀರ್ಮಾನ

● ಇದುವರೆಗೆ ಪ್ರಾಥಮಿಕ ಶಾಲೆಯಲ್ಲಿ ಶೇ.25, ಪ್ರೌಢಶಾಲೆಯಲ್ಲಿ ಶೇ.50 ವಿದ್ಯಾರ್ಥಿಗಳ ಕಡ್ಡಾಯಗೊಳಿಸಲಾಗಿತ್ತು; ಆದರೆ ಇನ್ನು ಮುಂದೆ ಅದಕ್ಕೂ ಕಡಿಮೆ ವಿದ್ಯಾರ್ಥಿಗಳಿದ್ದರೂ ಅನುದಾನ ಮುಂದುವರಿಕೆ ನಿರ್ಧಾರ

ಬೆಂಗಳೂರು, ಡಿ.6(ಕೆಎಂಶಿ)– ವಕ್ಫ್ ಬೋರ್ಡ್ ಆಸ್ತಿ ವಿವಾದ ಬೆನ್ನಲ್ಲೇ ರಾಜ್ಯ ಸರ್ಕಾರ ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗಳ ಮಾನ್ಯತೆಗೆ ಸಂಬಂಧಿಸಿದ ನಿಯಮಗಳಿಗೆ ತಿದ್ದುಪಡಿ ತರಲು ಇಂದಿಲ್ಲಿ ಸೇರಿದ್ದ ರಾಜ್ಯ ಸಚಿವ ಸಂಪುಟ ಸಭೆ ಅನುಮೋದನೆ ನೀಡಿದೆ.

ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗಳಲ್ಲಿ ನಿಗದಿತ ಪ್ರಮಾಣದಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಇಲ್ಲದಿದ್ದರೂ, ಅವುಗಳ ಅನುದಾನ ಮುಂದುವರೆಸುವ ಉದ್ದೇಶ ಈ ತಿದ್ದುಪಡಿಯದ್ದಾಗಿದೆ. ಬೆಳಗಾವಿಯಲ್ಲಿ ನಡೆಯಲಿರುವ ಅಧಿವೇಶನದಲ್ಲಿ ತಿದ್ದುಪಡಿ ಮಂಡಿಸಿ ಅನುಮೋದನೆ ಪಡೆಯಲು ಸಂಪುಟ ನಿರ್ಧರಿಸಿದೆ.

ಸಭೆ ನಂತರ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಖಾತೆ ಸಚಿವ ಎಚ್.ಕೆ.ಪಾಟೀಲ್, ಈ ಶಿಕ್ಷಣ ಸಂಸ್ಥೆಗಳಲ್ಲಿ ವಿದ್ಯಾರ್ಥಿಗಳ ಕೊರತೆ ಇದ್ದರೂ, ಅವುಗಳನ್ನು ಮುಂದುವರೆಸುವುದು ಮತ್ತು ಅನುದಾನ ನೀಡುವುದು ಸೇರಿದೆ ಎಂದರು.

ಇದುವರೆಗೂ ಪ್ರಾಥಮಿಕ ಶಾಲೆಯಲ್ಲಿ ಶೇ.25ರಷ್ಟು ಹಾಗೂ ಪ್ರೌಢಶಾಲೆಗಳಲ್ಲಿ ಶೇಕಡ 50ರಷ್ಟು ವಿದ್ಯಾರ್ಥಿಗಳ ಸಂಖ್ಯೆ ಇದ್ದರೆ ಮಾತ್ರ ಸವಲತ್ತು ನೀಡಲು ಕಾನೂನಿನ ಅವಕಾಶವಿತ್ತು. ದಿನದಿಂದ ದಿನಕ್ಕೆ ಈ ಶಿಕ್ಷಣ ಸಂಸ್ಥೆಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆಯಾಗುತ್ತಿದ್ದು, ಅನುದಾನ ಪಡೆಯಲು ತೊಂದರೆಯಾಗಿತ್ತು. ಇದನ್ನು ತಪ್ಪಿಸಿ ಶಿಕ್ಷಣ ಭವಿಷ್ಯ ನೀಡುವ ಉದ್ದೇಶದಿಂದ ಸರ್ಕಾರ ಈ ಮಹತ್ವದ ತೀರ್ಮಾನ ಕೈಗೊಂಡಿದೆ. ಹಜ್ ಮತ್ತು ಅಲ್ಪಸಂಖ್ಯಾತ ಇಲಾಖೆಯಡಿ ಬರುವ ಶೈಕ್ಷಣಿಕ ಸಂಸ್ಥೆಗಳನ್ನೂ, ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗಳೆಂದು ಘೋಷಿಸಿ ಅವುಗಳಿಗೂ ಸೌಕರ್ಯ ನೀಡಲು ನಿಯಮಗಳಲ್ಲಿ ತಿದ್ದುಪಡಿ ತರಲಾಗುತ್ತಿದೆ.

ಕಲ್ಲು ಗಣಿಗಾರಿಕೆ ಪ್ರತಿ ಟನ್‌ಗೆ 10 ರೂ. ಹೆಚ್ಚಳ: ಸರ್ಕಾರದ ಸಂಪನ್ಮೂಲ ವೃದ್ಧಿಸುವ ಉದ್ದೇಶದಿಂದ ಇನ್ನು ಮುಂದೆ ಕಲ್ಲು ಗಣಿಗಾರಿಕೆಗೆ ಪ್ರತಿ ಮೆಟ್ರಿಕ್ ಟನ್‌ಗೆ 10 ರೂ. ದರ ಹೆಚ್ಚಳಕ್ಕೆ ಸಂಪುಟ ಸಮ್ಮತಿಸಿದೆ.

ಇದರಿಂದ ಬೊಕ್ಕಸಕ್ಕೆ 311 ಕೋಟಿ ರೂ. ಹೆಚ್ಚುವರಿ ರಾಜಸ್ವ ಸಂಗ್ರಹವಾಗಲಿದೆ, ಪ್ರಸ್ತುತ ಪ್ರತಿ ಮೆಟ್ರಿಕ್ ಟನ್‌ಗೆ 70 ರೂ. ಇದ್ದು, ಈ ಮೊತ್ತ 80 ರೂ.ಗೆ ಹೆಚ್ಚಳವಾಗಲಿದೆ. ಈ ಕಾರಣಕ್ಕಾಗಿ ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳಿಗೆ ತಿದ್ದುಪಡಿಗೆ ಅನುಮೋದನೆ ನೀಡಲಾಗಿದೆ ಎಂದರು.

ಡಾ.ಬಿ.ಆರ್.ಅಂಬೇಡ್ಕರ್ ಅವರಿಗೆ ನಮನ



ಸಂವಿಧಾನ ಶಿಲ್ಪಿ, ಡಾ ಬಿ.ಆರ್.ಅಂಬೇಡ್ಕರ್ ಅವರ 68ನೇ ಮಹಾಪರಿನಿಬ್ಬಾಣ ದಿನವನ್ನು ನಾಗವಾಲ ಗ್ರಾಮದ ಡಾ.ಬಿ.ಆರ್.ಅಂಬೇಡ್ಕರ್ ಯುವಕರ ಸಂಘದ ವತಿಯಿಂದ ಆಚರಿಸಲಾಯಿತು. ಗ್ರಾಮದ ಎಲ್ಲಾ ಬೀದಿಗಳಿಂದಲೂ ಗ್ರಾಮಸ್ಥರು ದೀಪ ಹಿಡಿದು ತಂದು ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ನಮನ ಸಲಿಸಿದರು ಕೆಪಿಸಿಸಿ ಕಾರ್ಯದರ್ಶಿ ಸಿ.ನರೇಂದ್ರ, ಗ್ರಾಮದ ಗಡಿ ದೊಡ್ಡ ಯಜಮಾನರಾದ ಚಂದ್ರಶೇಖರ್, ಗ್ರಾಪಂ ಅಧ್ಯಕ್ಷೆ ಕಾಮಾಕ್ಷಮ್ಮ ಬಸವನಾಯಕ, ಸದಸ್ಯರಾದ ಧನಂಜಯ, ಪ್ರಕಾಶ್, ಮುಖಂಡರಾದ ಮಹದೇವಪ್ಪ ,ಸಿ.ಮಹಾದೇವಪ್ಪ, ಎನ್.ಎಲ್.ಪ್ರಕಾಶ್, ಕೆ.ಮಹೇಶ್ ಇನ್ನಿತರರಿದ್ದರು

ಸೇವಾ ಕಾರ್ಯಗಳೊಂದಿಗೆ ಕೃಷ್ಣಕುಮಾರ್ ಸಾಗರ್ ಹುಟ್ಟುಹಬ್ಬ ಆಚರಣೆ



ಕಾಂಗ್ರೆಸ್ ಮುಖಂಡ, ಉದ್ಯಮಿ ಕೃಷ್ಣಕುಮಾರ್ ಸಾಗರ್ ಹುಟ್ಟುಹಬ್ಬವನ್ನು ಅಭಿಮಾನಿಗಳು ನಾನಾ ಸೇವಾ ಕಾರ್ಯಗಳೊಂದಿಗೆ ಆಚರಿಸಿದರು.

ಮೈಸೂರು, ಡಿ.6– ಕಾಂಗ್ರೆಸ್ ಮುಖಂಡ ಹಾಗೂ ಸುಮಿತ್ರ ಸ್ಟೀಲ್ ಮಾಲೀಕ, ಉದ್ಯಮಿ ಕೃಷ್ಣಕುಮಾರ್ ಸಾಗರ್ ಅವರ 50ನೇ ಹುಟ್ಟುಹಬ್ಬವನ್ನು ವಿವಿಧ ಸೇವಾ ಕಾರ್ಯಕ್ರಮಗಳೊಂದಿಗೆ ಅಭಿಮಾನಿಗಳು ಆಚರಿಸಿದರು.

ಕೃಷ್ಣಕುಮಾರ್ ಸಾಗರ್ ಅವರು ರಾಮಕೃಷ್ಣ ನಗರದ ಪಾರ್ಕ್‌ನಲ್ಲಿ ಸಸಿಗಳನ್ನು ನೆಟ್ಟು ಹುಟ್ಟುಹಬ್ಬವನ್ನು ಆಚರಿಸಿಕೊಂಡರು. ಉತ್ತನಹಳ್ಳಿಯಲ್ಲಿರುವ ಜ್ವಾಲಾಮುಖಿ ತ್ರಿಪುರಸುಂದರಿ ದೇವಸ್ಥಾನಕ್ಕೆ ಪತ್ನಿ ಪದ್ಮಶ್ರೀ, ತಾಯಿ ಕೆಂಪಮ್ಮ, ತಂದೆ ಚೌಡೇಗೌಡ, ಮಕ್ಕಳಾದ ಸುಕೃತ್ ಸಾಗರ್, ಸುಕೃಪ್ ಸಾಗರ್‌ರೊಂದಿಗೆ ತೆರಳಿ ವಿಶೇಷ ಪೂಜೆ ಸಲ್ಲಿಸಿದರು. ನಂತರ ಹೊಸಹುಂಡಿ ಪೆಟ್ರೋಲ್ ಬಂಕ್ ಬಳಿ ಅಭಿಮಾನಿಗಳು ಕೇಕ್ ಕತ್ತರಿಸಿ ಪಟಾಕಿ ಸಿಡಿಸಿ ಅಭಿನಂಧಿಸಿದರು. ಅರವಿಂದ ನಗರದಲ್ಲಿರುವ ಮಾನಸ ಆಪ್ತ ಸಮಾಲೋಚನಾ ಕೇಂದ್ರದಲ್ಲಿ ಬೆಳಗಿನ ಉಪಾಹಾರ ವಿತರಿಸಲಾಯಿತು. ಮನೆಯ ಬಳಿ ನಡೆದ ವೇದಿಕೆ ಕಾರ್ಯಕ್ರಮದಲ್ಲಿ 500 ಮಹಿಳೆಯರಿಗೆ ಕುಕ್ಕರ್ ವಿತರಿಸಲಾಯಿತು.

ಈ ಸಂದರ್ಭದಲ್ಲಿ ನಗರ ಪಾಲಿಕೆಯ ಮಾಜಿ ಸದಸ್ಯ ಕೆ.ವಿ.ಶ್ರೀಧರ್, ಚಿತ್ರನಟ ಜಯಪ್ರಕಾಶ್, ಎಪಿಎಂಸಿ ಮಾಜಿ ಅಧ್ಯಕ್ಷ ಹೊಸಹುಂಡಿ ರಘು, ಮುಖಂಡರಾದ ನಾಡನಹಳ್ಳಿ ರವಿ, ಮಣಿಯಯ್ಯ. ಹರೀಶ್ ಮೊಗಣ್ಣ, ಹಂಚ್ಯ ಸಣ್ಣಸ್ವಾಮಿ, ಗಡ್ಡಬಸಪ್ಪ, ಧನಗಳ್ಳಿ ಬಸವರಾಜು, ಅಶ್ವಿನಿ ರೇವಣ್ಣ, ಶಂಕರ, ರಾಜೇಶ್, ಮತ್ತಿತರರಿದ್ದರು.

ಬಳ್ಳಾರಿಯಲ್ಲಿ ಬಾಣಂತಿಯರ ಸಾವಿನ ಸಂಖ್ಯೆ 5ಕ್ಕೆ ಏರಿಕೆ

ನನ್ನ ತಪ್ಪಿದ್ರೆ ರಾಜೀನಾಮೆಗೆ ಸಿದ್ಧ



ಆರೋಗ್ಯ ಇಲಾಖೆ ಸಚಿವ ದಿನೇಶ್ ಗುಂಡೂರಾವ್



ಬಳ್ಳಾರಿ ಜಿಲ್ಲಾಸ್ಪತ್ರೆಯಲ್ಲಿ ಅಸುನೀಗಿದ ಸುಮೈಯಾ

ಬೆಂಗಳೂರು/ಬಳ್ಳಾರಿ, ಡಿ.6– ಬಳ್ಳಾರಿ ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಕೇಂದ್ರದಲ್ಲಿ (ಬಿಎಂಸಿಆರ್‌ಸಿ) ಬಾಣಂತಿಯೊಬ್ಬರು ಮೃತಪಟ್ಟಿರುವುದಾಗಿ ವರದಿಯಾಗಿದ್ದು, ಒಟ್ಟು ಸಾವನ್ನಪ್ಪಿದವರ ಸಂಖ್ಯೆ ಐದಕ್ಕೆ ಏರಿದೆ. ಡಿಸೆಂಬರ್ 5ರ ರಾತ್ರಿ ನಡೆದ ಸಾವಿನ ಬಗ್ಗೆ ತನಿಖೆ ನಡೆಸಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದು ಭರವಸೆ ನೀಡಿದರು.

ಈ ಮಧ್ಯೆ ಬಾಣಂತಿಯರ ಸಾವಿನ ಕುರಿತಂತೆ ಪ್ರತಿಕ್ರಿಯಿಸಿರುವ ಆರೋಗ್ಯ ಇಲಾಖೆ ಸಚಿವ ದಿನೇಶ್ ಗುಂಡೂರಾವ್ ಅವರು, ಜಿಲ್ಲಾಸ್ಪತ್ರೆಯಲ್ಲಿ ಏನೆಲ್ಲಾ ನ್ಯೂನತೆಗಳಾಗಿವೆ ಎಂದು ನಾವು ತನಿಖೆ ಮಾಡುತ್ತಿದ್ದೇವೆ. ನಮಗೆ ಗೊತ್ತಾಗದೇ ಇನ್ನೆಷ್ಟು ಬಾಣಂತಿಯರು ಮೃತಪಟ್ಟಿದ್ದಾರೆ ಗೊತ್ತಿಲ್ಲ. ಔಷಧಿ ತಯಾರಿಸಿದ ಕಂಪನಿ ಮೇಲೆ ಕ್ರಮ ಕೈಗೊಳ್ಳುತ್ತಿದ್ದೇವೆ. ಮೃತ ಬಾಣಂತಿಯರ ಕುಟುಂಬಸ್ಥರಿಗೆ ಪರಿಹಾರ ಘೋಷಿಸಿದ್ದೇವೆ. ಇನ್ಮುಂದೆ ಇಂತಹ ಘಟನೆಗಳು ಆಗದಂತೆ ಕ್ರಮಗಳನ್ನು ಕೈಗೊಳ್ಳುತ್ತೇವೆ. ಒಂದು ವೇಳೆ ನನ್ನ ತಪ್ಪಿದ್ದರೆ ರಾಜೀನಾಮೆ ಕೊಡಲು ಸಿದ್ಧ ಎಂದು ಹೇಳಿದ್ದಾರೆ.

23 ವರ್ಷದ ಕೋಲ್ಮಿ ಸುಮೈಯಾ ನವೆಂಬರ್ 11ರಂದು ಆಸ್ಪತ್ರೆಗೆ ದಾಖಲಾಗಿದ್ದು ಸಿಸೇರಿಯನ್ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದರು. ನಂತರ ಅವರಿಗೆ ಮೂತ್ರಪಿಂಡ ವೈಫಲ್ಯ ಸಮಸ್ಯೆ ಕಾಣಿಸಿಕೊಂಡಿತ್ತು ಎಂದು ಹಿರಿಯ ಆರೋಗ್ಯ ಇಲಾಖೆಯ ಅಧಿಕಾರಿಗಳು ತಿಳಿಸಿದ್ದಾರೆ. ಸಿಸೇರಿಯನ್ ಶಸ್ತ್ರಚಿಕಿತ್ಸೆ ನಂತರ ಆಕೆಯ ಆರೋಗ್ಯದಲ್ಲಿ ವ್ಯತ್ಯಯವಾಗಿದ್ದು ಆಕೆಯನ್ನು ಡಯಾಲಿಸಿಸ್‌ಗೆ ಒಳಪಡಿಸಬೇಕಾಗಿತ್ತು. ಕಳೆದ ರಾತ್ರಿ ಆಕೆ ಮೃತಪಟ್ಟಿದ್ದಾರೆ ಅವರು ತಿಳಿಸಿದ್ದಾರೆ. ಒಂಬತ್ತೂ ಗರ್ಭಿಣಿಯರಿಗೆ ಸಿಸೇರಿಯನ್ ಮೂಲಕ ಹೆರಿಗೆ ಮಾಡಲಾಗಿತ್ತು. ಅವರ ಪೈಕಿ ಇವರಲ್ಲಿ ನಂದಿನಿ, ಲಲಿತಮ್ಮ, ರೋಜಾ, ಮುಸ್ಕಾನ್ ಹಾಗೂ ಸುಮಯಾ ಮೃತಪಟ್ಟಿದ್ದಾರೆ. ಇನ್ನುಳಿದ ನಾಲ್ವರು ಬಾಣಂತಿಯರು ಚಿಕಿತ್ಸೆ ಪಡೆದು ಬಿಡುಗಡೆಯಾಗಿದ್ದಾರೆ. ಈ ಪ್ರಕರಣಗಳಲ್ಲಿ ಎಲ್ಲಾ ನವಜಾತ ಶಿಶುಗಳು ಆರೋಗ್ಯವಾಗಿವೆ.

ಸಿಎಂ ತನಿಖೆ ಭರವಸೆ: ಆರೋಗ್ಯ ಇಲಾಖೆ ಪ್ರಕಾರ, ಬಳ್ಳಾರಿಯ ಜಿಲ್ಲಾ ಆಸ್ಪತ್ರೆಯಲ್ಲಿ ನವೆಂಬರ್ 9 ರಿಂದ 11ರ ನಡುವೆ ನಾಲ್ಕು ತಾಯಂದಿರ ಸಾವು ವರದಿಯಾಗಿದೆ. ಪಶ್ಚಿಮ ಬಂಗಾಳ ಮೂಲದ ಫಾರ್ಮಾ ಕಂಪನಿಯು ಸರಬರಾಜು ಮಾಡಿದ ರಿಂಗರ್ ಲ್ಯಾಕ್ಟೇಟ್ (ಆರ್‌ಎಲ್) ಬ್ಯಾಚ್‌ಗಳನ್ನು ಬಳಸಲಾಗಿದೆ ಎಂದು ಹೇಳಲಾಗಿದೆ. ಈ ಬಗ್ಗೆ ತನಿಖೆ ನಡೆಸಲಾಗುವುದು ಎಂದು ಸಿದ್ದರಾಮಯ್ಯ ಭರವಸೆ ನೀಡಿದರು. ಹಲವೆಡೆ ತಾಯಂದಿರ ಸಾವುಗಳು ಸಂಭವಿಸುತ್ತವೆ. ಪರಿಸ್ಥಿತಿಯ ಅರಿವಿದೆ ಎಂದು ಒಪ್ಪಿಕೊಂಡ ಸಿದ್ದರಾಮಯ್ಯ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಲಾಗಿದ್ದು ತನಿಖೆಗೆ ಆದೇಶಿಸಲಾಗಿದೆ ಎಂದರು.

ರಾಜೀನಾಮೆಗೆ ಸಿದ್ಧ: ಬೆಂಗಳೂರಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಸಚಿವ ರಾವ್, ಪರಿಸ್ಥಿತಿ ಸರಿ ಹೋಗದಿದ್ದರೆ ನಾನು ರಾಜೀನಾಮೆ ನೀಡಲು ಸಿದ್ಧ, ಇದು ಪ್ರತಿಷ್ಠೆ ಅಥವಾ ಅಧಿಕಾರಕ್ಕೆ ಸಂಬಂಧಿಸಿದ್ದಲ್ಲ, ಇದು ಜನರ ಜೀವಕ್ಕೆ ಸಂಬಂಧಿಸಿದ್ದು, ಬಳ್ಳಾರಿಯಲ್ಲಿ ನಡೆದ ತಾಯಂದಿರ ಮರಣವನ್ನು ನಾವು ಗಂಭೀರವಾಗಿ ಪರಿಗಣಿಸಿದ್ದೇವೆ ಮತ್ತು ಸುಧಾರಣೆಗಳನ್ನು ತರಲು ಕಾನೂನು ಕ್ರಮಗಳನ್ನು ಕೈಗೊಳ್ಳುತ್ತೇವೆ. ಈ ಪ್ರಕರಣದ ತನಿಖೆಗೆ ತಮ್ಮ ಅಭ್ಯಂತರವಿಲ್ಲ ಎಂದು ರಾವ್ ಹೇಳಿದರು. ತನಿಖೆ ನಡೆಯಬೇಕು, ಯಾರೇ ಹೊಣೆಗಾರರಾದರೂ ಕ್ರಮ ಎದುರಿಸಬೇಕಾಗುತ್ತದೆ. ವ್ಯವಸ್ಥೆಯನ್ನು ಸುಧಾರಿಸಲು ಎಲ್ಲಾ ಅಗತ್ಯ ಪ್ರಯತ್ನಗಳನ್ನು ಮಾಡಲು ನಾವು ಬದ್ಧರಾಗಿದ್ದೇವೆ. ನಾನು ಇದಕ್ಕೆ ವಿರೋಧ ಪಕ್ಷದ ಬೆಂಬಲವನ್ನು ಸಹ ಕೋರುತ್ತೇನೆ ಎಂದರು.

ಮೈಸೂರು ಮಿತ್ರ ಶನಿವಾರ 7 ಡಿಸೆಂಬರ್ 2024

ಜಿಲ್ಲಾ ಕಾರಾಗೃಹದಲ್ಲಿ ಗಾಂಜಾ ಮಾದರಿ ಪತ್ತೆ

ಮೂವರ ವಿರುದ್ಧ ಪ್ರಕರಣ ದಾಖಲು

ಮಂಡ್ಯ, ಡಿ.6– ನಗರದ ಜಿಲ್ಲಾ ಕಾರಾಗೃಹ ಕೇಂದ್ರದಲ್ಲಿ ಖೈದಿಯನ್ನು ನೋಡಲು ಬಂದಿದ್ದ ವೇಳೆ ಗಾಂಜಾ ಮಾದರಿಯ ವಸ್ತು ಪತ್ತೆಯಾಗಿದ್ದು, ಇಬ್ಬರು ಖೈದಿ ಸೇರಿದಂತೆ ಮೂವರ ವಿರುದ್ಧ ನಗರದ ಪಶ್ಚಿಮ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಜಿಲ್ಲಾ ಕಾರಾಗೃಹ ಕೇಂದ್ರದಲ್ಲಿರುವ ಖೈದಿ ಮಧುಸೂದನ್ ಎಂಬಾತನನ್ನು ನೋಡಲು ಆತನ ತಂದೆ ಶಿವಣ್ಣ ನ.29ರಂದು ಜೈಲಿಗೆ ಆಗಮಿಸಿದ್ದರು. ಆಗ ಆತನ ಜೊತೆಯಲ್ಲಿದ್ದ ಬ್ಯಾಗ್ ಅನ್ನು ಪರಿಶೀಲಿಸಿದಾಗ ಗಾಂಜಾ ಮಾದರಿ ವಸ್ತು ಪತ್ತೆಯಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಕೂಡಲೇ ಎಚ್ಚೆತ್ತ ಸಿಬ್ಬಂದಿಗಳು ಸಹಾಯಕ ಜೈಲರ್ ನಾಗರಾಜು ಅವರ ಗಮನಕ್ಕೆ ಇದನ್ನು ತಂದಿದ್ದಾರೆ. ನಾಗರಾಜು ಕೂಡಲೇ ಜೈಲು ಅಧೀಕ್ಷಕ ಲೋಕೇಶ್ ಅವರಿಗೆ ಮಾಹಿತಿ ನೀಡಿದ್ದಾರೆ. ಲೋಕೇಶ್ ಅವರು ದ್ವಾರಕ್ಕೆ ಬಂದು ನೋಡಿದಾಗ ಗಾಂಜಾ ವಸ್ತು ಪತ್ತೆಯಾಗಿದೆ. ಕೂಡಲೇ ಬಂದಿದ್ದ ಶಿವಣ್ಣ ಎಂಬಾತನನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ ಜೈಲಿನ ಖೈದಿಯಾಗಿರುವ ನಾಗೇಂದ್ರ ಆಲಿಯಾಸ್ 7 ಸಂಜು ತರಲು ಹೇಳಿರುವುದಾಗಿ ವಿಚಾರಣೆಯಿಂದ ತಿಳಿದು ಬಂದಿದೆ. ಆದ್ದರಿಂದ ಜೈಲಿನ ಒಳಗೆ ಗಾಂಜಾ ಮಾದರಿಯ ವಸ್ತು ನುಸುಳಲು ಯತ್ನಿಸಿದ ಶಿವಣ್ಣ ಹಾಗೂ ಆತನ ಪುತ್ರ ಖೈದಿ ಮಧುಸೂದನ್ ಹಾಗೂ ಮತ್ತೊಬ್ಬ ಖೈದಿ ನಾಗೇಂದ್ರ ಆಲಿಯಾಸ್ 7ಸಂಜು ವಿರುದ್ಧ ಜೈಲು ಅಧೀಕ್ಷಕ ಲೋಕೇಶ್ ದೂರು ದಾಖಲಿಸಿದ್ದು, ಅದರಂತೆ ನಗರದ ಪಶ್ಚಿಮ ಠಾಣೆ ಪೊಲೀಸರು ಎಫ್‌ಐಆರ್ ದಾಖಲಿಸಿಕೊಂಡು ಮುಂದಿನ ಕ್ರಮ ಕೈಗೊಂಡಿದ್ದಾರೆ.

ಕೃಷಿ ಗಣತಿ ಪ್ರಗತಿ ಕುಂಠಿತ; ಕ್ರಮಕ್ಕೆ ಸೂಚನೆ



ಕೃಷಿ ಗಣತಿ ಸಮಿತಿಗಳ ಸಮನ್ವಯ ಸಮಿತಿ ಸಭೆಯಲ್ಲಿ ಜಿಲ್ಲಾಧಿಕಾರಿ ಕುಮಾರ್ ಮಾತನಾಡಿದರು.

ಮಂಡ್ಯ, ಡಿ.6– 11 ನೇ ಕೃಷಿ ಗಣತಿಯ ದತ್ತಾಂಶ ಪ್ರಗತಿ ಕುಂಠಿತಗೊಂಡಿದ್ದು, ಎಲ್ಲಾ ತಹಶಿಲ್ದಾರರು ಕೂಡಲೆ ಕ್ರಮ ಕೈಗೊಳ್ಳಿ ಎಂದು ಜಿಲ್ಲಾಧಿಕಾರಿ ಡಾ ಕುಮಾರ ಸೂಚಿಸಿದರು.

ಶುಕ್ರವಾರ ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ವಿಡಿಯೋ ಸಂವಾದದ ಮೂಲಕ ಜಿಲ್ಲಾ ಮಟ್ಟದ ಬೆಳೆ ಕಟಾವು, ಕೃಷಿ ಅಂಕಿ– ಅಂಶ ಹಾಗೂ 11ನೇ ಕೃಷಿ ಗಣತಿ ಸಮಿತಿಗಳ ಸಮನ್ವಯ ಸಮಿತಿ ಸಭೆ ನಡೆಸಿ ಮಾತನಾಡಿದ ಅವರು, 11ನೇ ಕೃಷಿ ಗಣತಿಯ ಎರಡನೇ ಹಂತದ ಕಾರ್ಯವು ಈಗಾಗಲೇ ಜಿಲ್ಲೆಯಾದ್ಯಂತ ಎಲ್ಲಾ ತಾಲೂಕುಗಳಲ್ಲಿ ಪ್ರಾರಂಭವಾಗಿದ್ದು, ಕಾರ್ಯವನ್ನು ಕೈಗೊಳ್ಳಲು ಗ್ರಾಮ ಆಡಳಿತ ಅಧಿಕಾರಿಗಳು ಮತ್ತು ರಾಜಸ್ವ ನಿರೀಕ್ಷಕರಿಗೆ ತರಬೇತಿಯನ್ನು ನೀಡಲಾಗಿದೆ. ಹಿಡುವಳಿದಾರರು ಮತ್ತು ಸರ್ವೆ ನಂಬರ್ ವಾರು 2021 –22ರ ಅವಧಿಯಲ್ಲಿ ಸಾಗುವಳಿ ಹಿಡುವಳಿದಾರ ಭೂಮಿಯ ಬಳಕೆಯ ವಿವರದ ವಿಸ್ತೀರ್ಣವನ್ನು ನಿಗದಿತ ಕಾಲಂ ಗಳಲ್ಲಿ ಪರಿಶೀಲಿಸಿ ಅಳವಡಿಸಬೇಕೆಂದರು.

ಹಿಡುವಳಿವಾರು ಬೆಳೆದ ಒಟ್ಟು ಬೆಳೆಗಳ ವಿವರವನ್ನು ಕುರಿತು ಮಾಹಿತಿಯನ್ನು ವೆಬ್ ಆಧಾರಿತ ಅಥವಾ ಮೊಬೈಲ್ ಆಪ್ ಮೂಲಕ ಕೈಗೊಳ್ಳಲಾಗುತ್ತಿದೆ. ಮಂಡ್ಯ ಜಿಲ್ಲೆಯಲ್ಲಿ ಶೇಕಡ 34% ರಷ್ಟು ಅಂದರೆ 294 ಗ್ರಾಮಗಳು ಮತ್ತು 1,57,000 ಹಿಡುವಳಿದಾರರು ಎರಡನೇ ಹಂತದ 11ನೇ ಕೃಷಿಗಣತಿಯ ಕ್ಷೇತ್ರ ಕಾರ್ಯವನ್ನು ಕೈಗೊಳ್ಳಲಾಗುತ್ತಿದ್ದು, ಗ್ರಾಮ ಆಡಳಿತ ಅಧಿಕಾರಿಗಳು ಗಣತಿದಾರರಾಗಿ ಹಾಗೂ ರಾಜಸ್ವ ನಿರೀಕ್ಷಕರು ಮೇಲ್ವಿಚಾರಕರಾಗಿ ಮೇಲ್ವಿಚಾರಣೆಯನ್ನು ನಡೆಸಿ ಗ್ರಾಮವಾರು ಮತ್ತು ಸರ್ವೆ ನಂಬರ್ ವರು ಇಡುವಳಿದಾರರ ಭೂಮಿಯ ಬಳಕೆಯ ವಿವರದ ವಿಸ್ತೀರ್ಣವನ್ನು ಮತ್ತು ಬೆಳೆದ ಒಟ್ಟು ಬೆಳೆಗಳ ವಿವರವನ್ನು ಪರಿಶೀಲಿಸಿ ಅನುಮೋದಿಸತಕ್ಕದ್ದು ಎಂದು ತಿಳಿಸಿದರು.

ಪ್ರತಿ ವರ್ಷ ಋತುವಾರ ಬೆಳೆ ವಿಮಾ ಯೋಜನೆ ಅಡಿ ಅಧಿಸೂಚಿತ ಬೆಳೆಗಳಿಗೆ ಹೋಬಳಿವಾರು ಗ್ರಾಮ ಪಂಚಾಯಿತಿ ಅವರು ಬೆಳೆಕಟ್ಟವು ಪ್ರಯೋಗಗಳನ್ನು ಯೋಜಿಸಲಾಗುತ್ತದೆ. 2024–25 ನೇ ಮುಂಗಾರು ಹಂಗಾಮಿಗೆ ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಭೀಮಾ (ವಿಮಾ) ಯೋಜನೆ ಅಡಿ ಬೆಳೆಕಟಾವು ಪ್ರಯೋಗಗಳು ನಮೂನೆ –1 ಪೂರ್ಣಗೊಂಡಿದೆ. ಬೆಳೆ ಕಟಾವು ಪ್ರಯೋಗಗಳ ಬೆಳೆವಾರು ನಮೂನೆ –2 ರಲ್ಲಿ ಬಾಕಿ ಉಳಿದಿರುವ ಪ್ರಯೋಗವನ್ನು ಯಾವುದೇ ವಿಳಂಬ ಮಾಡದೆ ಆದಷ್ಟು ಬೇಗ ಪೂರ್ಣಗೊಳಿಸಿ ಎಂದು ಹೇಳಿದರು.

ಪ್ರತಿ ವರ್ಷವೂ ಬೆಳೆ ಸಮೀಕ್ಷೆಯನ್ನು ಜಿಐಎಸ್ ಆಧಾರಿತ ಮೊಬೈಲ್ ಆಪ್ ಮೂಲಕ ಪ್ರತಿ ಫ್ಲಾಟ್‌ಗಳ ಬೆಳೆ ಸಮೀಕ್ಷೆ ನಡೆಸಿ ಬೆಳೆ ಸಮೀಕ್ಷೆಯಿಂದ ಬಂದ ದತ್ತಾಂಶಗಳನ್ನು ಮೇಲ್ವಿಚಾರಕರು ಮೇಲ್ವಿಚಾರಣೆ ಮಾಡಿ ಅನುಮೋದಿಸಿರುತ್ತಾರೆ. ಬೆಳೆ ಸಮೀಕ್ಷೆಯ ಬೆಳೆವಾರು ದತ್ತಾಂಶಗಳನ್ನು ಕೃಷಿ ಇಲಾಖೆ, ತೋಟಗಾರಿಕೆ ಇಲಾಖೆ ಸಮನ್ವಯದೊಂದಿಗೆ ತಾಲೂಕು ಮಟ್ಟದಲ್ಲಿ ಬೆಳೆ ಕ್ಷೇತ್ರ ವರದಿಯನ್ನು ತಯಾರಿಸಿ ತಾಲೂಕು ಮಟ್ಟದ ಸಮನ್ವಯ ಸಮಿತಿಯಿಂದ ಅನುಮೋದನೆಗೊಂಡ ವರದಿಯನ್ನು ದೃಢೀಕರಿಸಿ ಸಲ್ಲಿಸಬೇಕು ಎಂದು ತಿಳಿಸಿದರು.

2024 –25 ನೇ ಸಾಲಿನ ಮುಂಗಾರು ಋತುವಿನ ಬೆಳೆ ಸಮೀಕ್ಷೆಯ ವರದಿಯನ್ನು ಪರಿಶೀಲಿಸಿದಾಗ ಅಕ್ಟೋಬರ್ ಮಾಹಿತಿಯಲ್ಲಿ ಬಿತ್ತನೆಯಾಗಿರುವ ಹಿಂಗಾರು ಋತು ವಿನ ಹುರುಳಿ ಬೆಳೆಯನ್ನು ಮುಂಗಾರು ಋತುವಿನ ಬೆಳೆ ಸಮೀಕ್ಷೆಯಲ್ಲಿ ಜುಲೈ ಮತ್ತು ಆಗಸ್ಟ್ ಮಾಹಿತಿ ಎಂದು ಖಾಸಗಿ ನಿವಾಸಿಗಳು ಬೆಳೆ ಸಮೀಕ್ಷೆ ಆಪ್ ನಲ್ಲಿ ಅಪ್ಲೋಡ್ ಮಾಡಿದ್ದು, ಮೇಲ್ವಿಚಾರಕರು ಪರಿಶೀಲನೆ ಮಾಡದೆ ಅನುಮೋದನೆ ನೀಡಿರುತ್ತಾರೆ. ಆದ್ದರಿಂದ ಖಾಸಗಿ ನಿವಾಸಿಗಳಿಗೆ ಬೆಳೆ ಸಮೀಕ್ಷೆ ಕೈಗೊಳ್ಳುವ ಸಂದರ್ಭದಲ್ಲಿ ಋತುಗಳಿಗೆ ಅನುಗುಣವಾಗಿ ಬೆಳೆಗಳ ಬಿತ್ತನೆ ದಿನಾಂಕವನ್ನು ನಮೂದಿಸಲು ಹಾಗೂ ಮೇಲ್ವಿಚಾರಕರು ಈ ಬಗ್ಗೆ ಪರಿಶೀಲನೆ ಮಾಡಿ ಅನುಮೋದನೆ ನೀಡಬೇಕು ಎಂದರು.

ಸಭೆಯಲ್ಲಿ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿ ಕೇಶವ್ ಮೂರ್ತಿ, ಕೆಆರ್‌ಎಸ್‌ನ ಆಧುನೀಕರಣ ಮತ್ತು ಮಧ್ಯಮ ನೀರಾವರಿ ಯೋಜನೆಗಳ ವೃತ್ತ ಸಹಾಯಕ ಅಭಿಯಂತರ ವಿಶ್ವನಾಥ್.ಎಂ, ಕೃಷಿ ಇಲಾಖೆಯ ಜಂಟಿ ಕೃಷಿ ನಿರ್ದೇ ಶಕ ಅಶೋಕ್, ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಚೇರಿಯ ಸಹಾಯಕ ನಿರ್ದೇಶಕಿ ಸೌಮ್ಯ, ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಸಂವಿಧಾನದ ಆಶಯದಂತೆ ಬದುಕು ನಡೆಸೋಣ



ಮಂಡ್ಯದ ಕಾವೇರಿ ಉದ್ಯಾನವನದಲ್ಲಿರುವ ಡಾ.ಬಿ. ಆರ್.ಅಂಬೇಡ್ಕರ್ ಪ್ರತಿಮೆಗೆ ಬಿಜೆಪಿ ಮುಖಂಡ ಸಚ್ಚಿದಾನಂದ ಮಾಲಾರ್ಪಣೆ ಮಾಡಿದರು.

ಮಂಡ್ಯ, ಡಿ.6– ಡಾ.ಬಿ.ಆರ್. ಅಂಬೇಡ್ಕರ್ ಅವರು ಕಂಡಂತಹ ಕನಸಿಗೆ ಅನುಗುಣವಾಗಿ ಹಾಗೂ ಸಂವಿಧಾನದ ಆಶಯಗಳಂತೆ ಪಣತೊಟ್ಟು ನಾವೆಲ್ಲರೂ ಬದುಕಬೇಕು. ಅಂತೆಯೇ ಅವರ ಚಿಂತನೆಗಳನ್ನು ಮಕ್ಕಳ ಮನಸ್ಸಿನಲ್ಲಿ ಬಿತ್ತಬೇಕು ಎಂದು ಶ್ರೀರಂಗಪಟ್ಟಣ ಬಿಜೆಪಿ ಮುಖಂಡ ಇಂಡುವಾಳು ಸಚ್ಚಿದಾನಂದ ಹೇಳಿದರು.

ನಗರದ ಕಾವೇರಿ ಉದ್ಯಾನದಲ್ಲಿ ಡಾ.ಬಿ. ಆರ್.ಅಂಬೇಡ್ಕರ್ ಪ್ರತಿಮೆಗೆ ಮಾಲಾ ರ್ಪಣೆ ಮಾಡಿ ಮಾತನಾಡಿದ ಅವರು, ಬಾಬಾ ಸಾಹೇಬ್ ಅಂಬೇಡ್ಕರ್ ಅವರು ದೇಶ ಕಂಡಂತಹ ಹೊಸ ಶಕ್ತಿ ಹಾಗೂ ಚೇತನ. ದೇಶಕ್ಕೆ ಅತಿ ದೊಡ್ಡ ಸಂವಿಧಾನವನ್ನು ಕೊಟ್ಟಂತಹ ಪುಣ್ಯಾತ್ಮರು. ಅವರು ನೀಡಿರುವ ಸಂವಿಧಾನದ ಅಡಿಯಲ್ಲಿ ನಾವೆಲ್ಲರೂ ಜೀವಿಸುತ್ತಿದ್ದು, ಅಂತಹ ಚೈತನ್ಯ ನಮ್ಮ ದೇಶಕ್ಕೆ ಧಕ್ಕಿದ್ದು ನಮ್ಮೆಲ್ಲರ ಪುಣ್ಯವಾಗಿದೆ ಎಂದರು.

ಬೇಲೂರು ಗ್ರಾಪಂ ಮಾಜಿ ಅಧ್ಯಕ್ಷ ಯತ್ತಗದಹಳ್ಳಿ ಸಂಜು, ಮಂಗಲ ರಮೇಶ್, ಬಿಜೆಪಿ ರೈತ ಮೋರ್ಚಾ ತಾಲೂಕು ಅಧ್ಯಕ್ಷ ಹನಿಯಂಬಾಡಿ ಸತೀಶ್ ಇತರರಿದ್ದರು.

ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಅಧಿಕಾರ ಸ್ವೀಕಾರ



ಗ್ಯಾರಂಟಿ ಯೋಜನೆ ತಾಲೂಕು ಅಧ್ಯಕ್ಷ ಎ.ಬಿ.ಕುಮಾರ್ ಅಧಿಕಾರ ಸ್ವೀಕರಿಸಿದರು.

ಕೆ.ಆರ್.ಪೇಟೆ, ಡಿ.6– ರಾಜ್ಯ ಸರ್ಕಾರದ ಮಹತ್ವಾಕಾಂಕ್ಷಿಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ತಾಲೂಕು ಅಧ್ಯಕ್ಷರಾಗಿ ನೇಮಕಗೊಂಡಿರುವ ಅಗ್ರಹಾರಬಾಚಹಳ್ಳಿ ಎ.ಬಿ.ಕುಮಾರ್ ಇಂದು ತಾಲೂಕು ಪಂಚಾಯಿತಿ ಕಚೇರಿಯಲ್ಲಿ ಕಾರ್ಯನಿರ್ವಾಹಕ ಅಧಿಕಾರಿಗಳ ಸಮ್ಮುಖದಲ್ಲಿ ಅಧಿಕಾರ ಸ್ವೀಕರಿಸಿದರು.

ತಾಲೂಕು ಪಂಚಾಯಿತಿ ಕಾರ್ಯಾಲಯದ ಕಟ್ಟಡದಲ್ಲಿ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಕಚೇರಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಾಜಿ ಶಾಸಕರಾದ ಕೆ.ಬಿ.ಚಂದ್ರಶೇಖರ್, ಬಿ.ಪ್ರಕಾಶ್, ತಾ.ಪಂ.ಇಓ ಸುಷ್ಮಾ, ಸಹಾಯಕ ನಿರ್ದೇಶಕ ಡಾ.ನರಸಿಂಹ ರಾಜು ಹಾಗೂ ಸಮಿತಿಯ ಎಲ್ಲಾ ಸದಸ್ಯರು ಹಾಗೂ ಮುಖಂಡರ ಸಮ್ಮುಖದಲ್ಲಿ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ನೂತನ ಅಧ್ಯಕ್ಷರಾಗಿ ಅಧಿಕಾರಿ ಸ್ವೀಕಾರ ಮಾಡಿ, ಗ್ಯಾರಂಟಿ ಯೋಜನೆಗಳು ಸಮರ್ಪಕವಾಗಿ ಅರ್ಹ ಫಲಾನುಭವಿಗಳಿಗೆ ಸಿಗುವಂತೆ ನೋಡಿಕೊಳ್ಳಲಾಗುವುದು ಎಂದರು.

ನೂತನ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಕಚೇರಿಯನ್ನು ಮಾಜಿ ಶಾಸಕ ಕೆ.ಬಿ.ಚಂದ್ರಶೇಖರ್ ಉದ್ಘಾಟಿಸಿದರು. ನೂತನ ಅಧ್ಯಕ್ಷ ಕುಮಾರ್ ಮತ್ತು ಸದಸ್ಯರನ್ನು ಮಾಜಿ ಶಾಸಕ ಬಿ.ಪ್ರಕಾಶ್ ಅಭಿನಂದಿಸಿದರು. ಈ ಸಂದರ್ಭದಲ್ಲಿ ತಾಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಸದಸ್ಯರಾಗಿ ವಳಗೆರೆ ಮೆಣಸ ಕುಮಾರ್, ಚಟ್ಟೇನಹಳ್ಳಿ ಉದೇಶ್, ಸಿಂಗನಹಳ್ಳಿ ಗೋಪಾಲ್, ಬಂಡಿಹೊಳೆ ಯೋಗೇಶ್, ಗೋವಿಂದನಹಳ್ಳಿಕೊಪ್ಪಲು ಶ್ಯಾಮಣ್ಣ, ಬೂಕನಕೆರೆ ಬಿ.ಸಿ.ಮಾಧು, ದೊಡ್ಡತಾರಹಳ್ಳಿ ಸೋಮಶೇಖರ್, ಶಿವಣ್ಣ, ಗೊರವಿ ಕುಮಾರ್, ಟೌನ್ ಕನಕದಾಸನಗರ ಶಿವಮ್ಮ, ಸಿಂಧುಘಟ್ಟ ಅಫೀಜ್ ಉಲ್ಲಾ, ಬೊಮ್ಮೇನಹಳ್ಳಿ ಲತಾ, ಬೂಕನಕೆರೆ ರೂಪಾ, ಯಗಚಗುಪ್ಪೆ ಶಿವಲಿಂಗಪ್ಪ, ಹಾಗೂ ಸದಸ್ಯ ಕಾರ್ಯದರ್ಶಿಯಾಗಿ ತಾಪಂ ಕಾರ್ಯನಿರ್ವಾಹಕ ಅಧಿಕಾರಿ ಸುಷ್ಮಾ ಅವರು ಸಮಿತಿಯಲ್ಲಿ ಇದ್ದಾರೆ.

ಸರ್ಕಾರಿ ಶಾಲೆ-ಕಾಲೇಜು ಉಳಿಸಿ: ಶಾಸಕ ಹೆಚ್.ಟಿ.ಮಂಜು



ಹೆಚ್ಚುವರಿ ಕೊಠಡಿ ನಿರ್ಮಾಣಕ್ಕೆ ಶಾಸಕ ಮಂಜು ಭೂಮಿಪೂಜೆ ನೆರವೇರಿಸಿದರು.

ಕಿಕ್ಕೇರಿ, ಡಿ.6– ಸರ್ಕಾರಿ ಶಾಲಾ, ಕಾಲೇಜುಗಳು ಹೈಟೆಕ್ ರೀತಿ ಪರಿವರ್ತನೆಯಾಗುತ್ತಿದ್ದು, ಪೋಷಕರು ಸರ್ಕಾರಿ ಶಾಲೆ ಉಳಿಸಲು ಮುಂದಾಗಬೇಕು ಎಂದು ಶಾಸಕ ಹೆಚ್.ಟಿ.ಮಂಜು ಹೇಳಿದರು.

ಪಟ್ಟಣದ ಕೆಪಿಎಸ್ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಹೆಚ್ಚುವರಿ ಕೊಠಡಿ ನಿರ್ಮಾಣಕ್ಕೆ ಭೂಮಿಪೂಜೆ ನೆರವೇರಿಸಿ ಮಾತನಾಡಿ, ಇತ್ತೀಚೆಗೆ ಸರ್ಕಾರಿ ಶಾಲೆಗಳ ದಾಖಲಾತಿ ಕ್ಷೀಣಿಸುತ್ತಿದೆ. ತಾಲೂಕಿನ ಹಲವು ಸರ್ಕಾರಿ ಪಿಯುಸಿ ಕಾಲೇಜು ದಾಖಲಾತಿ ಕೊರತೆಗಳಿಂದ ಮುಚ್ಚುವ ಹಂತ ತಲುಪುತ್ತಿದೆ. ಇನ್ನಾದರೂ ಸರ್ಕಾರಿ ಶಾಲೆ, ಕಾಲೇಜು ಉಳಿಸಲು ಪೋಷಕರು ಮುಂದಾಗಬೇಕಿದೆ. ಇಲ್ಲಿನ ಕಾಲೇಜಿಗೆ ಹೆಚ್ಚುವರಿ 3 ಕೊಠಡಿಗಳನ್ನು 75 ಲಕ್ಷ ರೂ. ವೆಚ್ಚದಲ್ಲಿ ನಿರ್ಮಿಸಲಾಗುತ್ತಿದೆ. ಸ್ಪರ್ಧಾತ್ಮಕ ಪರೀಕ್ಷೆಗಳಿಂದ ಉಪನ್ಯಾಸಕರು ಆಯ್ಕೆಯಾಗಿದ್ದಾರೆ. ಪಾಠಪ್ರವಚನ ನಡೆಯದಿದ್ದರೆ ಪೋಷಕರು, ವಿದ್ಯಾರ್ಥಿಗಳು ತಿಳಿಸಿ ಎಂದರು.

ರಾಜ್ಯ ಸಹಕಾರ ಮಾರಾಟ ಮಹಾಮಂಡಳಿ ನಿರ್ದೇಶಕ ಸಿ.ಎನ್. ಪುಟ್ಟಸ್ವಾಮಿಗೌಡ ಮಾತನಾಡಿದರು.

ಬಿಇಓ ವೈಕೆತಿಮ್ಮೇಗೌಡ, ಮಂಜೇಗೌಡ, ಮಲ್ಲೇಶ್, ಶೇಖರ್, ದಿನೇಶ್‌ಬಾಬು, ಪುಟ್ಟರಾಜು, ಎಸ್.ಕೆ. ಬಾಲಕೃಷ್ಣ, ರಾಜೇಶ್, ಜ್ಯೋತಿ, ದೊರೆಸ್ವಾಮಿ, ಚಲುವನಾರಾಯಣಸ್ವಾಮಿ, ಕುಮಾರಸ್ವಾಮಿ, ಇಸಿಒ ನವೀನ್, ಸಿಆರ್‌ಪಿ ನಾರಾಯಣ್, ಬಸವರಾಜು, ಪ್ರತಾಪ್ ಇದ್ದರು.

ಒಂದನೇ ಪುಟದಿಂದ

ಅಧಿಕಾರ ಹಂಚಿಕೆ ಆದರೂ ಖುಷಿಯಿಂದಲೇ ಆಗುತ್ತೆ

ಹಂಚಿಕೆ ಪಕ್ಷದ ವೈಯಕ್ತಿಕ ವಿಚಾರ. ಏನೇ ತೀರ್ಮಾನವಾದರೂ ನಗುನಗುತ್ತಲೇ ನಡೆಯುತ್ತದೆ ಎಂದರು.

ಪಾನಿಪುರಿ ವ್ಯಾಪಾರವಲ್ಲ: ಕಾಂಗ್ರೆಸ್ ಸರ್ಕಾರ ಬೀಳಲಿದೆ ಎಂಬ ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, ಸರ್ಕಾರ ಏನು ಕಡ್ಲೆಪುರಿನಾ? ಅದೇನು ಪಾನಿಪುರಿ ವ್ಯಾಪಾರನಾ?. ಪುಟ್ಟರಾಜು, ಅನ್ನದಾನಿ ಅವರ ಮಾತಿಗೆಲ್ಲಾ ಉತ್ತರ ಕೊಡುವುದು ಸರಿಯಲ್ಲ. ನಾವು ಒಗ್ಗಟ್ಟಾಗಿದ್ದೇವೆ. ಬಿಜೆಪಿ ಹಾಗೂ ಜೆಡಿಎಸ್‌ನವರು ಒಗ್ಗಟ್ಟಿನ ಬಗ್ಗೆ ಕಾಂಗ್ರೆಸ್ ನೋಡಿ ಕಲಿಯಬೇಕು. ಮೊದಲು ಜಿ.ಟಿ.ದೇವೇಗೌಡರನ್ನು ಸರಿಮಾಡಿಕೊಳ್ಳಲಿ. ಅಷ್ಟೊಂದು ಮಾತನಾಡುವ ಯತ್ನಾಳ್ ವಿರುದ್ಧ ಕ್ರಮ ಕೈಗೊಳ್ಳಲಿ ಎಂದು ಎದಿರೇಟು ನೀಡಿದರು.

ಬೈಗುಳದಿಂದ ಗೆಲುವಿನ ಅಂತರ ಹೆಚ್ಚಿತು: ಪ್ರಜಾಪ್ರಭುತ್ವದಲ್ಲಿ ಜನರ ತೀರ್ಪು ಅಂತಿಮ. ರಾಷ್ಟ್ರೀಯ ಪಕ್ಷ ಬಿಜೆಪಿ ಹಾಗೂ ಜೆಡಿಎಸ್‌ನವರಿಗೆ ತಾಳ್ಮೆಯೇ ಇಲ್ಲ. ಕಾಂಗ್ರೆಸ್ 136 ಸ್ಥಾನ ಗೆದ್ದು ಸರ್ಕಾರ ರಚಿಸಿ, ಗ್ಯಾರಂಟಿ ಯೋಜನೆಗಳೊಂದಿಗೆ ಉತ್ತಮ ಆಡಳಿತ ನೀಡುತ್ತಿರುವಾಗ ಆರಂಭದಿಂದ ಈವರೆಗೂ ಪ್ರತಿಪಕ್ಷದವರು ಮಲಗಿಯೇ ಇಲ್ಲ. ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್, ಮಂತ್ರಿಗಳನ್ನು ಬೈಯ್ಯುವುದು, ಗ್ಯಾರಂಟಿ ಬೇಡ, ಸರ್ಕಾರ ತೆಗೆಯುತ್ತೇವೆ ಎನ್ನುತ್ತಲೇ ಬಂದಿದ್ದಾರೆ. ಮಾಜಿ ಪ್ರಧಾನಿ ದೇವೇಗೌಡರ ಬಾಯಲ್ಲಿ ಸರ್ಕಾರ ಕಿತ್ತೊಗೆಯುತ್ತೇವೆ, ಸಿದ್ದರಾಮಯ್ಯನ ಗರ್ವ ಮುರಿಯುತ್ತೇವೆ ಎಂಬ ಪದಗಳು ಬಂದಿವೆ. ಇದು ಪ್ರಜಾಪ್ರಭುತ್ವದಲ್ಲಿ ತಪ್ಪಲ್ಲವೇ?. ಚನ್ನಪಟ್ಟಣ ಉಪಚುನಾವಣೆಯಲ್ಲಿ ನಾವು ಬಹುಶಃ 5 ಸಾವಿರ ಅಂತರದಲ್ಲಿ ಗೆಲ್ಲುತ್ತೇವೆ ಎಂದುಕೊಂಡಿದ್ದೆವು. ಆದರೆ ತಂದೆ–ಮಗ ಬೈದು ಬೈದು ನಮ್ಮ ಗೆಲುವಿನ ಅಂತರ 25 ಸಾವಿರಕ್ಕೆ ಹೆಚ್ಚಿತು ಎಂದು ಹೇಳಿದರು.

ಮೋದಿ ಹೆಸರಿನ ಬಲದಿಂದ ಕುಮಾರಸ್ವಾಮಿ ಗೆಲುವು: ಮಂಡ್ಯದಲ್ಲಿ ಕುಮಾರಸ್ವಾಮಿ ಅವರು ಮೋದಿ ಹೆಸರಿನಲ್ಲಿ ಗೆದ್ದಿದ್ದಾರೆ. ಅವರ ಸಾಮರ್ಥ್ಯದಿಂದ ಗೆದ್ದಿದ್ದರೆ ಮಗನನ್ನು ಗೆಲ್ಲಿಸುತ್ತಿರಲಿಲ್ಲವೇ?. ಸೋಲು–ಗೆಲುವಿನಿಂದ ವರ್ಚಸ್ಸು ಅಳೆಯಲಾಗದು. ಕುಮಾರಸ್ವಾಮಿ ಅವರಂತೆ ನಾನು ಲಘುವಾಗಿ ಮಾತನಾಡಲ್ಲ. ಆದರೆ ಅವರ ಮಗ ಸೋತಿರುವುದು ಗಂಭೀರವಾದ ವಿಚಾರ. ಅದನ್ನು ಅವರು ಯಾವ ರೀತಿ ತೆಗೆದುಕೊಳ್ಳುತ್ತಾರೋ ಅವರಿಗೆ ಬಿಟ್ಟಿದ್ದು. ಇನ್ನು ಮುಂದಾದರೂ ಕೇಂದ್ರದ ಮಂತ್ರಿಯಾಗಿ ಒಳ್ಳೆ ಕೆಲಸ ಮಾಡಲಿ, ನಾವೂ ನಮ್ಮ ಕೆಲಸ ಮಾಡುತ್ತೇವೆ. ಚುನಾವಣೆ ಬಂದಾಗ ಎದಿರಿಸೋಣ. ಅದನ್ನು ಬಿಟ್ಟು ದಿನ ಬೆಳಗಾದರೆ ಅವರಿವರ ಬಗ್ಗೆ ಮಾತನಾಡುವುದು ಬೇಡ ಎಂದು ತಿರುಗೇಟು ನೀಡಿದರು.

ಯಾವತ್ತೂ ಪ್ರೀತಿ ಇರುತ್ತದೆ: ನಿಖಿಲ್ ಮೇಲೆ ಯಾವತ್ತೂ ಪ್ರೀತಿ ಇರುತ್ತದೆ. ರಾಜಕೀಯವಾಗಿ ಮಾತನಾಡಿದಾಗ ಮಾತ್ರ ಪ್ರತಿಕ್ರಿಯೆ ನೀಡುತ್ತೇನೆ. ದೇವೇಗೌಡರ ಬಗ್ಗೆ ನಾನು ಯಾವಾಗಲಾದರೂ ಮಾತನಾಡಿದ್ದೇನಾ?. ಕುಮಾರಸ್ವಾಮಿ ಅವರು ಟೀಕೆ ಮಾಡಿದಾಗ ಅನಿವಾರ್ಯವಾಗಿ ಮಾತನಾಡಿದ್ದೇನೆಯೇ ಹೊರತು ನಾನೆಂದೂ ಅವರನ್ನು ವೈರಿ ಎಂದು ಹೇಳಿಲ್ಲ. ದೇವೇಗೌಡರ ನಾಯಕತ್ವವನ್ನು ನಾನು ಒಪ್ಪುತ್ತೇನೆ. ಆದರೆ ಮೊನ್ನೆಯ ಅವರ ಭಾಷಣ ಸಮಾಧಾನ ತಂದಿಲ್ಲ ಎಂದರು.

ರಾಜಕೀಯ ಭೂಕಂಪ

ರಾಜ್ಯದಲ್ಲಿ ಯಾವುದೇ ಬದಲಾವಣೆ ಆದರೂ ಅಚ್ಚರಿ ಇಲ್ಲ. ಸರ್ಕಾರವೂ ಬದಲಾಗಬಹುದು ಎಂದು ಹೇಳಿದರು. ರಾಜ್ಯ ಕಾಂಗ್ರೆಸ್‌ನಲ್ಲಿ ದೊಡ್ಡ ರಾಜಕೀಯ ಭೂಕಂಪವಾಗುವುದು ಖಚಿತ. ಒಡಂ ಬಡಿಕೆ ವಿಚಾರದಲ್ಲೇ ಭೂಕಂಪ ಆಗಲಿದ್ದು, ಅದನ್ನ ನಾವು–ನೀವು ಕಾದು ನೋಡೋಣ. ಭೂಕಂಪ ಆದಾಗ ಏನ್ ಇರುತ್ತೆ, ಏನ್ ಇರಲ್ಲ ಅಂತಾ ಹೇಳೋದಕ್ಕೆ ಆಗಲ್ಲ. ಪರೋಕ್ಷವಾಗಿ ಕಾಂಗ್ರೆಸ್ ಪಕ್ಷ ಛಿದ್ರ ಛಿದ್ರವಾಗಬಹುದು ಎಂದು ತಿಳಿಸಿದರು.

ಮಾಜಿ ಶಾಸಕ ಡಾ.ಕೆ.ಅನ್ನದಾನಿ ಮಾತನಾಡಿ, ರಾಜ್ಯ ಸರ್ಕಾರ ಹೆಚ್ಚು ದಿನ ಉಳಿಯಲ್ಲ. ಒಡಂಬಡಿಕೆಯಾಗಿದೆ ಎಂದು ಡಿಸಿಎಂ ಹೇಳುತ್ತಾರೆ. ಯಾವ ಒಡಂಬಡಿಕೆಯೂ ಆಗಿಲ್ಲ ಎಂದು ಸಿಎಂ ಹೇಳುತ್ತಾರೆ. ಸಿಎಂ ಹೇಳಿಕೆಗೆ ನಗುತ್ತಾ ಡಿಸಿಎಂ ವ್ಯಂಗ್ಯವಾಡಿದ್ದಾರೆ. ಅದೆಲ್ಲವನ್ನೂ ನೋಡಿದರೆ ತತ್‌ಕ್ಷಣದಲ್ಲೇ ಕಾಂಗ್ರೆಸ್ ಪಕ್ಷ ಒಡೆದು ಹೋಗುತ್ತದೆ ಎಂದು ಭವಿಷ್ಯ ನುಡಿದರು.

ಮಂಡ್ಯದಲ್ಲಿ ಜೆಡಿಎಸ್ ಭಾರಿ ಸಮಾವೇಶ

ಹಮ್ಮಿಕೊಳ್ಳಲಾಗಿದೆ. ಮೈಸೂರು, ರಾಮ ನಗರ, ಹಾಸನ, ಚಾಮರಾಜನಗರ ಹಾಗೂ ಸ್ಥಳೀಯ ಮಂಡ್ಯದ ಒಂದು ಲಕ್ಷ ಕಾರ್ಯಕರ್ತರನ್ನು ಅಲ್ಲಿನ ವಿಶ್ವೇಶ್ವರಯ್ಯ ಕ್ರೀಡಾಂಗಣದಲ್ಲಿ ಸೇರಿಸಿ, ಹಾಸನದಲ್ಲಿ ಸಿದ್ದರಾಮಯ್ಯ ಎತ್ತಿರುವ ಎಲ್ಲಾ ಪ್ರಶ್ನೆಗಳಿಗೆ ಉತ್ತರ ನೀಡಲು ನಿರ್ಧ ರಿಸಿದ್ದಾರಂತೆ. ಡಿಸೆಂಬರ್ 16 ಕುಮಾರಸ್ವಾಮಿ ಅವರ ಜನ್ಮದಿನವಾಗಿದ್ದು ಅದರ ಹಿಂದಿನ ದಿನ, ಅವರು ಕೇಂದ್ರ ಸಚಿವರಾಗಿ ಅಧಿಕಾರ ವಹಿಸಿಕೊಂಡ ಹಿನ್ನೆಲೆಯಲ್ಲಿ ಈ ಸಮಾವೇಶ ನಡೆಯುತ್ತಿದೆ.

ಸಿಎಸ್‌ಪಿ, ಸಾರಾಗೆ ಹೊಣೆಗಾರಿಕೆ: ಸಿ.ಎಸ್.ಪುಟ್ಟರಾಜು ಹಾಗೂ ಸಾ.ರಾ. ಮಹೇಶ್ ಅಭಿನಂದನಾ ಸಮಾರಂಭದ ಪೂರ್ಣ ಹೊಣೆಗಾರಿಕೆ ವಹಿಸಿಕೊಳ್ಳಲಿದ್ದಾರೆ. ಸಿದ್ದರಾಮಯ್ಯತವರು ಜಿಲ್ಲೆ ಮೈಸೂರಿನ ಗಡಿ ಜಿಲ್ಲೆಯಲ್ಲೇ ದೊಡ್ಡ ಪ್ರಮಾಣದಲ್ಲಿ ಕಾರ್ಯಕರ್ತರನ್ನು ಸೇರಿಸಿ ಅವರಿಗೆ ಟಾಂಗ್ ಕೊಡುವುದು ಹಾಗೂ ಅವರ ಮೇಲಿನ ಭ್ರಷ್ಟಾಚಾರ ಆರೋಪಗಳನ್ನು ಜನರ ಮುಂದಿಡಲು ಕುಮಾರಸ್ವಾಮಿ ವೇದಿಕೆ ಬಳಸಿಕೊಳ್ಳಲಿದ್ದಾರೆ.

ನಿಖಿಲ್‌ಗೆ ದೊಡ್ಡ ಜವಾಬ್ದಾರಿ: ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷ ಹಾಗೂ ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡರ ಮುಂದಾಳತ್ವದಲ್ಲಿ ಸಮಾವೇಶ ನಡೆಯ ಲಿದ್ದು, ರಾಜ್ಯ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿಗೆ ಪಕ್ಷದಲ್ಲಿ ದೊಡ್ಡ ಹುದ್ದೆಯನ್ನು ಕುಮಾರಸ್ವಾಮಿ ವೇದಿಕೆ ಯಲ್ಲೇ ಘೋಷಣೆ ಮಾಡಲಿದ್ದಾರಂತೆ.

ಜಿಟಿಡಿ ಮನವೊಲಿಕೆ ಯತ್ನ: ಪಕ್ಷದಲ್ಲಿದ್ದು ಕೊಂಡೇ ನಾಯಕರ ಮೇಲೆ ಮುನಿಸಿಕೊಂಡಿರುವ ಹಿರಿಯ ಶಾಸಕ ಜಿ.ಟಿ. ದೇವೇಗೌಡ ಸೇರಿದಂತೆ ಕೆಲವರ ಮನವೊಲಿಸಿ ಪಕ್ಷದಲ್ಲೇ ಉಳಿಸಿಕೊಳ್ಳುವ ಕಾರ್ಯವೂ ಸಮಾವೇಶಕ್ಕೂ ಮುನ್ನ ಕಾರ್ಯಕ್ರಮದ ಆಯೋಜಕರಿಂದ ನಡೆಯ ಲಿದೆ. ಪುಟ್ಟರಾಜು ಹಾಗೂ ಮಹೇಶ್ ಅವರುಗಳು, ಜಿ.ಟಿ.ದೇವೇಗೌಡ ಅವರನ್ನು ಭೇಟಿ ಮಾಡಿ ಮಾತುಕತೆ ನಡೆಸಿ, ನಂತರ ದೇವೇಗೌಡರ ಬಳಿ ಕರೆತಂದು ಸಂಧಾನ ನಡೆಸಲು ಮುಂದಾಗಿದ್ದಾರೆ.

ಹಾಸನದ ಸಮಾವೇಶದಲ್ಲಿ ತಮ್ಮ ಹಾಗೂ ತಮ್ಮ ಕುಟುಂಬದ ಬಗ್ಗೆ ಇಲ್ಲದ ರಾಜಕೀಯ ವಿಷಯಗಳನ್ನು ಪ್ರಸ್ತಾಪಿಸಿರುವ ಸಿದ್ದರಾಮಯ್ಯ ಅವರಿಗೆ ಸ್ವತಃ ದೇವೇಗೌಡರೇ ಅಂದಿನ ಸಭೆಯಲ್ಲಿ ಉತ್ತರ ನೀಡಲಿದ್ದಾರಂತೆ. ಕುಟುಂಬ ವಿಷಯವಲ್ಲದೆ, ಜೆಡಿಎಸ್ ಪಕ್ಷದ ವಿರುದ್ಧವೂ ಮನಬಂದಂತೆ ಸಿದ್ದರಾಮಯ್ಯ ವಾಗ್ದಾಳಿ ಮಾಡಿದ್ದು, ಇವೆಲ್ಲಕ್ಕೂ ತಕ್ಷಣವೇ ಉತ್ತರ ನೀಡಲು ಮಂಡ್ಯದಲ್ಲೇ ಅಭಿನಂದನಾ ಸಮಾರಂಭ ನೆಪದಲ್ಲಿ ಸಮಾವೇಶ ನಡೆಯಲಿದೆ.

ಹೆಚ್.ಡಿ.ಕುಮಾರಸ್ವಾಮಿಗೆ ಅಭಿನಂದನಾ ಸಮಾರಂಭ

ಮಂಡ್ಯ, ಡಿ.6– ಡಿ.16ರಂದು ಕೇಂದ್ರದ ಉಕ್ಕು ಮತ್ತು ಭಾರಿ ಕೈಗಾರಿಕೆ ಸಚಿವ ಎಚ್.ಡಿ.ಕುಮಾರ ಸ್ವಾಮಿ ಅವರ ಹುಟ್ಟುಹಬ್ಬದ ಹಿನ್ನೆಲೆ ಯಲ್ಲಿ ಡಿ.15ರಂದು ಸಂಜೆ 5 ಗಂಟೆಗೆ ನಗರದ ಸರ್‌ಎಂವಿ ಕ್ರೀಡಾಂಗಣದಲ್ಲಿ ಅಭಿನಂದನಾ ಸಮಾರಂಭ ನಡೆಸಲು ಜಿಲ್ಲಾ ಜೆಡಿಎಸ್ ನಾಯಕರು ನಿರ್ಧರಿಸಿರುವುದಾಗಿ ಮಾಜಿ ಸಚಿವ ಸಿ.ಎಸ್. ಪುಟ್ಟರಾಜು ತಿಳಿಸಿದ್ದಾರೆ.

ಇಲ್ಲಿನ ಪ್ರವಾಸಿ ಮಂದಿರದಲ್ಲಿ ನಡೆದ ಸಭೆಯಲ್ಲಿ ಈ ಬಗ್ಗೆ ಒಕ್ಕೊರಲ ತೀರ್ಮಾನ ಕೈಗೊಳ್ಳಲಾಯಿತು. ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರ ಹುಟ್ಟುಹಬ್ಬ ಹಿನ್ನೆಲೆಯಲ್ಲಿ ಡಿ.15ರಂದು ಅಭಿನಂದನಾ ಸಮಾರಂಭ ಏರ್ಪಡಿಸಲಾಗುವುದು ಎಂದು ಹೇಳಿದ್ದಾರೆ. ಸಮಾರಂಭದಲ್ಲಿ ಅಂಗವಿಕಲರಿಗೆ ದ್ವಿಚಕ್ರ ವಾಹನಗಳ ವಿತರಣೆ ಮಾಡಲಾಗುವುದು. ಅಲ್ಲದೆ, ಕೇಂದ್ರ ಸರ್ಕಾರದ ವಿವಿಧ ಯೋಜನೆಗಳ ಜಾರಿಗೊಳಿಸುವ ಬಗ್ಗೆ ತಿಳಿಸಲಾಗುವುದು. ಸಮಾರಂಭಕ್ಕೆ ಲೋಕಸಭಾ ಕ್ಷೇತ್ರದ 8 ವಿಧಾನಸಭಾ ಕ್ಷೇತ್ರಗಳಿಂದ ಲಕ್ಷಾಂತರ ಜನರು ಆಗಮಿಸಲಿದ್ದಾರೆ. ಅದೇ ರಾತ್ರಿ 12ಕ್ಕೆ ಎಚ್.ಡಿ.ಕುಮಾರಸ್ವಾಮಿ ಅವರಿಂದ ಬೃಹತ್ ಕೇಕ್ ಕತ್ತರಿಸಿ ಹುಟ್ಟುಹಬ್ಬ ಆಚರಿಸಲಾಗುವುದು ಎಂದು ತಿಳಿಸಿದರು. ಈ ವೇಳೆ ಮಾಜಿ ಸಚಿವ ಡಿ.ಸಿ.ತಮ್ಮಣ್ಣ, ಶಾಸಕ ಎಚ್.ಟಿ. ಮಂಜು, ಮಾಜಿ ಶಾಸಕರಾದ ಕೆ.ಅನ್ನದಾನಿ, ಕೆ.ಸುರೇಶ್ ಗೌಡ, ಜಿಲ್ಲಾಧ್ಯಕ್ಷ ಡಿ.ರಮೇಶ್, ಮುಖಂಡ ಬಿ.ಆರ್.ರಾಮಚಂದ್ರು, ನಗರಸಭೆ ಅಧ್ಯಕ್ಷ ನಾಗೇಶ್, ಮನ್‌ಮುಲ್ ಉಪಾಧ್ಯಕ್ಷ ಎಂ.ಎಸ್.ರಘುನಂದನ್, ಸೇರಿದಂತೆ ಮತ್ತಿತರರಿದ್ದರು.

ಮುಂಜಾನೆ ವಿಹಾರ!



ಕೆ.ಆರ್.ನಗರ ತಾಲೂಕು ಅಡಗೂರು ಗ್ರಾಮದ ಗದ್ದೆ ಬಯಲಿನಲ್ಲಿ ಸಂಚರಿಸುತ್ತಿರುವ ಕಾಡಾನೆಗಳು.

ಕೊನೆಗೆ ಒಂದೆಡೆ ಮತ್ತೆ ಒಂದಾಗಿ ಹೋಗಿವೆ. ನಾಯಿಗಳು ಬೊಗಳಿದ್ದರಿಂದ ಈ ಆನೆಗಳು ಬೇರ್ಪಟ್ಟಿದ್ದು, ನಂತರ ಎಲ್ಲೆಡೆ ಸುತ್ತಿ ಒಂದಾಗಿರಬಹುದು ಎಂದು ಹೇಳಲಾಗಿದೆ. ನಂತರ ಮಾರಿಗುಡಿ ಬೀದಿ ಮೂಲಕ ಡಾ. ರಾಜ್‌ಕುಮಾರ್ ರಸ್ತೆಯಲ್ಲಿರುವ ಮಸೀದಿ ಬಳಿ ತೆರಳಿರುವ ಕಾಡಾನೆಗಳು, ಡಾ. ಅಂಬೇಡ್ಕರ್ ರಸ್ತೆಯಲ್ಲಿರುವ ಪೆಟ್ರೋಲ್ ಬಂಕ್ ಅನ್ನು ಪ್ರವೇಶಿಸಿವೆಯಾದರೂ, ಪೆಟ್ರೋಲ್ ಪಂಪ್ ಅನ್ನು ಪ್ರದಕ್ಷಿಣೆ ಮಾಡಿ ಟೌನ್ ಪೊಲೀಸ್ ಠಾಣೆ ಕಡೆಗೆ ತೆರಳಿರುವುದು ಕಂಡು ಬಂದಿದೆ. ರಾತ್ರಿಯಿಡೀ ಪಟ್ಟಣದ ಗಲ್ಲಿ ಬೀದಿಯಲ್ಲಿ ಸುತ್ತಾಡಿದ ಕಾಡಾನೆಗಳು ಅವು ಹಾದು ಹೋಗುವ ಮಾರ್ಗದುದ್ದಕ್ಕೂ ನಿಂತಿದ್ದ ಯಾವುದೇ ವಾಹನಕ್ಕೂ ಹಾನಿ ಯನ್ನುಂಟು ಮಾಡದೇ ಸಾಗಿವೆ. ರಾತ್ರಿ ಕಿಟಕಿ ಮೂಲಕ ಕಾಡಾನೆ ಗಮನಿಸಿದ ನಿವಾಸಿಯೊಬ್ಬರು ಪಟ್ಟಣ ಪೊಲೀಸ್ ಠಾಣೆಗೆ ಮಾಹಿತಿ ನೀಡಿದ ಹಿನ್ನೆಲೆಯಲ್ಲಿ ಪೊಲೀಸರು, ಅರಣ್ಯ ಇಲಾಖೆಗೆ ವಿಷಯ ತಿಳಿಸಿದ ನಂತರ ಕೊಳ್ಳೇಗಾಲ–ಬೆಂಗಳೂರು ರಸ್ತೆಯಲ್ಲಿ ಸಾಗುತ್ತಿದ್ದ ಕಾಡಾನೆಗಳನ್ನು ಪಟಾಕಿ ಸಿಡಿಸಿ ಅರಣ್ಯಕ್ಕೆ ಓಡಿಸಲಾಗಿದೆ.

ಕೆ.ಆರ್.ನಗರ ವರದಿ: ಕೆ.ಆರ್.ನಗರ ತಾಲೂಕಿನ ಅಡಗೂರು ಗ್ರಾಮದಲ್ಲಿ ಇಂದು (ಶುಕ್ರವಾರ) ಬೆಳಿಗ್ಗೆ ಎರಡು ಕಾಡಾನೆ ಗಳು ಪ್ರತ್ಯಕ್ಷವಾಗಿ, ಗ್ರಾಮಸ್ಥರಲ್ಲಿ ಆತಂಕ ವನ್ನುಂಟು ಮಾಡಿತು. ಕಾಡಾನೆ ಗಳು ಭತ್ತದ ಗದ್ದೆಗೆ ನುಗ್ಗಿ ಬೆಳೆಗಳನ್ನು ನಾಶಪಡಿಸಿವೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಅರಣ್ಯ ಇಲಾಖೆಯ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಆನೆಗಳನ್ನು ಅರಣ್ಯಕ್ಕೆ ಓಡಿಸಲು ಕಾರ್ಯಾಚರಣೆ ನಡೆಸುತ್ತಿದ್ದಾರೆ.

ಕರೋಲ್ ಹಾಡುಗಾರಿಕೆ ಸ್ಪರ್ಧೆಯಲ್ಲಿ ಬಹುಮಾನ



ಕಳೆದ ಡಿ.1ರಂದು ಸೆಂಟ್ ಫಿಲೋಮಿನಾಸ್ ಇಂಡೋರ್ ಸ್ಟೇಡಿಯಂನಲ್ಲಿ ಕ್ಯಾಥೋಲಿಕ್ ಅಸೋಸಿಯೇಷನ್ ವತಿಯಿಂದ ಏರ್ಪಡಿಸಿದ್ದ ಕರೋಲ್ ಹಾಡುಗಾರಿಕೆ ಸ್ಪರ್ಧೆಯಲ್ಲಿ ಮೈಸೂರು ಯಾದವಗಿರಿಯ ಸೇಕ್ರೇಟ್ ಆರ್ಟ್ ಚರ್ಚ್ ತಮಿಳು ವಿಭಾಗದಲ್ಲಿ ತೃತೀಯ ಹಾಗೂ ಇಂಗ್ಲೀಷ್‌ನಲ್ಲಿ ದ್ವಿತೀಯ ಸ್ಥಾನವನ್ನು ಪಡೆದಿದೆ.

ಜಿಪಂ, ತಾಪಂ ಚುನಾವಣೆ ಮೈತ್ರಿ ಸಂಬಂಧ ರಾಜ್ಯ ಬಿಜೆಪಿ ಉಸ್ತುವಾರಿಯೊಂದಿಗೆ ನಿಖಿಲ್ ಚರ್ಚೆ



ಬೆಂಗಳೂರು, ಡಿ.6(ಕೆಎಂಶಿ)– ಜಿಲ್ಲಾ ಹಾಗೂ ತಾಲೂಕು ಪಂಚಾಯತ್ ಚುನಾವಣೆಗಳಲ್ಲಿ ಜೆಡಿಎಸ್–ಬಿಜೆಪಿ ಪರಸ್ಪರ ಸಮನ್ವಯತೆ ಕುರಿತು ರಾಜ್ಯ ಬಿಜೆಪಿ ಉಸ್ತುವಾರಿ ರಾಧಾಮೋಹನ್‌ದಾಸ್ ಅಗರ್ವಾಲ್ ಅವರನ್ನು ಯುವ ಜನತಾದಳ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಭೇಟಿ ಮಾಡಿ ಚರ್ಚಿಸಿದರು.

ಈ ಬಗ್ಗೆ ಸ್ವತಃ ನಿಖಿಲ್ ಮಾಹಿತಿ ಮಾಧ್ಯಮದೊಂದಿಗೆ ಮಾಹಿತಿ ಹಂಚಿಕೊಂಡಿದ್ದು, ಗೃಹ ಸಚಿವರ ಭೇಟಿಗೆ ಸೋಮವಾರ ಸಮಯ ನಿಗದಿಯಾಗಿದೆ. ಪೂರ್ವಭಾವಿಯಾಗಿ ನವದೆಹಲಿಯಲ್ಲಿ ರಾಧಾ ಮೋಹನ್ ದಾಸ್ ಅಗರ್ವಾಲ್ ಅವರನ್ನು ಭೇಟಿ ಮಾಡಿದ್ದಾಗಿ ತಿಳಿಸಿದರು.

ಡಾ.ಅಂಬೇಡ್ಕರ್ ತತ್ವಗಳ ಪ್ರತಿಯೊಬ್ಬರು ಅರಿಯುವುದು ಅವಶ್ಯ: ಶಾಸಕ ಶ್ರೀವತ್ಸ



68ನೇ ವರ್ಷದ ಪರಿನಿಬ್ಬಾಣ ದಿನಾಚರಣೆ ಪ್ರಯುಕ್ತ ಕುವೆಂಪುನಗರ ಪೋಲೀಸ್ ಠಾಣೆ ಎದುರಿನ ಡಾ.ಬಿ.ಆರ್.ಅಂಬೇಡ್ಕರ್ ಪ್ರತಿಮೆಗೆ ಶಾಸಕ ಟಿ.ಎಸ್.ಶ್ರೀವತ್ಸ ಹಾಗೂ ಇತರರೊಂದಿಗೆ ಮಾಲಾರ್ಪಣೆ ಮಾಡಿದರು.

ಮೈಸೂರು, ಡಿ.6 (ಎಸ್‌ಪಿಎನ್)– ಡಾ.ಬಿ.ಆರ್. ಅಂಬೇಡ್ಕರ್ ಅವರ ತತ್ವ ಸಿದ್ಧಾಂತವನ್ನು ಪ್ರತಿಯೊಬ್ಬರು ಮೈಗೂಡಿಸಿಕೊಳ್ಳಬೇಕು ಎಂದು ಶಾಸಕ ಟಿ.ಎಸ್. ಶ್ರೀವತ್ಸ ಅಭಿಪ್ರಾಯಪಟ್ಟರು.

ಮೈಸೂರು ಭೀಮಬಳಗದ ವತಿಯಿಂದ ಕುವೆಂಪುನಗರ ಪೋಲೀಸ್ ಠಾಣೆ ಎದುರಿನ ಡಾ.ಬಿ.ಆರ್.ಅಂಬೇಡ್ಕರ್ ಪ್ರತಿಮೆಗೆ 68ನೇ ವರ್ಷದ ಪರಿನಿಬ್ಬಾಣ ದಿನಾಚರಣೆ ಪ್ರಯುಕ್ತ ಮಾಲಾರ್ಪಣೆ ಮಾಡಿ, ಅವರು ಮಾತನಾಡಿದರು.


ಡಾ.ಬಿ.ಆರ್.ಅಂಬೇಡ್ಕರ್ ರಚಿಸಿದ ಸಂವಿಧಾನದ ಆಶಯದಂತೆ ಶಾಸಕಾಂಗ, ಕಾರ್ಯಾಂಗ, ನ್ಯಾಯಾಂಗ ಕಾರ್ಯ ನಿರ್ವಹಿಸುತ್ತಿವೆ. ಈ ಮೂಲಕ ಸಮ ಸಮಾಜ ನಿರ್ಮಾಣಕ್ಕೆ ಎಲ್ಲರೂ ಕೈಜೋಡಿಸಬೇಕು. ದೇಶದ ಉನ್ನತಿಗೆ ಯಾರು ಯಾವ ಕೆಲಸ ಹಮ್ಮಿಕೊಳ್ಳಬೇಕು ಎಂಬುದರ ಕುರಿತು ಸಂವಿಧಾನದಲ್ಲಿ ಸ್ಪಷ್ಟವಾಗಿ ಉಲ್ಲೇಖಿಸಿದೆ ಎಂದರು.

ಬುದ್ಧವಂದನೆ, ಧಮ್ಮವಂದನೆ, ಸಂಘವಂದನೆ, ತ್ರಿಸರಣ ಪಂಚಶೀಲ ಬೋಧಿಸಿ, ಮಾತನಾಡಿದ ಮಾಜಿ ಮೇಯರ್ ಪುರುಷೋತ್ತಮ್, ವಿಶ್ವಜ್ಞಾನಿ ಡಾ.ಬಿ.ಆರ್. ಅಂಬೇಡ್ಕರ್ ಅವರ ವಿಚಾರಗಳನ್ನು ಪ್ರತಿಯೊಬ್ಬರು ತಿಳಿದುಕೊಳ್ಳಬೇಕು. ದಲಿತರೆಲ್ಲರೂ ಬೌದ್ಧರಾಗಬೇಕು ಎಂಬ ಆಶಯ ಡಾ.ಬಿ.ಆರ್.ಅಂಬೇಡ್ಕರ್ ಅವರದಾಗಿತ್ತು ಎಂದರು.

ಈ ವೇಳೆ ಬಿಜೆಪಿ ಮುಖಂಡರಾದ ಪಿ.ಟಿ.ಕೃಷ್ಣ, ಜೆ.ರವಿ, ಯೋಗೀಶ್ವರ್, ವಿಶ್ವೇಶ್ವರಯ್ಯ, ಎಂ.ಎಸ್.ಸತ್ಯಾನಂದ ವಿಟ್ಟು, ಮುಖಂಡರಾದ ಅಶೋಕಪುರಂ ವಿ.ರಾಮಸ್ವಾಮಿ, ಎಎಸ್‌ಐ ಗೀತಾ, ಭೀಮಬಳಗದ ಉಪಾಧ್ಯಕ್ಷ ಜೆ.ಶ್ರೀಧರ್, ಪ್ರಧಾನ ಕಾರ್ಯದರ್ಶಿ ಪುರುಷೋತ್ತಮ್, ಎನ್. ರವೀಂದ್ರ, ಹೆಚ್.ವಿ. ತಿಮ್ಮಯ್ಯ, ಎಸ್. ಮಹಾಲಿಂಗಯ್ಯ, ಜೆ. ಮಂಜುನಾಥ್, ಜಿ. ಸುರೇಶ್ ಕುಮಾರ್, ಕೆ. ಬಸವರಾಜು, ಎಂ.ಡಿ. ಶ್ರೀನಿವಾಸ್, ವಿಕ್ರಾಂತ್ ಕೆಂಚಪ್ಪ, ಸೋಸಲೆ ವಿಶ್ವನಾಥ್, ಜೆ. ಸುಜಾತ, ಪ್ರೇಮಲತಾ ಪುರುಷೋತ್ತಮ, ರಮೇಶ್, ಜಗದೀಶ್, ಮೋಹನ್, ಸಿದ್ದರಾಜು ಸೇರಿದಂತೆ ಇತರರಿದ್ದರು.

ಮೈಸೂರು ಮಿತ್ರ

ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಪ್ರತಿಮೆಗೆ ಪುಷ್ಪ ನಮನ




ಸಂವಿಧಾನಶಿಲ್ಪಿ, ಭಾರತರತ್ನ ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ 68ನೇ ಮಹಾ ಪರಿನಿರ್ವಾಣ ದಿನದ ಅಂಗವಾಗಿ ಟೌನ್ ನಲ್ಲಿರುವ ಅವರ ಪ್ರತಿಮೆಗೆ ಚಾಮರಾಜ ವಿಧಾನಸಭಾ ಕ್ಷೇತ್ರದ ಶಾಸಕ ಕೆ. ಹರೀಶ್‌ಗೌಡ ಪುಷ್ಪ ನಮನ ಸಲ್ಲಿಸಿದರು

ದೇಶದ ಸಂವಿಧಾನ ವಿರೋಧಿಸುವವರ ಸಂಖ್ಯೆ ದಿನೇ ದಿನೆ ಹೆಚ್ಚಾಗುತ್ತಿದೆ

ನ್ಯಾಯಾಂಗದ ತೀರ್ಪುಗಳೂ ಭರವಸೆ ಕಳೆದುಕೊಳ್ಳುವಂತಿವೆ; ಹಿರಿಯ ಪತ್ರಕರ್ತ ದಿನೇಶ್ ಅಮೀನ್ ಮಟ್ಟು ವಿಷಾದ

ಮೈಸೂರು, ಡಿ.6(ಎಂಟಿವೈ)– ಇತ್ತೀಚಿನ ದಿನಗಳಲ್ಲಿ ನ್ಯಾಯಾಂಗದ ಕೆಲ ತೀರ್ಪುಗಳು ಭರವಸೆ ಕಳೆದುಕೊಳ್ಳುವಂತಿದ್ದರೆ, ದೇಶದಲ್ಲಿ ಸಂವಿಧಾನ ವಿರೋಧಿಸುವವರ ಸಂಖ್ಯೆ ಹೆಚ್ಚಾಗಿರುವುದು ಆತಂಕವನ್ನುಂಟು ಮಾಡಿದೆ ಎಂದು ಹಿರಿಯ ಪತ್ರಕರ್ತ ದಿನೇಶ್ ಅಮೀನ್‌ಮಟ್ಟು ವಿಷಾದಿಸಿದ್ದಾರೆ.

ಮೈಸೂರಿನ ಕಾಂಗ್ರೆಸ್ ಭವನದಲ್ಲಿ ಶುಕ್ರವಾರ ನಡೆದ ಡಾ.ಬಿ.ಆರ್. ಅಂಬೇಡ್ಕರ್ ಅವರ ಮಹಾ ಪರಿನಿರ್ವಾಣ ದಿನಾಚರಣೆಯಲ್ಲಿ ಮಾತನಾಡಿದ ಅವರು, ದೇಶದಲ್ಲಿ ಸಂವಿಧಾನ ಜಾರಿಗೊಂಡು 75 ವರ್ಷವಾದರೂ ಅದರ ಉಳಿವಿನ ಅಭಿಯಾನ ನಡೆಯುತ್ತಿದೆ. ಇದರಿಂದ ನಮ್ಮ ಸಂವಿಧಾನ ಸುರಕ್ಷಿತವಾಗಿದೆಯೇ ಎಂಬ ಪ್ರಶ್ನೆಯನ್ನು ನಾವೇ ಕೇಳಿಕೊಳ್ಳಬೇಕಾದ ಸ್ಥಿತಿ ನಿರ್ಮಾಣವಾಗಿದೆ. ಸಂಸತ್‌ನಲ್ಲಿ ಗಂಭೀರ ಸ್ವರೂಪದ ಆರೋಪ ಎದುರಿಸುತ್ತಿರುವ 243 ಸಂಸದರಿದ್ದಾರೆ. ಹಾಗಾಗಿ ಆರೋಗ್ಯಕರ ಯಾವುದೇ ಚರ್ಚೆ ನಡೆಯದೇ ಸರ್ವಾಧಿಕಾರಿ ಆಳ್ವಿಕೆಯಂತೆ ಬಿಲ್‌ಗಳು ಪಾಸ್ ಮಾಡಲಾಗುತ್ತಿದೆ. ನ್ಯಾಯಾಂಗದ ತೀರ್ಪುಗಳು ಭರವಸೆ ಕಳೆದುಕೊಳ್ಳುವಂತೆ ಮಾಡಿವೆ. ಜಾಮೀನು ನೀಡಬಾರದಂತಹ ಪೋಕ್ಸೊ ಪ್ರಕರಣದಲ್ಲಿ ಜಾಮೀನು ಮಂಜೂರು ಮಾಡಲಾಗುತ್ತಿದೆ. ಒಳಗಿಂದಲೇ ಸಂವಿಧಾನವನ್ನು ಕೊರೆಯಲಾಗುತ್ತಿದೆ ಎಂದು ಅಸಮಾದಾನ ವ್ಯಕ್ತಪಡಿಸಿದರು.



ಮೈಸೂರಿನ ಕಾಂಗ್ರೆಸ್ ಭವನದಲ್ಲಿ ಶುಕ್ರವಾರ ನಡೆದ ಡಾ.ಬಿ.ಆರ್. ಅಂಬೇಡ್ಕರ್ ಅವರ ಮಹಾ ಪರಿನಿರ್ವಾಣ ದಿನಾಚರಣೆಯಲ್ಲಿ ಹಿರಿಯ ಪತ್ರಕರ್ತ ದಿನೇಶ್ ಅಮೀನ್‌ಮಟ್ಟು ಡಾ.ಅಂಬೇಡ್ಕರ್ ಪ್ರತಿಮೆಗೆ ಪುಷ್ಪ ನಮನ ಸಲ್ಲಿಸಿದರು.

ಸಂವಿಧಾನ ಜಾರಿಗೊಂಡಾಗ ವಿರೋಧಿಸಿದವರು ಇಂದು ಎದೆಗಪ್ಪಿಕೊಂಡು ಮೆರೆಯುತ್ತಿದ್ದಾರೆ. ಈ ಸಂದರ್ಭವನ್ನು ಯಾವ ರೀತಿ ಎದುರಿಸಬೇಕು. ಮಠದ ಶ್ರೀಗಳು ನಮ್ಮನ್ನು ಗೌರವಿಸುವ ಸಂವಿಧಾನ ಬೇಕು. ಸ್ವಾತಂತ್ರ್ಯ ಪೂರ್ವದಲ್ಲಿದ್ದ ಸಂವಿಧಾನ ಬೇಕು ಎನ್ನುತ್ತಿದ್ದಾರೆ. ಅವರ ಮನಸ್ಸಿನಲ್ಲಿ ಅಲಿಖಿತ ಸಂವಿಧಾನ ಬರಬೇಕೆಂಬ ಆಸೆ ಇರುವಂತಿದೆ. ಸಂವಿಧಾನ ರಕ್ಷಕರಾದ ರಾಜ್ಯಪಾಲರು ಸ್ವಾಮೀಜಿ ವಿರುದ್ಧ ಕ್ರಮ ಕೈಗೊಳ್ಳಲಿಲ್ಲ. ದೊಡ್ಡ ಮಟ್ಟದಲ್ಲಿ ಪ್ರತಿಕ್ರಿಯೆ ಬರಲಿಲ್ಲ. ರಾಹುಲ್ ಗಾಂಧಿ ಅವರು ತಮ್ಮ ಮೊಬೈಲ್, ಪರ್ಸ್ ಮರೆತರೂ ಸಂವಿಧಾನದ ಪ್ರತಿಯನ್ನು ಮರೆತಿಲ್ಲ. ಪ್ರಿಯಾಂಕಾ ಗಾಂಧಿ ಅವರು ಪ್ರಮಾಣ ವಚನ ಸ್ವೀಕರಿಸುವಾಗ ಸಂವಿಧಾನ ಪ್ರತಿ ಹಿಡಿದಿದ್ದರು. ಆದರೆ, ಇದಕ್ಕೆ ಕಾಂಗ್ರೆಸ್ ನಾಯಕರಿಂದ ದೊಡ್ಡ ಮಟ್ಟದ ಪ್ರತಿಕ್ರಿಯೆ ಬರಲಿಲ್ಲ ಎಂದು ವಿಷಾದಿಸಿದರು.

ಚಿಕ್ಕಮಗಳೂರಿನ ದೇವಾಲಯದಲ್ಲಿ ದಲಿತರಿಗೆ ಪ್ರವೇಶ ನಿರಾಕರಿಸಲಾಗಿದೆ. ಸಮೀಕ್ಷೆಯೊಂದರ ಪ್ರಕಾರ ಪ್ರತಿ 16 ನಿಮಿಷಕ್ಕೆ ಒಬ್ಬ ದಲಿತನ ಮೇಲೆ ದೌರ್ಜನ್ಯವಾಗುತ್ತಿದೆ. ನಾಲ್ವರು ಹೆಣ್ಣು ಮಕ್ಕಳ ಮೇಲೆ ಅತ್ಯಾಚಾರವಾಗುತ್ತಿದೆ. ಸಂವಿಧಾನ ಶಿಲ್ಪಿ ಡಾ.ಅಂಬೇಡ್ಕರ್ ಹಿಂದೂ ಧರ್ಮದ ಸುಧಾರಣೆಗೆ ಪ್ರಯತ್ನಿಸಿ, ಸುಧಾರಣೆ ಸಾಧ್ಯವಿಲ್ಲ ಎಂದು ಅರಿತು ಅಂತಿಮವಾಗಿ ಬೌದ್ಧ ಧರ್ಮಕ್ಕೆ ಮತಾಂತರಗೊಂಡರು. ವರ್ಣಾಶ್ರಮ ವ್ಯವಸ್ಥೆ ವಿರುದ್ಧ ದೀರ್ಘಕಾಲ ಹೋರಾಟ ಮಾಡಿದರು. ಕಾಂಗ್ರೆಸ್, ಅಂಬೇಡ್ಕರ್ ವಿರೋಧಿಸಿತು ಎಂಬುದರಲ್ಲಿ ಹುರುಳಿಲ್ಲ. 'ಭಾರತ ರತ್ನ' ಕೊಡಲಿಲ್ಲ, ದೆಹಲಿಯಲ್ಲಿ ಅವರ ಅಂತ್ಯಕ್ರಿಯೆಗೆ ಜಾಗ ಕೊಡಬೇಕಿತ್ತು. ಚುನಾವಣೆಯಲ್ಲಿ ಅಂಬೇಡ್ಕರ್ ಅವರ ಸೋಲಿಗೆ ಕಾಂಗ್ರೆಸ್ ಮಾತ್ರವಲ್ಲ, ಜನಸಂಘ, ಕಮ್ಯುನಿಸ್ಟ್ ಪಕ್ಷಗಳೂ ಕಾರಣ. ಆದರೆ, ಕಾಂಗ್ರೆಸ್ ನಡುವೆ ಸೈದ್ಧಾಂತಿಕ ಭಿನ್ನಾಭಿಪ್ರಾಯ ಇರಲಿಲ್ಲ. ಭಿನ್ನಾಭಿಪ್ರಾಯ ಇದಿದ್ದರೆ ಸಂವಿಧಾನ ರಚನಾ ಸಮಿತಿಯ ಅಧ್ಯಕ್ಷರನ್ನಾಗಿ ಅವರನ್ನು ನೇಮಿಸುತ್ತಿರಲಿಲ್ಲ. ಅವರು ಬರೆದ ಸಂವಿಧಾನವನ್ನು ಅಕ್ಷರಶಃ ಒಪ್ಪಿ ಅನುಷ್ಠಾನ ಮಾಡಿದ್ದು ಕಾಂಗ್ರೆಸ್ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಗ್ರಾಮಾಂತರ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ವಿಜಯ್‌ಕುಮಾರ್, ನಗರ ಕಾಂಗ್ರೆಸ್ ಅಧ್ಯಕ್ಷ ಆರ್. ಮೂರ್ತಿ, ಕೆಪಿಸಿಸಿ. ವಕ್ತಾರ ಎಂ.ಲಕ್ಷ್ಮಣ್, ಮಾಜಿ ಶಾಸಕ ಡಾ. ಭಾರತೀ ಶಂಕರ್, ಮಾಜಿ ಮೇಯರ್‌ಗಳಾದ ಪುಷ್ಪಲತಾ ಚಿಕ್ಕಣ್ಣ, ಮೋದಾಮಣಿ, ಸಿಂಡಿಕೇಟ್ ಸದಸ್ಯ ಬಸವರಾಜು, ಮುಖಂಡರಾದ ಶಿವಪ್ರಸಾದ್, ಭಾಸ್ಕರ್, ಹೆಡತಲೆ ಮಂಜುನಾಥ್, ಶ್ರೀರಂಗ, ವಿ.ರಾಮಸ್ವಾಮಿ, ಪ್ರೊ.ಶಿವಕುಮಾರ್, ವಾಸು, ಕೆ.ರಮೇಶ್, ಈಶ್ವರ್ ಚಕ್ಕಡಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಮೇಶ್, ಹೇಮಂತ್ ಕುಮಾರ್, ಕೆ. ಮಹೇಶ್ ಭಾಗವಹಿಸಿದ್ದರು. ಇದಕ್ಕೂ ಮುನ್ನ ಡಾ.ಅಂಬೇಡ್ಕರ್ ಅವರಿಗೆ ಗೀತ ನಮನ ಸಲ್ಲಿಸಲಾಯಿತು.

'ಸಿಂಹದ ನೆನಪು' ಕಾರ್ಯಕ್ರಮದಲ್ಲಿ ವಿಷ್ಣು ನೆನಪು

ಪ್ರೇಕ್ಷಕರ ರಂಜಿಸಿದ ವಿಷ್ಣು ಚಿತ್ರದ ಹಾಡುಗಳು



'ಸಿಂಹದ ನೆನಪು' ಶೀರ್ಷಿಕೆಯಡಿ ಏರ್ಪಡಿಸಿದ್ದ ಗಾಯನ ಕಾರ್ಯಕ್ರಮವನ್ನು ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್ ಉದ್ಘಾಟಿಸಿದರು.

ಮೈಸೂರು, ಡಿ.6(ಎಸ್‌ಪಿಎನ್)– ಸಾಹಸಸಿಂಹ ವಿಷ್ಣುವರ್ಧನ್ ಅಭಿನಯಿಸಿರುವ ಸಿನಿಮಾಗಳು ಕುಟುಂಬ ಸಮೇತ ನೋಡುವಂತಹದಾಗಿತ್ತು ಎಂದು ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್ ಅಭಿಪ್ರಾಯಪಟ್ಟರು.

ಮೈಸೂರು ಜೆಎಲ್‌ಬಿ ರಸ್ತೆಯ ಪಾತಿ ಫೌಂಡೇಶನ್ ವತಿಯಿಂದ ಆಯೋಜಿಸಿದ್ದ ಸಾಹಸಸಿಂಹ ವಿಷ್ಣುವರ್ಧನ್ ಸ್ಮರಣಾರ್ಥ 'ಸಿಂಹದ ನೆನಪು' ಶೀರ್ಷಿಕೆಯಡಿ ಏರ್ಪಡಿಸಿದ್ದ ಗಾಯನ ಕಾರ್ಯಕ್ರಮದಲ್ಲಿ ಭಾಗವಹಿಸಿ, ಮಾತನಾಡಿದರು.

ವಿಷ್ಣುವರ್ಧನ್ ಅವರು ಸಾಹಸಸಿಂಹ, ಗಂಧದ ಗುಡಿ, ಜೀವನ ಚಕ್ರ, ಮುತ್ತಿನ ಹಾರ, ಸಿಂಹಾದ್ರಿ ಸಿಂಹ ಸೇರಿದಂತೆ 150ಕ್ಕೂ ಹೆಚ್ಚು ಸಿನಿಮಾ ಗಳಲ್ಲಿ ನಟಿಸಿದ್ದಾರೆ. ದೇಶಪ್ರೇಮ ಬಿಂಬಿಸುವ, ಭಾರತ್ ಗಡಿಯಲ್ಲಿ ಕರ್ತವ್ಯ ನಿರ್ವಹಿಸುವ ಸೈನಿಕರ ನೋವು–ನಲಿವು ಬಿಂಬಿಸುವ 'ಮುತ್ತಿನ ಹಾರ' ಸಿನಿಮಾ ಇತಿಹಾಸದಲ್ಲೇ ಮೈಲಿಗಲ್ಲು ಎಂದರೆ ತಪ್ಪಾಗಲಾರದು ಎಂದರು.

ನಂತರ ಯುಗಯುಗಗಳೇ ಸಾಗಲಿ, ಈ ಭೂಮಿ ಬಣ್ಣದ ಬಗುರಿ, ನೂರೊಂದು ನೆನಪು, ಮಾಮರವೆಲ್ಲೋ, ಕನ್ನಡವೇ ನಮ್ಮಮ್ಮ, ಬಂದೆಯಾ ಬಾಳಿನ, ಶಾರದೇ, ನೀ ಮೀಟಿದ ನೆನಪೆಲ್ಲವೂ, ಅಪರಾಧಿ ನೀನಲ್ಲಾ, ಪ್ರಿಯಾ ಪ್ರಿಯಾ, ನೀರಬಿಟ್ಟು ನೆಲದ ಮೇಲೆ ದೋಣಿ ಸಾಗದು, ಒಲವೇ, ಕರ್ನಾಟಕದ ಇತಿಹಾಸದಲಿ, ನಿನಗಾಗಿಯೇ, ನಮ್ ಕಡೆ ಸಾಂಬರ್ ಅಂದ್ರೆ, ಹಾಡುವ ಆಸೆ, ಚೆಲುವಿನಲಿ, ಮಲ್ನಾಡ್ ಅಂದ್ರೆ, ಮಡಿಕೇರಿ ಸಿಪಾಯಿ, ಕಣ್ಣು ಕಣ್ಣು, ಜೀವ ವೀಣೆ, ಆಹಹಾ ನನ್ನ, ಆ ಕರ್ಣನಂತೆ, ದೇವರು ಹೊಸೆದ ಸೇರಿದಂತೆ ಇತರೆ ಸಿನಿಮಾ ಹಾಡುಗಳಿಗೆ ಪಾಲಿಕೆ ಮಾಜಿ ಸದಸ್ಯ ಪಾರ್ಥಸಾರಥಿ ಸೇರಿದಂತೆ ಇತರ ಗಾಯಕರು ಹಾಡಿ, ಪ್ರೇಕ್ಷಕರ ಮನಗೆದ್ದರು.

ವೇದಿಕೆಯಲ್ಲಿ ಮೇಲುಕೋಟೆಯ ಶ್ರೀ ಇಳೈ ಆಳ್ವಾರ್ ಸ್ವಾಮೀಜಿ, ವಿಪ್ರಮುಖಂಡ ಕೆ.ರಘುರಾಂ ವಾಜಪೇಯಿ, ಡಾ.ವೈ.ಡಿ. ರಾಜಣ್ಣ, ಕೆ.ಆರ್.ಬ್ಯಾಂಕ್ ಅಧ್ಯಕ್ಷ ಬಸವರಾಜ ಬಸಪ್ಪ, ಅನಿಲ್‌ಕುಮಾರ್, ಶ್ರೀನಿವಾಸ, ಶಿವಪ್ರಕಾಶ್, ಕಲಾವಿದ ಆನಂದ, ಅರುಣ್, ಮಹದೇವ್ ಇತರರಿದ್ದರು.

ಬುದ್ಧ, ಬಸವರ ನಂತರ ಸಮಾನತೆಗೆ ಹೋರಾಡಿದವರು ಡಾ. ಅಂಬೇಡ್ಕರ್

- ಮುಖ್ಯಮಂತ್ರಿ ಸಿದ್ದರಾಮಯ್ಯ ನುಡಿ ನಮನ
- ಜಗತ್ತಿನಲ್ಲೇ ಶ್ರೇಷ್ಠ ಸಂವಿಧಾನ ನೀಡಿದ ಹೆಗ್ಗಳಿಕೆ

ಬೆಂಗಳೂರು, ಡಿ.6(ಕೆಎಂಶಿ)– ಕ್ರಾಂತಿಕಾರಿ ಬಸವಣ್ಣ, ಬುದ್ಧನ ನಂತರ ಸಮಾನತೆಗಾಗಿ ಹೋರಾಡಿದವರು ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದಿಲ್ಲಿ ತಿಳಿಸಿದ್ದಾರೆ.



ಸಂವಿಧಾನ ಶಿಲ್ಪಿ, ಭಾರತ ರತ್ನ ಡಾ. ಬಿ.ಆರ್.ಅಂಬೇಡ್ಕರ್ ಅವರ 68ನೇ ಮಹಾ ಪರಿನಿರ್ವಾಣ ದಿನದ ಅಂಗವಾಗಿ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಡಾ.ಅಂಬೇಡ್ಕರ್ ಭಾರತಕ್ಕೆ ಜಗತ್ತಿನಲ್ಲಿಯೇ ಶ್ರೇಷ್ಠ ಸಂವಿಧಾನ ನೀಡಿದ್ದಾರೆ, ತಮ್ಮ ಬದುಕನ್ನು ಸಾಮಾಜಿಕ ಹೋರಾಟ ಹಾಗೂ ಸಮಾಜ ಪರಿವರ್ತನೆಗೆ ತೊಡಗಿಸಿಕೊಂಡರು, ದೇಶ ಹಾಗೂ ಸಾಮಾಜಿಕ ಬದುಕಿಗೆ ಅಗತ್ಯವಾದ ಸಂವಿಧಾನ ಕೊಟ್ಟಿದ್ದಾರೆ ಎಂದರು.

ಸಂವಿಧಾನದ ಶ್ರೇಷ್ಠತೆ ತಿಳಿಯಬೇಕಾದರೆ ಒಳ್ಳೆಯವರ ಕೈಯ್ಯಲ್ಲಿ ಅನುಷ್ಠಾನವಾಗಬೇಕು, ಕೆಟ್ಟವರ ಕೈಗೆ ಹೋದರೆ ಕೆಟ್ಟದಾಗುತ್ತದೆ ಎಂಬುದಾಗಿ ಡಾ.ಅಂಬೇಡ್ಕರ್ ದೇಶದ ಜನರಿಗೆ ಎಚ್ಚರಿಕೆ ಕೊಟ್ಟಿದ್ದರು.

ದಲಿತರಿಗಲ್ಲದೆ, ಎಲ್ಲರಿಗೂ ಸಾಮಾಜಿಕ ಅವಕಾಶ ದೊರಕಿಸಲು ಶ್ರಮಿಸಿದರು, ಅವಕಾಶ ವಂಚಿತರು, ಶೋಷಣೆ, ಅನ್ಯಾಯ, ಅವಮಾನ, ದೌರ್ಜನ್ಯಕ್ಕೆ ಒಳಪಟ್ಟ ಎಲ್ಲ ಜನರ ಪರವಾಗಿ ಕೆಲಸ ಮಾಡಿದರು.

ಸಮಾಜದಲ್ಲಿ ಸಮಾನತೆ ನಿರ್ಮಾಣವಾಗಬೇಕು, ಸಂವಿಧಾನದ ಧ್ಯೇಯೋದ್ದೇಶಗಳೂ ಅದನ್ನೇ ಹೇಳುತ್ತವೆ, ಸಂವಿಧಾನದ ಅನುಕೂಲ ಪಡೆದವರು ಅವರ ಸೋದರ ಜನಾಂಗಗಳಿಗೆ ಸಹಾಯ ಮಾಡಬೇಕು, ಎಲ್ಲರೂ ಸಂವಿಧಾನ ಅರ್ಥ ಮಾಡಿಕೊಳ್ಳಬೇಕೆಂದು ಡಾ.ಅಂಬೇಡ್ಕರ್ ಬಯಸಿದ್ದರು. ಬಹಳಷ್ಟು ಮಂದಿ ಸಂವಿಧಾನ ವಿರೋಧಿಸುತ್ತಾರೆ. ಭಾರತ ಬಹುಸಂಸ್ಕೃತಿ, ಬಹುತ್ವದ ದೇಶ, ಅನೇಕ ಜಾತಿ, ಧರ್ಮ, ಭಾಷೆಗಳೂ ಇವೆ. ಇದಕ್ಕನುಗುಣವಾದ ಸಂವಿಧಾನವನ್ನು ಡಾ. ಅಂಬೇಡ್ಕರ್ ಕೊಟ್ಟರು.

ಮೂಲಭೂತವಾಗಿ ನಾವೆಲ್ಲಾ ಮನುಷ್ಯರು, ಮಾನವರು ಪರಸ್ಪರ ಪ್ರೀತಿಸಬೇಕೇ ಹೊರತು ದ್ವೇಷ ಸಲ್ಲದು ಎಂಬುದನ್ನು ಡಾ.ಅಂಬೇಡ್ಕರ್ ತಮ್ಮ ಬದುಕಿನಲ್ಲಿ ಸಾರಿದ್ದರು.

ಜಾತಿ ವ್ಯವಸ್ಥೆ ವಿರುದ್ಧ ಹೋರಾಡಿದ ನಾನು, ಹಿಂದೂ ಆಗಿ ಹುಟ್ಟಿದ್ದು, ಹಿಂದೂ ಆಗಿ ಸಾಯುವುದಿಲ್ಲ ಎಂದು ತಮ್ಮ ಕಡೇ ದಿನಗಳಲ್ಲಿ ಬೌದ್ಧ ಧರ್ಮ ಸ್ವೀಕಾರ ಮಾಡಿದರು, ನಂತರ ಬಹಳ ದಿನಗಳ ಕಾಲ ಅವರು ಉಳಿಯಲಿಲ್ಲ.

ಸಂವಿಧಾನ ಮತ್ತು ಅವರ ಹೋರಾಟ ದಾರಿಯಲ್ಲಿ ನಡೆಯುವ ಪ್ರಾಮಾಣಿಕ ಪ್ರಯತ್ನವೇ ಡಾ.ಅಂಬೇಡ್ಕರ್ ಅವರಿಗೆ ನಾವು ಸಲ್ಲಿಸುವ ಗೌರವ, ಸಂವಿಧಾನ, ಪ್ರಜಾಪ್ರಭುತ್ವ, ಸಮಾನತೆ ಪ್ರಯತ್ನವನ್ನು ನಮ್ಮ ಸರ್ಕಾರ ಮಾಡುತ್ತಿದೆ.

ಬಳ್ಳಾರಿಯಲ್ಲಿ ಬಾಣಂತಿಯರ ಸಾವು ಪ್ರಕರಣಗಳಿಗೆ ಸಂಬಂಧಿಸಿದಂತೆ ಸಭೆ ನಡೆಸಿ ಡ್ರಗ್ಸ್ ಕಂಟ್ರೋಲರ್ ಅನ್ನು ಅಮಾನತು ಮಾಡಲಾಗಿದೆ. ಸಾವು ಏಕೆ ಸಂಭವಿಸಿದೆ ಎಂದು ಪರಿಶೀಲಿಸಲಾಗುವುದು ಎಂದರು.

ಡಾ.ಬಿ.ಆರ್ ಅಂಬೇಡ್ಕರ್ ಮಹಾ ಪರಿನಿಬ್ಬಾಣ ದಿನ ಆಚರಣೆ



ಬಾಬಾ ಸಾಹೇಬ್ ಡಾ.ಬಿ.ಆರ್ ಅಂಬೇಡ್ಕರ್ ಅವರ 68 ನೇ ಮಹಾ ಪರಿನಿಬ್ಬಾಣ ದಿನದ ಅಂಗವಾಗಿ ಮೈಸೂರಿನ ಮಾನಂದವಾಡಿ ರಸ್ತೆಯಲ್ಲಿನ ಅಶೋಕಪುರಂ ಬಡಾವಣೆಯ ಬಿ.ಬಸವಲಿಂಗಪ್ಪ ವೃತ್ತದಲ್ಲಿರುವ ಅಂಬೇಡ್ಕರ್ ಪುತ್ಥಳಿಗೆ ಆದಿಕರ್ನಾಟಕ ಹಿತರಕ್ಷಣಾ ಹೋರಾಟ ಸಮಿತಿ ವತಿಯಿಂದ ಗೌರವ ಸಮರ್ಪಣೆ ಮಾಡಲಾಯಿತು. ಸಂವಿಧಾನ ಸಂರಕ್ಷಣಾ ಹೋರಾಟ ಸಮಿತಿ ರಾಜ್ಯಧ್ಯಕ್ಷ ಎನ್.ಭಾಸ್ಕರ್ ಅಂಬೇಡ್ಕರ್ ಪುತ್ಥಳಿಗೆ ಮಾಲಾರ್ಪಣೆ ಮಾಡಿದರು. ಸಮಿತಿ ಅಧ್ಯಕ್ಷ ಕೆ.ಮುರಳಿ. ಕಾರ್ಯದರ್ಶಿ ಅನಂತನಾಗ್. ಉಪಾಧ್ಯಕ್ಷ ತ್ರಿಶುಲ್ ಸೇರಿದಂತೆ ಗ್ರಾಮಸ್ಥರು ಉಪಸ್ಥಿತರಿದ್ದರು.

ಶ್ರೀ ಷಷ್ಠಿ ಸುಬ್ರಹ್ಮಣ್ಯ ಸ್ವಾಮಿಯ ಪೂಜಾ ಮಹೋತ್ಸವ



ಮೈಸೂರಿನ ಕನಕಗಿರಿಯ ಸೂಯೇಜ್ ಫಾರಂ ರಸ್ತೆಯಲ್ಲಿ ಶ್ರೀ ಷಷ್ಠಿ ಸುಬ್ರಹ್ಮಣ್ಯ ಸ್ವಾಮಿಯ ಪೂಜಾ ಮಹೋತ್ಸವ ಜರುಗಿತು. ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಮುಖಂಡರುಗಳಾದ ಕೇಬಲ್ ಮಹದೇವು, ಪುರಿಬಟ್ಟಿ ಮರಿಸ್ವಾಮಿ, ದೊಡ್ಡಯ್ಯ(ದೊಡ್ಡ), ನಾರಾಯಣ, ಮಲ್ಲೇಶ್, ರವಿ, ನಾಗರಾಜು, ಪಳನಿ, ರಾಜೇಶ್, ಶಿವು ಮತ್ತಿತರರು ಉಪಸ್ಥಿತರಿದ್ದರು.

ನಟ ದರ್ಶನ್, ಗ್ಯಾಂಗ್ ಜಾಮೀನು ಅರ್ಜಿ ವಿಚಾರಣೆ ಮತ್ತೆ ಮುಂದೂಡಿಕೆ

ಬೆಂಗಳೂರು, ಡಿ.6– ರೇಣುಕಾಸ್ವಾಮಿ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ನಟ ದರ್ಶನ್ ಹಾಗೂ ಗ್ಯಾಂಗ್‌ಗೆ ಮತ್ತೆ ನಿರಾಸೆಯಾಗಿದೆ. ಇಂದು ಜಾಮೀನು ಸಿಗುವ ನಿರೀಕ್ಷೆಯಲ್ಲಿದ್ದ ಆರೋಪಿಗಳಿಗೆ ಜಾಮೀನು ಅರ್ಜಿ ವಿಚಾರಣೆಯನ್ನು ಮತ್ತೆ ಮುಂದೂಡಿ ಹೈಕೋರ್ಟ್ ಆದೇಶ ನೀಡಿದೆ.

ದರ್ಶನ್ ಹಾಗೂ ಗ್ಯಾಂಗ್‌ನ ಜಾಮೀನು ಅರ್ಜಿ ವಿಚಾರಣೆಗೆ ಸಂಬಂಧಿಸಿದಂತೆ ಇಂದು ಹೈಕೋರ್ಟ್, ಸರ್ಕಾರದ ಪರ ವಕೀಲ ಪ್ರಸನ್ನಕುಮಾರ್ ಹಾಗೂ ದರ್ಶನ್ ಪರ ವಕೀಲ ನಾಗೇಶ್, ಅವರ ವಾದ ಹಾಗೂ ಪ್ರತಿವಾದವನ್ನು ಆಲಿಸಿತು.

ಈ ವೇಳೆ ನ್ಯಾ.ವಿಶ್ವಜಿತ್ ಶೆಟ್ಟಿ, ನಟ ದರ್ಶನ್‌ಗೆ ಸರ್ಜರಿಗೆ ವಿಳಂಬ ಮಾಡುತ್ತಿರುವ ಕಾರಣದ ಬಗ್ಗೆ ಪ್ರಶ್ನಿಸಿದರು. ಬಿಪಿಯಲ್ಲಿ ವ್ಯತ್ಯಾಸವಾಗುತ್ತಿರುವ ಕಾರಣ ಸರ್ಜರಿಗೆ ವೈದ್ಯರು ವಿಳಂಬ ಮಾಡುತ್ತಿರುವುದಾಗಿ ದರ್ಶನ್ ಪರ ವಕೀಲರು ವಾದ ಮಂಡಿಸಿದ್ದಾರೆ. ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿದ ಸರ್ಕಾರದ ಪರ ವಕೀಲರು, ದರ್ಶನ್ ಪರ ವಕೀಲರು ಕೋರ್ಟ್ ದಾರಿ ತಪ್ಪಿಸುತ್ತಿದ್ದಾರೆ. ಇದೊಂದು ರೀತಿಯಲ್ಲಿ ತಲೆ ಬಾಚ್ಕೊಳಿ, ಪೌಡರ್ ಹಾಕ್ಕೊಳಿ ಎಂಬ ಹಾಡಿನ ರೀತಿಯಂತಿದೆ. ಎರಡು ವಾರದ ಹಿಂದೆಯೂ ಬಿಪಿ ವ್ಯತ್ಯಾಸ ಎಂಬ ಕಾರಣ ನೀಡಿದ್ದರು. ಔಷಧಿ ಮೂಲಕವೇ ಬಿಪಿ ನಿಯಂತ್ರಣದಲ್ಲಿಟ್ಟು ಸರ್ಜರಿ ಮಾಡ ಬಹುದಾಗಿದೆ ಎಂದು ವಾದ ಮಂಡಿಸಿದ್ದಾರೆ. ಸುದೀರ್ಘ ವಾದ–ಪ್ರತಿವಾದ ಆಲಿಸಿದ ಹೈಕೋರ್ಟ್, ದರ್ಶನ್ ಹಾಗೂ ಗ್ಯಾಂಗ್ ನ ಜಾಮೀನು ಅರ್ಜಿ ವಿಚಾರಣೆಯನ್ನು ಸೋಮವಾರ ಮಧ್ಯಾಹ್ನ 2:30ಕ್ಕೆ ಮುಂದೂಡಿ ಆದೇಶ ಹೊರಡಿಸಿದೆ.

ಅರ್ಜುನನಿಗೆ ಗೆಳೆಯರ ನಮನ



ಮೈಸೂರಿನಲ್ಲಿ ಅಂಬಾರಿಯ ಅರ್ಜುನ ಆನೆಯ ಪುಣ್ಯಸ್ಮರಣೆ ಆಚರಿಸಲಾಯಿತು.

ಮೈಸೂರು,ಡಿ.6(ಎಸ್‌ಬಿಡಿ)– ಮೈಸೂರಿನ ಶ್ರೀರಾಮ ಗೆಳೆಯರ ಬಳಗದ ವತಿಯಿಂದ 'ಅರ್ಜುನ' ಆನೆಯ ಮೊದಲ ವರ್ಷದ ಪುಣ್ಯಸ್ಮರಣೆ ಆಚರಿಸಲಾಯಿತು.

ನಗರದ ಚಾಮುಂಡಿಪುರಂ ವೃತ್ತದಲ್ಲಿ ಬಳಗದ ಸಂದೀಪ್ ನೇತೃತ್ವದಲ್ಲಿ ನಡೆದ ಕಾರ್ಯಕ್ರಮದಲ್ಲಿ ಬಳಗದ ಪದಾಧಿಕಾರಿಗಳು, ಸ್ಥಳೀಯರು ಹಾಗೂ ಅರ್ಜುನನ ಅಭಿಮಾನಿಗಳು ಅರ್ಜುನನ ಫೋಟೋಗೆ ಪುಷ್ಪಾರ್ಚನೆ ಮಾಡಿ, ಮೇಣದ ಬತ್ತಿ ಬೆಳಗಿಸುವ ಮೂಲಕ ನಮನ ಸಲ್ಲಿಸಿದರು.

ಅರ್ಜುನನ ಮಾವುತರಾಗಿದ್ದ ದೊಡ್ಡ ಮಾಸ್ತಿ ಅವರ ಮಗ ಮಹೇಶ್ ಕಾರ್ಯಕ್ರಮದಲ್ಲಿ ಪಾಲ್ಗೊಂಡು, ಅರ್ಜುನನೊಂದಿಗಿನ ಒಡನಾಟವನ್ನು ಹಂಚಿಕೊಂಡರು.

ಅರ್ಜುನನನ್ನು ನನ್ನ ತಂದೆ ಸಾಕಿ–ಸಲಹಿದರು. ಅವರು ತೋರಿದ ಪ್ರೀತಿಯಿಂದಾಗಿ ಅರ್ಜುನ ತನ್ನ ವರ್ತನೆಯನ್ನೇ ಬದಲಾಯಿಸಿಕೊಂಡು ದಸರಾ ಮಹೋತ್ಸವದ ಅಂಬಾರಿ ಆನೆಯಾಗಿ ಮೆರೆದ. ನಾನೂ ಆ ಸುಂದರ ಕ್ಷಣಗಳಿಗೆ ಸಾಕ್ಷಿಯಾಗಿದ್ದೇನೆ. ಅರ್ಜುನನೊಂದಿಗಿನ ಒಡನಾಟ ಅವಿಸ್ಮರಣೀಯ. ಕುಟುಂಬದ ಸದಸ್ಯನನ್ನು ಕಳೆದುಕೊಂಡಂತಾಗಿದೆ. ಆದರೆ ಅವನ ನೆನಪು ಎಂದಿಗೂ ಮಾಸುವುದಿಲ್ಲ ಎಂದು ನುಡಿದರು.

ಆಡಳಿತ ಮಂಡಳಿಗೆ ಚುನಾವಣೆ

ಮೈಸೂರು, ಡಿ.6–ಮೈಸೂರಿನ ರಾಮಕೃಷ್ಣನಗರ 'ಐ' ಬ್ಲಾಕ್‌ನಲ್ಲಿರುವ ಹೀಲ್ ಸೌಹಾರ್ದ ವಿವಿಧೋದ್ದೇಶ ಸಹಕಾರಿ ಸಂಘದ ಆಡಳಿತ ಮಂಡಳಿಗೆ ಡಿ.22ರಂದು ಬೆಳಗ್ಗೆ 9 ಗಂಟೆಯಿಂದ ಸಂಜೆ 4 ಗಂಟೆಯವರೆಗೆ ಸಂಘದ ಕಚೇರಿಯಲ್ಲಿ ಚುನಾವಣೆ ನಡೆಯಲಿದೆ. ಚುನಾವಣೆಗೆ ಸ್ಪರ್ಧಿಸಲು ನಾಮಪತ್ರಗಳನ್ನು 8–12–2024ರವರೆಗೆ ಬೆಳಗ್ಗೆ 11 ಗಂಟೆಯಿಂದ ಅಪರಾಹ್ನ 3 ಗಂಟೆಯವರೆಗೆ ಸಂಘದ ಕಚೇರಿಯಲ್ಲಿ ಸ್ವೀಕರಿಸಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

ನನ್ನ ವಿರುದ್ಧ ಶಿಸ್ತು ಕ್ರಮದ ಪ್ರಶ್ನೆಯೇ ಇಲ್ಲ, ಹೈಕಮಾಂಡ್‌ನವರು ಬೆನ್ನು ತಟ್ಟಿ ಕಳಿಸಿದ್ದಾರೆ

- ದೆಹಲಿಯಿಂದ ಹಿಂದುರುಗಿದ ಯತ್ನಾಳ್ ಹೇಳಿಕೆ
- ವಕ್ಫ್ ವಿರುದ್ಧದ ಹೋರಾಟಕ್ಕೆ ವರಿಷ್ಠರ ಶಹಭಾಸ್‌ಗಿರಿ
- ಇನ್ನು ನಾನು ಸೈಲೆಂಟ್; ರಮೇಶ್ ಜಾರಕಿಹೊಳಿ ವೈಲೆಂಟ್!

ಹುಬ್ಬಳ್ಳಿ, ಡಿ.6– ನನ್ನ ವಿರುದ್ಧ ಶಿಸ್ತುಕ್ರಮದ ಪ್ರಶ್ನೆಯೇ ಇಲ್ಲ. ಒಳ್ಳೆಯ ಕೆಲಸ ಮಾಡುತ್ತಿದ್ದೀಯಾ, ಮುಂದೆ ಒಳ್ಳೆಯ ಭವಿಷ್ಯವಿದೆ ಎಂದು ನಮ್ಮ ವರಿಷ್ಠರು ಬೆನ್ನು ತಟ್ಟಿ ಕಳಿಸಿದ್ದಾರೆ ಎಂದು ಮಾಜಿ ಸಚಿವ ಬಸನಗೌಡ ಪಾಟೀಲ್ ಯತ್ನಾಳ್ ಹೇಳಿದರು.

ದೆಹಲಿಯಿಂದ ನೇರವಾಗಿ ಹುಬ್ಬಳ್ಳಿಯ ವಿಮಾನ ನಿಲ್ದಾಣಕ್ಕೆ ಬಂದಿಳಿದ ಅವರು ಸುದ್ದಿಗಾರರೊಂದಿಗೆ ಮಾತನಾಡಿದರು.

ವಕ್ಫ್ ವಿಚಾರವಾಗಿ ನಮ್ಮಿಂದಾದ ಅನ್ಯಾಯದ ವರದಿಯನ್ನು ಕೇಂದ್ರದ ಜಂಟಿ ಸದನ ಸಮಿತಿ ಅಧ್ಯಕ್ಷ ಜಗದಾಂಬಿಕ್ ಅವರ ಮುಂದಿಟ್ಟಿದ್ದೇವೆ. ವರದಿ ನೋಡಿ ನಮಗೆ ಅಭಿನಂದನೆ ಸಲ್ಲಿಸಿದ್ದಾರೆ ಎಂದರು.

ನನ್ನ ಮೇಲೆ ಹೈಕಮಾಂಡ್‌ಗೆ ಯಾವಾಗಲೂ ವಿಶೇಷ ಪ್ರೀತಿ. ಯತ್ನಾಳ್‌ನನ್ನು ಮುಗಿಸುತ್ತೇನೆ ಅನ್ನೋರಿಂದಲೂ ಏನೂ ಮಾಡೋಕಾಗಲ್ಲ. ನನ್ನ ವಿರುದ್ಧ ಮಾತನಾಡಿದವರಿಗೆ ಉತ್ತರ ಕೊಡಲು ನಾನು ಸದಾ ಸಿದ್ಧ ಎಂದರು. ವಕ್ಫ್ ಕಾನೂನಿನ ಬಗ್ಗೆ ನಾವು ಹೆಚ್ಚು ಗಮನ ಕೊಟ್ಟಿದ್ದೇವೆ. ಇನ್ನು ಮುಂದೆ ನಾನು ಸೈಲೆಂಟ್ ಆಗುತ್ತೇನೆ. ರಮೇಶ್ ಜಾರಕಿಹೊಳಿ ವೈಲೆಂಟ್ ಆಗಲಿದ್ದಾರೆ. ಶಾಂತ ರೀತಿಯಿಂದಲೇ ಕಾಂಗ್ರೆಸ್ ಸರ್ಕಾರದ ವಿರುದ್ಧ ಹೋರಾಟ ಮುಂದುವರಿಸುತ್ತೇವೆ.



ನಮ್ಮ ನಾಯಕರ ವಿರುದ್ಧ ಗುಪ್ತ ಪತ್ರಗಳನ್ನು ಬರೆಯುತ್ತೇನೆ. ವಿಜಯೇಂದ್ರ ಸೇರಿ ಎಲ್ಲರ ಬಗ್ಗೆಯೂ ಬರೆಯುತ್ತೇವೆ. ವರಿಷ್ಠರ ಗಮನಕ್ಕೆ ತರುತ್ತೇವೆ. ನಮ್ಮ ಟಾರ್ಗೆಟ್ ವಿಜಯೇಂದ್ರ ಅಲ್ಲ. ಬಿಜೆಪಿಯನ್ನು ಮತ್ತೊಮ್ಮೆ ಅಧಿಕಾರಕ್ಕೆ ತರಬೇಕು ಅನ್ನೋದೇ ಆಗಿದೆ ಎಂದರು.

ನಮ್ಮ ತಂಡ ದಿನದಿಂದ ದಿನಕ್ಕೆ ಶಕ್ತಿಯುತವಾಗುತ್ತಿದೆ. ಮುಂಬರುವ ಶನಿವಾರ ಮತ್ತು ಭಾನುವಾರ ವಕ್ಫ್ ವಿರುದ್ಧ 2ನೇ ಹಂತದ ಹೋರಾಟ ಆರಂಭಿಸಲಿದ್ದೇವೆ. ಹೊಸಪೇಟೆಯ ನಂತರ ಚಿತ್ರದುರ್ಗ, ದಾವಣಗೆರೆ, ಉತ್ತರ ಕನ್ನಡ, ದಕ್ಷಿಣ ಕನ್ನಡ, ಮೈಸೂರು ಬೆಂಗಳೂರಿನಲ್ಲಿ ನಮ್ಮ ತಂಡ ಹೋರಾಟ ಮಾಡಲಿದೆ. ಪೂರ್ಣ ಹಂತದ ಹೋರಾಟ ಮುಗಿದ ಬಳಿಕ ಅನ್ಯಾಯಕ್ಕೊಳಗಾದ ಮಠಮಾನ್ಯಗಳ ಸ್ವಾಮೀಜಿಗಳು, ರೈತರನ್ನು ಪ್ರಧಾನಿ ಅವರಿಗೆ ಭೇಟಿ ಮಾಡಿಸಲಿದ್ದೇವೆ. ಅಲ್ಲದೆ, ಮುಂದಿನ ದಿನಗಳಲ್ಲಿ ವಕ್ಫ್ ವಿಚಾರವಾಗಿ ದಾವಣಗೆರೆ ಜಿಲ್ಲೆಯಲ್ಲಿ ದೊಡ್ಡ ಸಮಾವೇಶ ಮಾಡಲು ನಿರ್ಣಯ ಕೈಗೊಂಡಿದ್ದೇವೆ ಎಂದರು.

ಚಳಿಗಾಲದ ಅಧಿವೇಶನದ ಆರಂಭದ ದಿನಗಳಲ್ಲೇ ಉತ್ತರ ಕರ್ನಾಟಕದ ಸಮಸ್ಯೆಗಳ ಕುರಿತು ಚರ್ಚೆಗೆ ಅವಕಾಶ ನೀಡಬೇಕು. ಪಂಚಮಸಾಲಿ ಸಮುದಾಯಕ್ಕೆ ಮೀಸಲಾತಿ ಮತ್ತು ಕುರುಬ ಸಮಾಜವನ್ನು ಎಸ್‌ಟಿಗೆ ಸೇರಿಸಬೇಕು. ಜೊತೆಗೆ ಕೃಷ್ಣಾ ಮೇಲ್ದಂಡೆ ಯೋಜನೆಯ ಬಗ್ಗೆಯೂ ಚರ್ಚೆ ಮಾಡಲಾಗುವುದು. ಪಂಚಮಸಾಲಿ ಸಮಾಜಕ್ಕೆ ಮೀಸಲಾತಿ ವಿಚಾರವಾಗಿ ನಮ್ಮ ಹೋರಾಟ ಹತ್ತಿಕ್ಕಲು ಪ್ರಯತ್ನಿಸಿದರೆ ಮುಂದಿನ 24 ಗಂಟೆಗಳಲ್ಲಿ ಸರ್ಕಾರವೇ ಇರುವುದಿಲ್ಲ ಎಂದು ಎಚ್ಚರಿಕೆ ನೀಡಿದರು.

ದೇಶ - ವಿದೇಶ

ಬಾಂಗ್ಲಾದೇಶದ ಟಕಾ ನೋಟುಗಳಲ್ಲಿ ಮುಜೀಬುರ್ ರೆಹಮಾನ್ ಭಾವಚಿತ್ರಕ್ಕೆ ಕತ್ತರಿ

ಢಾಕಾ, ಡಿ.6– ಬಾಂಗ್ಲಾದೇಶ ಬ್ಯಾಂಕ್ ಜುಲೈ ದಂಗೆಯ ಫೀಚರ್‌ಗಳನ್ನು ಒಳಗೊಂಡಂತೆ ಹೊಸ ನೋಟುಗಳನ್ನು ಮುದ್ರಿಸುತ್ತಿದೆ ಎಂದು ಢಾಕಾ ಟ್ರಿಬ್ಯೂನ್ ಪತ್ರಿಕೆ ವರದಿ ಮಾಡಿದೆ ಆಗಸ್ಟ್ 5ರಂದು ಆಗಿನ ಪ್ರಧಾನಿ ಶೇಖ್ ಹಸೀನಾ ಅವರನ್ನು ಭಾರತಕ್ಕೆ ಗಡೀಪಾರು ಮಾಡಲು ಒತ್ತಾಯಿಸಿದ ವಿದ್ಯಾರ್ಥಿಗಳ ನೇತೃತ್ವದ ಪ್ರತಿಭಟನೆಯನ್ನು ಉಲ್ಲೇಖಿಸಲಾಗಿದೆ.



ಕೇಂದ್ರೀಯ ಬ್ಯಾಂಕ್ ಪ್ರಕಾರ ಮಧ್ಯಂತರ ಸರ್ಕಾರದ ಸೂಚನೆಗಳ ಮೇರೆಗೆ ಟಕಾ 20, 100, 500 ಮತ್ತು 1,000ರ ನೋಟುಗಳನ್ನು ಮುದ್ರಿಸಲಾಗುತ್ತಿದೆ. ಹೊಸ ಕರೆನ್ಸಿ ನೋಟುಗಳು 'ಬಂಗಬಂಧು' ಶೇಖ್ ಮುಜಿಬುರ್ ರೆಹಮಾನ್ ಅವರ ಚಿತ್ರವನ್ನು ಒಳಗೊಂಡಿರುವುದಿಲ್ಲ ಎಂದು ಬ್ಯಾಂಕ್‌ನ್ನು ಉಲ್ಲೇಖಿಸಿ ಪತ್ರಿಕೆಗಳು ವರದಿ ಮಾಡಿವೆ. ಧಾರ್ಮಿಕ ರಚನೆಗಳು, ಬಂಗಾಳಿ ಸಂಪ್ರದಾಯಗಳು ಮತ್ತು ಜುಲೈ ದಂಗೆಯ ಸಮಯದಲ್ಲಿ ಚಿತ್ರಿಸಿದ 'ಗೀಚುಬರಹ'ಗಳನ್ನು ಕರೆನ್ಸಿ ನೋಟುಗಳಲ್ಲಿ ಸೇರಿಸಲಾಗುವುದು ಎಂದು ಪತ್ರಿಕೆ ಹೇಳಿದೆ.

ಮುಂದಿನ ಆರು ತಿಂಗಳೊಳಗೆ ಹೊಸ ನೋಟು ಮಾರುಕಟ್ಟೆಗೆ ಬಿಡುಗಡೆಯಾಗಬಹುದು ಎಂದು ನಾನು ಭಾವಿಸುತ್ತೇನೆ ಎಂದು ಬಾಂಗ್ಲಾದೇಶ ಬ್ಯಾಂಕ್ ಕಾರ್ಯನಿರ್ವಾಹಕ ನಿರ್ದೇಶಕ ಹುಸ್ನೇರಾ ಶಿಖಾ ಹೇಳಿದ್ದಾರೆ.

'ಮೇಕ್ ಇನ್ ಇಂಡಿಯಾ' ಶ್ಲಾಘನೀಯ; ಭಾರತದಲ್ಲಿ ಹೂಡಿಕೆಗೆ ರಷ್ಯಾ ಸಿದ್ಧ

ಮಾಸ್ಕೋ(ರಷ್ಯಾ), ಡಿ.6– ಪ್ರಧಾನಿ ನರೇಂದ್ರ ಮೋದಿ ಅವರ 'ಭಾರತ ಮೊದಲು' ನೀತಿ ಮತ್ತು 'ಮೇಕ್ ಇನ್ ಇಂಡಿಯಾ' ಉಪಕ್ರಮವನ್ನು ಶ್ಲಾಘಿಸಿದ ಅಧ್ಯಕ್ಷ ವ್ಲಾದಿಮಿರ್ ಪುಟಿನ್, ಸರಕುಗಳ ಉತ್ಪಾದನೆಗಾಗಿ ಭಾರತದಲ್ಲಿ ಹೂಡಿಕೆ ಮಾಡಲು ರಷ್ಯಾ ಇಚ್ಛಿಸುವುದಾಗಿ ಹೇಳಿದ್ದಾರೆ. ಮಾಸ್ಕೋದಲ್ಲಿ ನಡೆದ 15ನೇ ವಿಟಿಬಿ ರಷ್ಯಾ ಕಾಲಿಂಗ್ ಇನ್ವೆಸ್ಟ್‌ಮೆಂಟ್ ಫೋರಂ ಸಮಾವೇಶವನ್ನು ಉದ್ದೇಶಿಸಿ ಮಾತನಾಡಿದ ಅವರು, ರಷ್ಯಾದ ಆಮದು ಬದಲಿ ಕಾರ್ಯಕ್ರಮ ಮತ್ತು ಭಾರತದ 'ಮೇಕ್ ಇನ್ ಇಂಡಿಯಾ' ಉಪಕ್ರಮದ ನಡುವಿನ ಹೋಲಿಕೆಗಳನ್ನು ವಿವರಿಸಿದರು.

ಪ್ರಧಾನಿ ಮೋದಿ ಅವರು ಮೇಕ್ ಇನ್ ಇಂಡಿಯಾ ಎಂಬ ನಮ್ಮ ರೀತಿಯ ಯೋಜನೆಯೊಂದನ್ನು ಜಾರಿಗೊಳಿಸಿದ್ದಾರೆ. ನಾವೂ ಸಹ ಭಾರತದಲ್ಲಿ ಕಾರ್ಖಾನೆಗಳನ್ನು ಸ್ಥಾಪಿಸಲು ಸಿದ್ಧರಿದ್ದೇವೆ. ಪ್ರಧಾನಮಂತ್ರಿಯವರ ನಾಯಕತ್ವದಲ್ಲಿ ಭಾರತ ಸರ್ಕಾರವು ಭಾರತವನ್ನು ಮೊದಲ ಸ್ಥಾನದಲ್ಲಿರಿಸುವ ನೀತಿಯಿಂದ ಹೂಡಿಕೆಗೆ ಪ್ರಶಸ್ತ ದೇಶವಾಗಿದೆ. ಭಾರತದಲ್ಲಿ ಹೂಡಿಕೆ ಮಾಡುವುದು ಲಾಭದಾಯಕ ಎಂಬುದು ನಮ್ಮ ಭಾವನೆಯಾಗಿದೆ ಎಂದು ರಷ್ಯಾ ಅಧ್ಯಕ್ಷರು ಹೇಳಿದರು.

ರಷ್ಯಾದ ತೈಲ ದೈತ್ಯ ರೋಸನೆಫ್ಟ್ ಇತ್ತೀಚೆಗೆ ಭಾರತದಲ್ಲಿ 20 ಬಿಲಿಯನ್ ಡಾಲರ್ ಹೂಡಿಕೆ ಮಾಡಿರುವುದನ್ನು ಪುಟಿನ್ ಈ ಸಂದರ್ಭದಲ್ಲಿ ಪ್ರಸ್ತಾಪಿಸಿದರು.

ಬಂಡುಕೋರರ ಮುಂದೆ ಮಂಡಿಯೂರಿದ ಸಿರಿಯಾ; ಸೇನೆಯನ್ನು ಹಿಮ್ಮೆಟ್ಟಿ ಒಳಪ್ರವೇಶಿಸಿದ ಉಗ್ರರು

ಹಮಾ, ಡಿ.6– ಸಿರಿಯಾದಲ್ಲಿ 13 ವರ್ಷಗಳಿಂದ ಅಂತರ್ಯುದ್ಧ ನಡೆಯುತ್ತಿದ್ದು, ಕಳೆದ ಕೆಲದಿನಗಳಿಂದ ಈ ಯುದ್ಧ ಮತ್ತೆ ವೇಗ ಪಡೆದುಕೊಂಡಿದೆ. ಇದೀಗ ಅಲೆಪ್ಪೊ ನಗರದ ಬಹುತೇಕ ಭಾಗಗಳನ್ನು ಒಳಗೊಂಡಂತೆ ದೇಶದ ವಾಯುವ್ಯದಲ್ಲಿ ಹಲವಾರು ಪ್ರದೇಶಗಳನ್ನು ಬಂಡುಕೋರರು ವಶಪಡಿಸಿಕೊಂಡಿದ್ದಾರೆ.



ಮೂರು ದಿನಗಳ ಭೀಕರ ಹೋರಾಟದ ಬಳಿಕ ಮಧ್ಯ ಸಿರಿಯಾದ ಆಯಕಟ್ಟಿನ ನಗರ ಹಮಾದ ಒಳಗೆ ಪ್ರವೇಶಿಸಲು ಬಂಡುಕೋರ ಪಡೆ ಸಫಲಗೊಂಡಿದ್ದು ಸರ್ಕಾರಿ ಪಡೆ ಹಿಂದಕ್ಕೆ ಸರಿದಿದೆ. ನಗರದ ಪ್ರಮುಖ ರಸ್ತೆಯನ್ನು ಬಂಡುಕೋರ ಪಡೆ ವಶಕ್ಕೆ ಪಡೆದು ನಗರದ ಕೇಂದ್ರದತ್ತ ಮುಂದುವರಿದಿದೆ ಎಂದು ವರದಿಗಳು ಹೇಳಿವೆ.

ಹಮಾ ನಗರದಿಂದ ಸರ್ಕಾರಿ ಪಡೆ ಹಿಂದಕ್ಕೆ ಸರಿದ ಬೆನ್ನಲ್ಲೇ ನಗರದ ಪೂರ್ವ ಹೊರವಲಯದಲ್ಲಿ ಸರಕಾರಿ ಪಡೆಗಳು ಹಾಗೂ ಬಂಡುಕೋರ ಪಡೆಯ ನಡುವೆ ತೀವ್ರ ಹೋರಾಟ ಮುಂದುವರಿದಿದೆ ಎಂದು ಸಿರಿಯಾದ ಸರ್ಕಾರಿ ಮಾಧ್ಯಮ ವರದಿ ಮಾಡಿದೆ. ಹಮಾ ನಗರದಿಂದ ಸೇನೆಯನ್ನು ಹಿಂದಕ್ಕೆ ಕರೆಸಿಕೊಂಡು ನಗರದ ಹೊರವಲಯದಲ್ಲಿ ನಿಯೋಜಿಸಲಾಗಿದೆ ಎಂದು ಸರಕಾರದ ಮೂಲಗಳು ದೃಢಪಡಿಸಿವೆ.

ಮಗುವಿಗೆ ಜನ್ಮ ನೀಡಿದ ಖುಷಿಯಲ್ಲಿದ್ದ ಬಾಣಂತಿ ಆಸ್ಪತ್ರೆಯ ಲಿಫ್ಟ್ ಕುಸಿದು ಸಾವು

ಉತ್ತರ ಪ್ರದೇಶ, ಡಿ.6– ಉತ್ತರ ಪ್ರದೇಶದ ಮೀರತ್‌ನ ಶಾಸ್ತ್ರಿನಗರದಲ್ಲಿ ಹೃದಯವಿದ್ರಾವಕ ಘಟನೆ ನಡೆದಿದೆ. ಹಾಪುರ್ ಚುಂಗಿಯಲ್ಲಿರುವ ಕ್ಯಾಪಿಟಲ್ ಆಸ್ಪತ್ರೆಯ ಲಿಫ್ಟ್ ಕುಸಿದು ಬಿದ್ದ ಪರಿಣಾಮ ಮಗುವಿಗೆ ಜನ್ಮ ನೀಡಿದ ಖುಷಿಯಲ್ಲಿದ್ದ ತಾಯಿ ಮೃತಪಟ್ಟಿದ್ದಾರೆ.

ಮಾಹಿತಿ ಪ್ರಕಾರ ಗುರುವಾರ ಸಂಜೆ 6 ಗಂಟೆ ಸುಮಾರಿಗೆ ಈ ಅವಘಡ ಸಂಭವಿಸಿದೆ. ಬಾಣಂತಿಯನ್ನು ಲಿಫ್ಟ್ ಮೂಲಕ ಕೆಳಗೆ ಇಳಿಸಲಾಗುತ್ತಿತ್ತು. ಆಕೆಯೊಂದಿಗೆ ಇತರ ರೋಗಿಗಳು ಮತ್ತು ಪರಿಚಾರಕರು ಇದ್ದರು. ನೆಲಮಹಡಿಯನ್ನು ತಲುಪುವ ಮೊದಲು ಲಿಫ್ಟ್ ಮುರಿದು ಬಿದ್ದಿದೆ. ಈ ವೇಳೆ ಲಿಫ್ಟ್ ಕೆಳಗೆ ಬಾಣಂತಿಯ ಕುತ್ತಿಗೆ ಸಿಲುಕಿ ಮೃತಪಟ್ಟಿದ್ದಾರೆ. ಅವರು ಸ್ಥಳದಲ್ಲೇ ಸಾವನ್ನಪ್ಪಿದ್ದು, ಮೂವರು ಗಂಭೀರವಾಗಿ ಗಾಯಗೊಂಡಿದ್ದಾರೆ.

ಅಪಘಾತದ ಮಾಹಿತಿ ತಿಳಿದ ತಕ್ಷಣ ಮಹಿಳೆಯ ಕುಟುಂಬಸ್ಥರು ಸ್ಥಳಕ್ಕಾಗಮಿಸಿ ಆಕ್ರೋಶ ವ್ಯಕ್ತಪಡಿಸಿದರು. ಸಿಟ್ಟಿಗೆದ್ದ ಕುಟುಂಬಸ್ಥರು ಆಸ್ಪತ್ರೆಯ ಗಾಜು ಹಾಗೂ ಪೀಠೋಪಕರಣಗಳನ್ನು ಒಡೆದು ಹಾಕಿದ್ದಾರೆ. ಇಡೀ ಆಸ್ಪತ್ರೆ ಆವರಣದಲ್ಲಿ ಗೊಂದಲದ ವಾತಾವರಣ ನಿರ್ಮಾಣವಾಗಿತ್ತು. ಮಾಹಿತಿ ತಿಳಿದ ಪೊಲೀಸರು ಸ್ಥಳಕ್ಕೆ ಧಾವಿಸಿ ಪರಿಸ್ಥಿತಿ ನಿಯಂತ್ರಿಸಿದರು. ಘಟನೆಯ ಕುರಿತು ತನಿಖೆ ನಡೆಸಲಾಗುತ್ತಿದೆ ಎಂದು ಸಿವಿಲ್ ಲೈನ್ ಸಿಒ ಅಭಿಷೇಕ್ ತಿವಾರಿ ತಿಳಿಸಿದ್ದಾರೆ. ಸಿಸಿಟಿವಿ ದೃಶ್ಯಾವಳಿಗಳನ್ನು ಪರಿಶೀಲನೆ ನಡೆಸಲಾಗುತ್ತಿದೆ.

ಶಂಭು ಗಡಿಯಿಂದ ರೈತರ ಪ್ರತಿಭಟನೆ

ನವದೆಹಲಿ, ಡಿ.6– ತಮ್ಮ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ 101 ಮಂದಿ ಇರುವ ರೈತರ ಪ್ರತಿಭಟನಾ ಜಾಥಾ ಶಂಭು ಗಡಿಯಿಂದ ದೆಹಲಿಯೆಡೆಗೆ ಇಂದು ಪ್ರಾರಂಭವಾಗಿದೆ. ಆದರೆ ಪ್ರತಿಭಟನಾ ಮೆರವಣಿಗೆ ಚಾಲನೆ ನೀಡಿದ ಸ್ಥಳದಿಂದ ಕೆಲವೇ ಮೀಟರ್‌ಗಳಲ್ಲಿ ರೈತರನ್ನು ಬ್ಯಾರಿಕೇಡ್ ಹಾಕಿ ಪೊಲೀಸರು ತಡೆದಿದ್ದಾರೆ.



ಹಲವು ಸುತ್ತುಗಳಲ್ಲಿ ನಿಯೋಜಿಸಲಾದ ಬ್ಯಾರಿಕೇಡ್‌ಗಳನ್ನು ರೈತರು ತಲುಪುತ್ತಿದ್ದಂತೆಯೇ ಹರ್ಯಾಣ ಭದ್ರತಾ ಸಿಬ್ಬಂದಿಗಳು ಪ್ರತಿಭಟನಾನಿರತರ ವಿರುದ್ಧ ಅಶ್ರುವಾಯು ಪ್ರಯೋಗಿಸಿದ್ದಾರೆ. ಹರಿಯಾಣ ಸರ್ಕಾರ ನಿಷೇಧಿತ ಆದೇಶಗಳನ್ನು ವಿಧಿಸಿದೆ ಮತ್ತು ಅಂಬಾಲಾ ಜಿಲ್ಲೆಯ 11 ಹಳ್ಳಿಗಳಲ್ಲಿ ಮೊಬೈಲ್ ಇಂಟರ್ನೆಟ್ ಸೇವೆಗಳನ್ನು ಸ್ಥಗಿತಗೊಳಿಸಿದೆ. ಮುಂದಿನ ವಾರದವರೆಗೆ ನಿರ್ಬಂಧಗಳು ಜಾರಿಯಲ್ಲಿರುತ್ತವೆ

ಅಂಬಾಲಾ–ದೆಹಲಿ ಗಡಿಯ ಹರಿಯಾಣ ಭಾಗದಲ್ಲಿ ಭದ್ರತಾ ಸಿಬ್ಬಂದಿಯ ಭಾರೀ ನಿಯೋಜನೆ ಮಾಡಲಾಗಿದೆ. ಅಂಬಾಲಾ ಜಿಲ್ಲಾಡಳಿತ ಈಗಾಗಲೇ ಭಾರತೀಯ ನಾಗರಿಕ ಸುರಕ್ಷಾ ಸಂಹಿತೆಯ ಸೆಕ್ಷನ್ 163ರ ಅಡಿಯಲ್ಲಿ ಆದೇಶವನ್ನು ಹೊರಡಿಸಿದೆ. ಜಿಲ್ಲೆಯಲ್ಲಿ ಐದು ಅಥವಾ ಅದಕ್ಕಿಂತ ಹೆಚ್ಚು ವ್ಯಕ್ತಿಗಳ ಯಾವುದೇ ಕಾನೂನುಬಾಹಿರ ಸಭೆಯನ್ನು ನಿರ್ಬಂಧಿಸಿದೆ.

ಅಂಬಾಲಾ ಅಧಿಕಾರಿಗಳು ಜಿಲ್ಲೆಯ ಎಲ್ಲಾ ಸರ್ಕಾರಿ ಮತ್ತು ಖಾಸಗಿ ಶಾಲೆಗಳನ್ನು ಮುಚ್ಚಲು ಆದೇಶಿಸಿದ್ದಾರೆ.

ವೀರ ಸೇನಾನಿಗಳಾದ ಕೆ.ಎಂ.ಕಾರ್ಯಪ್ಪ, ಕೆ.ಎಸ್.ತಿಮ್ಮಯ್ಯ ಅವರ ಬಗ್ಗೆ ಅವಹೇಳನ ಮಾಡಿದ ವಿದ್ಯಾಧರ್ ಗಡಿಪಾರಿಗೆ ಆಗ್ರಹಿಸಿ

ಕೊಡಗಲ್ಲಿ ಮಾಜಿ ಸೈನಿಕರ ಬೃಹತ್ ಪ್ರತಿಭಟನೆ



ಕೆ.ಎಂ.ಕಾರ್ಯಪ್ಪ ಮತ್ತು ಕೆ.ಎಸ್.ತಿಮ್ಮಯ್ಯ ಅವರ ಬಗ್ಗೆ ಸಾಮಾಜಿಕ ಜಾಲತಾಣದಲ್ಲಿ ಅವಹೇಳನ ಮಾಡಿದ ವಿದ್ಯಾಧರ್‌ನನ್ನು ಗಡಿಪಾರು ಮಾಡುವಂತೆ ಆಗ್ರಹಿಸಿ ಕರ್ನಾಟಕ ಮಾಜಿ ಸೈನಿಕರ ಸಂಘದಿಂದ ಮಡಿಕೇರಿಯಲ್ಲಿ ಪ್ರತಿಭಟನೆ ನಡೆಸಲಾಯಿತು.

ಮಡಿಕೇರಿ, ಡಿ.6–ದೇಶದ ವೀರ ಸೇನಾನಿಗಳಾದ ಕೊಡಗಿನ ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಮತ್ತು ಜನರಲ್ ಕೆ.ಎಸ್.ತಿಮ್ಮಯ್ಯ ಅವರ ಬಗ್ಗೆ ಸಾಮಾಜಿಕ ಜಾಲತಾಣದಲ್ಲಿ ಅವಹೇಳನ ಮಾಡಿದ ವಿದ್ಯಾಧರ್‌ನನ್ನು ಗಡಿಪಾರು ಮಾಡುವಂತೆ ಆಗ್ರಹಿಸಿ ಕರ್ನಾಟಕ ಮಾಜಿ ಸೈನಿಕರ ಸಂಘದಿಂದ ಶುಕ್ರವಾರ ನಗರದಲ್ಲಿ ಬೃಹತ್ ಪ್ರತಿಭಟನೆ ನಡೆಯಿತು.

ಸಂಘ ಕೊಡಗು ಜಿಲ್ಲಾಧ್ಯಕ್ಷ ಕೊಟ್ಟುಕತ್ತೀರ ಸೋಮಣ್ಣ ನೇತೃತ್ವದಲ್ಲಿ ಜಿಲ್ಲೆಯ ವಿವಿಧೆಡೆ ಮಾಜಿ ಸೈನಿಕರ ಸಂಘಟನೆ, ಕೊಡವ ಸಮಾಜಗಳ ಪ್ರತಿನಿಧಿಗಳು ಮತ್ತು ಸದಸ್ಯರು ನಗರದ ಫೀ.ಮಾ.ಕಾರ್ಯಪ್ಪ ವೃತ್ತದಲ್ಲಿ ಸಮಾವೇಶಗೊಂಡು, ಘೋಷಣೆಗಳೊಂದಿಗೆ ಫೀ.ಮಾ.ಕಾರ್ಯಪ್ಪ ವೃತ್ತದಿಂದ ಜ.ತಿಮ್ಮಯ್ಯ ವೃತ್ತದವರೆಗೆ ಪ್ರತಿಭಟನಾ ಮೆರವಣಿಗೆ ನಡೆಸಿದರು. ನಂತರ ವೀರ ಸೇನಾನಿಗೆ ಪುಷ್ಪ ನಮನ ಸಲ್ಲಿಸಿದರು.

ಕೊಟ್ಟುಕತ್ತೀರ ಸೋಮಣ್ಣ ಮಾತನಾಡಿ, ಪ್ರಥಮ ಮಹಾದಂಡ ನಾಯಕ ಫೀ.ಮಾ.ಕೆ.ಎಂ.ಕಾರ್ಯಪ್ಪ ಹಾಗೂ ಸೈನಿಕರ ಸೇನಾನಿ ಎಂದೇ ಖ್ಯಾತರಾದ ಜನರಲ್ ತಿಮ್ಮಯ್ಯ ಭಾರತದ ಹೆಮ್ಮೆಯ ಶ್ರೇಷ್ಠ ಪುತ್ರರು. ಅವರ ಬಗ್ಗೆ ವಿದ್ಯಾಧರ್ ಸಾಮಾಜಿಕ ಜಾಲತಾಣದಲ್ಲಿ ಅವಹೇಳನಕಾರಿ ಸಂದೇಶ ಹರಿಯಬಿಟ್ಟು ಭಾರತೀಯರಿಗೆ ಅವಮಾನ ಮಾಡಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ವೀರ ಸೇನಾನಿಗಳನ್ನು ಅವಮಾನಿಸಿರುವ ಆರೋಪಿ ವಿದ್ಯಾಧರ್ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು. ಆತನ ವಿರುದ್ಧ ಪ್ರಕರಣ ದಾಖಲಿಸಿ ಬಂಧಿಸಿದರೂ, ಆತ ಜಾಮೀನಿನ ಮೇಲೆ ಬಿಡುಗಡೆಯಾಗಿದ್ದಾನೆ. ಮತ್ತೆ ಆತನ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಮತ್ತು ಗಡಿಪಾರು ಮಾಡಬೇಕೆಂದು ಒತ್ತಾಯಿಸಿದರು.

ಪೊನ್ನಂಪೇಟೆ ಮಾಜಿ ಸೈನಿಕರ ಸಂಘದ ಅಧ್ಯಕ್ಷ ಐನಂಡ ಕೆ.ಮಂದಣ್ಣ ಮಾತನಾಡಿ, ಕಾರ್ಯಪ್ಪ ಮತ್ತು ಜ.ತಿಮ್ಮಯ್ಯ ಅವರನ್ನು ಅವಹೇಳನ ಮಾಡಿರುವುದು ಕೇವಲ ಜಿಲ್ಲೆಯ ಮಾಜಿ ಸೈನಿಕರಿಗೆ ಮಾತ್ರ ನೋವು ಉಂಟು ಮಾಡಿಲ್ಲ. ಬದಲಾಗಿ ದೇಶದ ಇಡೀ ಸೈನಿಕ ಸಮೂಹಕ್ಕೆ ಆಘಾತ ಉಂಟು ಮಾಡಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ರಕ್ತ ಕುದಿಯುವ ವಿಚಾರ: ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಅಜ್ಜಿನಿಕಂಡ ಮಹೇಶ್ ನಾಚಯ್ಯ ಮಾತನಾಡಿ, ಫೀ.ಮಾ.ಕಾರ್ಯಪ್ಪ ಮತ್ತು ಜ.ತಿಮ್ಮಯ್ಯ ಅವರ ಬಗ್ಗೆ ಅವಹೇಳನ ಮಾಡಿರುವುದು ಸೈನಿಕರ ನಾಡು ಕೊಡಗಿನ ಪ್ರತಿಯೊಬ್ಬರ ರಕ್ತ ಕುದಿಯುವಂತೆ ಮಾಡಿರುವ ವಿಚಾರವಾಗಿದೆ. ಶಾಂತಿ ಸೌಹಾರ್ದತೆಯ ಕೊಡಗಿನಲ್ಲಿ ಅಶಾಂತಿ ಹುಟ್ಟು ಹಾಕುವ, ಸ್ಥಳೀಯರ ಒಳ್ಳೆಯತನವನ್ನು ಹಾಳುಗೆಡಹುವ ಸಲುವಾಗಿ ವೀರ ಸೇನಾನಿಗಳ ಬಗ್ಗೆ ಅವಹೇಳನ ಮಾಡಲಾಗಿದೆ. ಸರ್ಕಾರ ತಕ್ಷಣ ಆರೋಪಿಯನ್ನು ಮತ್ತೆ ಬಂಧಿಸಿ, ಕಠಿಣ ಕಾನೂನು ಕ್ರಮ ಕೈಗೊಳ್ಳುವ ಮೂಲಕ ಸಮಾಜಘಾತುಕ ಶಕ್ತಿಗಳನ್ನು ಮಟ್ಟಹಾಕುವ ಕೆಲಸ ಮಾಡಬೇಕೆಂದು ಆಗ್ರಹಿಸಿದರು.

ಮಡಿಕೇರಿ ಕೊಡವ ಸಮಾಜದ ಅಧ್ಯಕ್ಷ ಮಂಡುವಂಡ ಪಿ.ಮುತ್ತಪ್ಪ ಮಾತನಾಡಿ, ದೇಶ ರಕ್ಷಣೆಗಾಗಿ ಸೇವೆ ಸಲ್ಲಿಸಿದ ಮಹಾನ್ ಸೇನಾನಿಗಳ ವಿರುದ್ಧ ಕೀಳಾಗಿ ಸಂದೇಶ ಹಾಕಿದ ವ್ಯಕ್ತಿಯನ್ನು ಗಡಿಪಾರು ಮಾಡಬೇಕು. ಈ ಪ್ರಕರಣವನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಬೇಕು. ಇಲ್ಲದಿದ್ದಲ್ಲಿ ಹೋರಾಟ ತೀವ್ರಗೊಳಿಸುವುದಾಗಿ ಎಂದು ಎಚ್ಚರಿಕೆ ನೀಡಿದರು.

ಕೊಡಗು ಜಿಲ್ಲಾ ಬಿಜೆಪಿ ಅಧ್ಯಕ್ಷ ನಾಪಂಡ ರವಿ ಕಾಳಪ್ಪ, ಕೊಡವ ನ್ಯಾಷನಲ್ ಕೌನ್ಸಿಲ್ ಅಧ್ಯಕ್ಷ ನಂದಿನೆರವಂಡ ಯು.ನಾಚಪ್ಪ ಮಾತನಾಡಿದರು. ಪ್ರತಿಭಟನೆಯಲ್ಲಿ ಕರ್ನಾಟಕ ಮಾಜಿ ಸೈನಿಕ ಸಂಘದ ಅಧ್ಯಕ್ಷ ಡಾ.ಶಿವಣ್ಣ, ಕೊಡಗು ಜಿಲ್ಲಾ ಕಾರ್ಯದರ್ಶಿ ಸಿ.ಜಿ.ತಿಮ್ಮಯ್ಯ, ಸಹ ಕಾರ್ಯದರ್ಶಿ ಎಂ.ಕೆ.ನಾಚಪ್ಪ ಸಂಚಾಲಕರಾದ ನಾಟೋಳಂಡ ಸೋಮಯ್ಯ, ಫೀ.ಮಾ.ಕಾರ್ಯಪ್ಪ, ಜ.ತಿಮ್ಮಯ್ಯ ಫೋರಂ ಅಧ್ಯಕ್ಷ ಕರ್ನಲ್ ಕಂಡ್ರತಂಡ ಸುಬ್ಬಯ್ಯ, ಅಖಿಲ ಕೊಡವ ಸಮಾಜದ ಅಧ್ಯಕ್ಷ ಪರದಂಡ ಸುಬ್ರಮಣಿ, ಮಾಳೇಟಿರ ಅಭಿಮನ್ಯು ಕುಮಾರ್, ಬೊಳ್ಳಜಿರ ಅಯ್ಯಪ್ಪ, ರಾಬಿನ್ ದೇವಯ್ಯ, ಪ್ರವೀಣ್ ಸಿದ್ದಾಪುರ, ಸುರೇಶ್ ಮುತ್ತಪ್ಪ, ಸಂಪತ್ ಕುಮಾರ್, ಕುಕ್ಕೇರ ಅಜಿತ್, ತಂಬುಕುತ್ತೀರ ಮಧು, ಕಾಡ್ಯಮಾಡ ಮೋಟಯ್ಯ, ಚೇರಂಬಾಣೆ ಮಾಜಿ ಸೈನಿಕರ ಸಂಘ, ಸುಂಟಿಕೊಪ್ಪದ ಜೈ ಜವಾನ್ ಮಾಜಿ ಸೈನಿಕರ ಟ್ರಸ್ಟ್, ಪೊನ್ನಂಪೇಟೆ, ಕುಶಾಲನಗರ, ಮೂರ್ನಾಡು, ಸೋಮವಾರಪೇಟೆ, ಮಡಿಕೇರಿ, ಕೊಡವ ಸಮಾಜ, ಕೊಡವ ಮಕ್ಕಡ ಕೂಟ, ಹಿಂದು ಹಿತರಕ್ಷಣಾ ಸಮಿತಿ ಸಂಘಟನೆಗಳು ಪಾಲ್ಗೊಂಡಿದ್ದವು.

ಶಾಶ್ವತವಾಗಿ ಅಮಾನತುಗೊಳಿಸಿ

ವೀರ ಸೇನಾನಿಗಳ ಬಗ್ಗೆ ಅವಹೇಳನಕಾರಿ ಸಂದೇಶದ ಮೂಲಕ ತೇಜೋವಧೆ ಮಾಡಲು ಮುಂದಾದ ವಿದ್ಯಾಧರ್‌ನನ್ನು ಮಡಿಕೇರಿ ವಕೀಲರ ಸಂಘ ಶಾಶ್ವತವಾಗಿ ಅಮಾನತುಗೊಳಿಸುವ ನಿರ್ಧಾರ ತಳೆಯಲಿ. ಪೊಲೀಸ್ ಇಲಾಖೆ ಈತನ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕೆಂದು ಕೊಡವ ಸಮಾಜಗಳ ಒಕ್ಕೂಟದ ಅಧ್ಯಕ್ಷ ಕಳ್ಳಿಚಂಡ ವಿಷ್ಣು ಕಾರ್ಯಪ್ಪ ಒತ್ತಾಯಿಸಿದರು.

ಜಿಲ್ಲಾಡಳಿತದಿಂದ ಅಂಬೇಡ್ಕರ್ ಪರಿನಿರ್ವಾಣ ದಿನಾಚರಣೆ



ಮಡಿಕೇರಿ ಗಾಂಧಿ ಭವನದಲ್ಲಿ ನಡೆದ ಡಾ.ಬಿ.ಆರ್.ಅಂಬೇಡ್ಕರ್ ಪರಿನಿರ್ವಾಣ ದಿನಾಚರಣೆಯಲ್ಲಿ ಅಂಬೇಡ್ಕರ್ ಭಾವಚಿತ್ರಕ್ಕೆ ಜಿಪಂ ಸಿಇಓ ಆನಂದ್ ಪ್ರಕಾಶ್ ಮೀನಾ, ಎಎಸ್ಪಿ ಕೆ.ಎಸ್.ಸುಂದರರಾಜ್, ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕ ಶೇಖರ್ ನಮನ ಸಲ್ಲಿಸಿದರು.

ಮಡಿಕೇರಿ, ಡಿ.6–ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ ಹಾಗೂ ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಡಾ.ಬಿ.ಆರ್.ಅಂಬೇಡ್ಕರ್ ಅವರ 68ನೇ ಮಹಾಪರಿನಿರ್ವಾಣ ದಿನವನ್ನು ಶುಕ್ರವಾರ ನಗರದ ಗಾಂಧಿ ಭವನದಲ್ಲಿ ಆಚರಿಸಲಾಯಿತು.

ಜಿಪಂ ಸಿಇಓ ಆನಂದ್ ಪ್ರಕಾಶ್ ಮೀನಾ ಮಾತನಾಡಿ, ಅಂಬೇಡ್ಕರ್ ಉತ್ತಮ ಸಂವಿಧಾನ ರಚಿಸುವ ಮೂಲಕ ರಾಷ್ಟ್ರಕ್ಕೆ ಕೊಡುಗೆ ನೀಡಿದ್ದಾರೆ. ಸಂವಿಧಾನದಲ್ಲಿ ಮೂಲಭೂತ ಹಕ್ಕು ಮತ್ತು ಕರ್ತವ್ಯಗಳನ್ನು ಅಳವಡಿಸುವ ಮೂಲಕ ಪ್ರತಿಯೊಬ್ಬರೂ ಹಕ್ಕುಗಳನ್ನು ಪಡೆಯುವ ಜೊತೆಗೆ ಕರ್ತವ್ಯ ಪಾಲಿಸುವುದು ಅತಿ ಮುಖ್ಯವಾಗಿದೆ ಎಂದರು.

ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕ ಶೇಖರ್ ಮಾತನಾಡಿ, ಅಂಬೇಡ್ಕರ್ ಚಿಂತನೆ, ಬರಹ, ಭಾಷಣಗಳು ರಾಷ್ಟ್ರದ ಅಭಿವೃದ್ಧಿಗೆ ಸಾರ್ವಕಾಲಿಕ ದಾಖಲೆಗಳಾಗಿವೆ. ಅಂಬೇಡ್ಕರ್ ಅವರ ಸಾರ್ಥಕ ಬದುಕಿನ ಬಗ್ಗೆ ಪ್ರತಿಯೊಬ್ಬರೂ ತಿಳಿದುಕೊಳ್ಳುವಂತಾಗಬೇಕು. ಶೋಷಿತ ಸಮುದಾಯಗಳ ಏಳಿಗೆಗೆ ಇಡೀ ಜೀವನವನ್ನೇ ತ್ಯಾಗ ಮಾಡಿದ್ದಾರೆ ಎಂದು ಸ್ಮರಿಸಿದರು.

ಇದೇ ವೇಳೆ ಉಪವಿಭಾಗಾಧಿಕಾರಿ ವಿನಾಯಕ ನರ್ವಾಡೆ, ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ಎಸ್.ಸುಂದರರಾಜ್, ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕ ಶೇಖರ್, ಸಹ ಶಿಕ್ಷಕಿ ರೂಪಾ, ನಗರಸಭೆ ಪೌರಾಯುಕ್ತ ರಮೇಶ, ದಸಂಸ ಜಿಲ್ಲಾ ಸಂಚಾಲಕ ಎಚ್.ಎಲ್.ದಿವಾಕರ, ತಾಲೂಕು ಸಂಚಾಲಕ ದೀಪಕ್ ಪೊನ್ನಪ್ಪ ಡಾ.ಬಿ.ಆರ್.ಅಂಬೇಡ್ಕರ್ ಭಾವಚಿತ್ರಕ್ಕೆ ಪುಷ್ಪಾರ್ಚನೆ ನೆರವೇರಿಸಿದರು. ಪದವಿಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕಿ ಮಂಜುಳಾ, ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ ಪಿ.ಪಿ.ಕವಿತಾ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಕುಮಾರ, ವ್ಯವಸ್ಥಾಪಕಾರ ಕುಸುಮಾ, ಶಿವಶಂಕರ, ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ವ್ಯವಸ್ಥಾಪಕಿ ಮಹದೇವಿ, ವಿವಿಧ ಇಲಾಖೆ ಅಧಿಕಾರಿಗಳು ಹಾಜರಿದ್ದರು.

ಡಿ.9, ರಾಷ್ಟ್ರೀಯ ಜಂತುಹುಳು ನಿವಾರಣಾ ಕಾರ್ಯಕ್ರಮ

ಮಡಿಕೇರಿ, ಡಿ.6– ರಾಷ್ಟ್ರೀಯ ಜಂತುಹುಳು ನಿವಾರಣಾ (ಎನ್‌ಡಿಡಿ) ಹಾಗೂ ಮಾಪ್ ಅಪ್ ದಿನ ಕಾರ್ಯಕ್ರಮ ಹಿನ್ನೆಯಲ್ಲಿ ಡಿ.9ರಂದು ಬೆಳಗ್ಗೆ 10.30ಕ್ಕೆ ನಗರದ ಸಂತ ಜೋಸೆಫರ ವಿದ್ಯಾಸಂಸ್ಥೆಯಲ್ಲಿ ಕಾರ್ಯಕ್ರಮದ ಉದ್ಘಾಟನೆ ನಡೆಯಲಿದೆ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಸತೀಶ್ ಕುಮಾರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೂವರು ಜಿಂಕೆ ಬೇಟೆಗಾರರ ಬಂಧನ



ಸಿದ್ದಾಪುರ: ಜಿಂಕೆ ಬೇಟೆಯಾಡಿ ತಲೆಮರೆಸಿಕೊಂಡಿದ್ದ ಇಬ್ಬರನ್ನು ಹುಣಸೂರು ವನ್ಯಜೀವಿ ವಲಯದ ಅರಣ್ಯಾಧಿಕಾರಿಗಳು ಬಂಧಿಸಿದ್ದಾರೆ.

ಇತ್ತೀಚೆಗೆ ಆನೆಚೌಕೂರು ವನ್ಯಜೀವಿ ವಲಯದ ಚೆನ್ನಂಗಿ ಪಾರದಕಟ್ಟೆ ಹಂದಿಗುಡ್ಡ ಸಂರಕ್ಷಿತ ಅರಣ್ಯದಲ್ಲಿ ಪಿರಿಯಾಪಟ್ಟಣ ತಾಲೂಕಿನ ಕೋಗಿಲವಾಡಿ ಮತ್ತು ಚೌತಿ ಗ್ರಾಮದ ಮೂವರು ಜಿಂಕೆ ಬೇಟೆಯಾಡಿ, ಮಾಂಸ ಮಾರಾಟಕ್ಕೆ ಯತ್ನಿಸಿದ್ದರು.

ಕೋಗಿಲವಾಡಿ ಗ್ರಾಮದ ಮುತ್ತುರಾಜು (27)ನನ್ನು ಬಂಧಿಸಲಾಗಿತ್ತು. ಈ ವೇಳೆ ತಲೆಮರೆಸಿಕೊಂಡಿದ್ದ ಚೌತಿ ಗ್ರಾಮದ ಕಿಟ್ಟಿ ಹಾಗೂ ಕೋಗಿಲವಾಡಿ ಗ್ರಾಮದ ಸತೀಶ್ ಕುಮಾರ್‌ನನ್ನು ಬಂಧಿಸಲಾಗಿದೆ. ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ಉಪವಿಭಾಗದ ಅರಣ್ಯ ಸಂರಕ್ಷಣಾಧಿಕಾರಿ ಎಲ್.ಲಕ್ಷ್ಮಿಕಾಂತ್ ಮಾರ್ಗದರ್ಶನದಲ್ಲಿ ವಲಯ ಅರಣ್ಯಾಧಿಕಾರಿ ಕೆ.ಈ. ಸುಬ್ರಹ್ಮಣ್ಯ, ಉಪ ವಲಯ ಅರಣ್ಯಾಧಿಕಾರಿ ಮಧು ಪ್ರಸಾದ್, ಸಿಬ್ಬಂದಿ ಲಾಲ್ ಮೊಹಮ್ಮದ್, ರವಿ ಲಮಾಣಿ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು.

ಕನ್ನಡ ಸಾಹಿತ್ಯಕ್ಕೆ ಬಹುತ್ವ ಬೆಳೆಸುವ ಶಕ್ತಿ ಇದೆ



ವಿರಾಜಪೇಟೆ ಸರ್ಕಾರಿ ಪ್ರಥಮದರ್ಜೆ ಕಾಲೇಜಿನಲ್ಲಿ ನಡೆದ ಕರುನಾಡ ಸಂಭ್ರಮ–24 ಕಾರ್ಯಕ್ರಮವನ್ನು ನಿವೃತ್ತ ಪ್ರಾಧ್ಯಾಪಕ ಪುತ್ತೂರು ದೇರ್ಲದ ಪ್ರೊ.ನರೇಂದ್ರ ರೈ ಉದ್ಘಾಟಿಸಿದರು.

ವಿರಾಜಪೇಟೆ, ಡಿ.6–ಕನ್ನಡ ಸಾಹಿತ್ಯಕ್ಕೆ ಸಮಾಜದ ಎಲ್ಲಾ ಬಹುತ್ವ ಬೆಳೆಸುವ ಬಹುದೊಡ್ಡ ಶಕ್ತಿ ಇದೆ ಎಂದು ನಿವೃತ್ತ ಪ್ರಾಧ್ಯಾಪಕ ಪುತ್ತೂರು ದೇರ್ಲದ ಪ್ರೊ.ನರೇಂದ್ರ ರೈ ಅಭಿಪ್ರಾಯಪಟ್ಟರು.

ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ನಡೆದ ಕರುನಾಡ ಸಂಭ್ರಮ–24 ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಬಹುಜಾತಿ, ಬಹುಧರ್ಮ, ಬಹುತತ್ವದ ಜನರನ್ನು ಒಗ್ಗೂಡಿಸಲು ಕನ್ನಡ ಭಾಷೆ ಮತ್ತು ಸಾಹಿತ್ಯ ಸಹಕಾರಿಯಾಗಿದೆ. ಪಂಪ, ರನ್ನ, ಬಸವಣ್ಣ, ಶಿಶುನಾಳ ಶರೀಫ್, ಅಲ್ಲಮ, ಅಕ್ಕಮಹಾದೇವಿ, ಕುವೆಂಪು, ಬೇಂದ್ರೆಯವರ ಸಾಹಿತ್ಯವನ್ನು ಓದುವುದರಿಂದ ಆತ್ಮೀಯ ಬಂಧನ ಬೆಳೆಯುತ್ತದೆ ಎಂದರು.

ಜಾಗತೀಕರಣ ಮತ್ತು ಕೊರೊನಾದಿಂದ ಮಕ್ಕಳ ಮನಸ್ಸು ಹಾಳಾಗಿದೆ. ಯಂತ್ರಗಳಂತೆ ಮರಗಟ್ಟಿ ಹೋದಂತಹ ಮನಸ್ಸುಗಳನ್ನು ಮತ್ತೆ ಸೂಕ್ಷ್ಮಗೊಳಿಸುವುದಕ್ಕೆ ಸಂವೇದನಾಶೀಲರನ್ನಾಗಿ ಮಾಡುವುದಕ್ಕೆ ಕನ್ನಡ ಭಾಷೆ ಮತ್ತು ಸಾಹಿತ್ಯ ದಿವ್ಯ ಔಷಧವಾಗಿದೆ. ವಿದ್ಯಾರ್ಥಿಗಳು ಗಳಿಸುವ ಹೆಚ್ಚು ಅಂಕಗಳು ಮನಸ್ಸುಗಳನ್ನು ಜೋಡಿಸುವುದು, ಸಂಬಂಧಗಳನ್ನು ಬೆಸೆಯದಿದ್ದರೆ ಅವುಗಳು ವ್ಯರ್ಥವಾಗುತ್ತದೆ ಎಂದು ತಿಳಿಸಿದರು.

ಕಾಲೇಜು ಅಭಿವೃದ್ಧಿ ಸಮಿತಿ ಉಪಾಧ್ಯಕ್ಷ ರಗ್ಬಿ ಆಟಗಾರ ಮಾದಂಡ ತಿಮ್ಮಯ್ಯ ಮಾತನಾಡಿ, ಜಾಗತೀಕರಣದ ನೆಲೆಯಲ್ಲಿ ವಿಶ್ವದ ಯಾವುದೇ ಮೂಲೆಗಳಿಗೆ ತೆರಳಿದರೂ ಕನ್ನಡ ಮಾತನಾಡುವ, ಕಲಿಸುವ ಹೊಣೆ ನಮ್ಮದಾಗಬೇಕು ಎಂದರು.

ಪ್ರಾಂಶುಪಾಲ ಡಾ.ಕೆ.ಸಿ.ದಯಾನಂದ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಕನ್ನಡ ವಿಭಾಗದ ಮುಖ್ಯಸ್ಥ ಡಾ.ಕೆ.ಬಸವರಾಜು, ಕನ್ನಡ ಸಹಾಯಕ ಪ್ರಾಧ್ಯಾಪಕ ರಘುರಾಜ್, ಉಪನ್ಯಾಸಕ ಡಾ.ಪ್ರಭು, ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ಇದೇ ವೇಳೆ ಕನ್ನಡ ಗೀತೆ ಗಾಯನ ಸ್ಪರ್ಧೆ ಏರ್ಪಡಿಸಲಾಗಿತ್ತು, ವಿದ್ಯಾರ್ಥಿಗಳು ಕನ್ನಡ ಗೀತೆಗಳಿಗೆ ನೃತ್ಯ ಪ್ರದರ್ಶಿಸಿದರು.

ನಗರದಲ್ಲಿ ಅಂಬೇಡ್ಕರ್ ಪರಿನಿರ್ವಾಣ ದಿನಾಚರಣೆ

ಭಾವಚಿತ್ರಕ್ಕೆ ಶಾಸಕ ಸಿ.ಪುಟ್ಟರಂಗಶೆಟ್ಟಿ, ಜಿಲ್ಲಾಧಿಕಾರಿ ಶಿಲ್ಪನಾಗ್ ಪುಷ್ಪಾರ್ಚನೆ



ಚಾಮರಾಜನಗರ ಜೆ.ಎಚ್.ಪಟೇಲ್ ಸಭಾಂಗಣದಲ್ಲಿ ನಡೆದ ಪರಿನಿರ್ವಾಣ ದಿನಾಚರಣೆಯಲ್ಲಿ ಅಂಬೇಡ್ಕರ್ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಲಾಯಿತು.

ಚಾಮರಾಜನಗರ, ಡಿ.6–ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಸಮಾಜ ಕಲ್ಯಾಣ ಇಲಾಖೆ ಹಾಗೂ ನಗರಸಭೆ ಸಹಯೋಗದಲ್ಲಿ ನಗರದಲ್ಲಿ ಶುಕ್ರವಾರ ಬಾಬಾ ಸಾಹೇಬ್ ಡಾ.ಬಿ.ಆರ್. ಅಂಬೇಡ್ಕರ್ ಅವರ 68ನೇ ಪರಿನಿರ್ವಾಣ ದಿನ ಆಚರಿಸಲಾಯಿತು.

ವೇದಿಕೆ ಕಾರ್ಯಕ್ರಮಕ್ಕೂ ಮುನ್ನ ಜಿಲ್ಲಾಡಳಿತ ಭವನ ಆವರಣದಲ್ಲಿರುವ ಅಂಬೇಡ್ಕರ್ ಪ್ರತಿಮೆಗೆ ಶಾಸಕ ಸಿ.ಪುಟ್ಟರಂಗಶೆಟ್ಟಿ, ನಗರಸಭೆ ಅಧ್ಯಕ್ಷ ಎಸ್.ಸುರೇಶ್, ಜಿಲ್ಲಾಧಿಕಾರಿ ಶಿಲ್ಪನಾಗ್, ಇನ್ನಿತರ ಗಣ್ಯರು ಮಾಲಾರ್ಪಣೆ ಮಾಡಿದರು. ಬಳಿಕ ಜೆ.ಹೆಚ್.ಪಟೇಲ್ ಸಭಾಂಗಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಅಂಬೇಡ್ಕರ್ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಲಾಯಿತು.

ಇದೇ ವೇಳೆ ಮಾತನಾಡಿದ ಜಿಲ್ಲಾಧಿಕಾರಿ ಶಿಲ್ಪನಾಗ್, ಎಲ್ಲಾ ಗ್ರಂಥಗಳಿಗಿಂತ ಶ್ರೇಷ್ಠ ಗ್ರಂಥ ಸಂವಿಧಾನವಾಗಿದೆ. ಸಂವಿಧಾನದಡಿ ನಾವೆಲ್ಲರೂ ನೆಮ್ಮದಿಯಿಂದ ಬದುಕುತ್ತಿದ್ದೇವೆ. ಅದಕ್ಕೆ ಕಾರಣ ಕರ್ತರು ಸಾಮಾಜಿಕ ನ್ಯಾಯ ಪರಿಕಲ್ಪನೆಯಡಿ ದೇಶದ ಎಲ್ಲರಿಗೂ ಸಮಾನತೆ ಒದಗಿಸಿದ ಮಹಾನ್ ಮಾನವತಾವಾದಿ ಅಂಬೇಡ್ಕರ್ ಎಂದು ಸ್ಮರಿಸಿದರು.

ಹಲವು ವರ್ಷಗಳ ಕಾಲ ಆಳಿದ ಬ್ರಿಟಿಷರು ದೇಶವನ್ನು ಬಡತನಕ್ಕೆ ನೂಕಿದ್ದರು. ಸ್ವಾತಂತ್ರ್ಯ ನಂತರ ದೇಶದಲ್ಲಿದ್ದ ಬಡತನ, ಅನಕ್ಷರತೆ, ಅಸಮಾನತೆ ಹೋಗಲಾಡಿಸಿ ಪ್ರತಿಯೊಬ್ಬರಿಗೂ ಗೌರವಯುತ ಬದುಕು ಕಟ್ಟಿಕೊಡಲು ಅಂಬೇಡ್ಕರ್ ಸಂವಿಧಾನ ರಚಿಸಿದರು. ಹಲವಾರು ದೇಶಗಳ ಸಂವಿಧಾನ ಅಧ್ಯಯನ ಮಾಡಿದ ಅಂಬೇಡ್ಕರ್ ನಮ್ಮ ದೇಶಕ್ಕೆ ಏನು ಬೇಕು, ಏನು ಬೇಡ ಎಂಬುದನ್ನು ಮನಗಂಡಿದ್ದರು ಎಂದು ತಿಳಿಸಿದರು.

ಸಾಮಾಜಿಕ ನ್ಯಾಯದಡಿ ಪುರುಷ, ಮಹಿಳೆಯರು ಸೇರಿದಂತೆ ಎಲ್ಲಾ ವರ್ಗಗಳಿಗೂ ಸಮಾನತೆ, ಪ್ರತಿಯೊಬ್ಬರಿಗೂ ಮತದಾನದ ಹಕ್ಕನ್ನು ಒದಗಿಸಿದರು. ಇದರಿಂದಾಗಿಯೇ ವಿಶ್ವದಲ್ಲೇ ಅತಿ ದೊಡ್ಡ ಪ್ರಜಾಪ್ರಭುತ್ವ ದೇಶವಾಗಿ ಭಾರತ ಗುರುತಿಸಿಕೊಂಡಿದೆ. ಇದಕ್ಕೆ ನಮ್ಮ ಸಂವಿಧಾನವೇ ಕಾರಣವಾಗಿದೆ ಎಂದರು.

ನಗರದ ಬುದ್ಧ ವಿಹಾರದ ಮಹೇಶ್ ಬುದ್ಧ ವಂದನೆ ಮಾಡಿದರು. ಜಿಪಂ ಮುಖ್ಯ ಕಾರ್ಯನಿರ್ವಾಹಕಾಧಿಕಾರಿ ಮೋನಾ ರೋತ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಬಿ.ಟಿ. ಕವಿತಾ, ಅಪರ ಜಿಲ್ಲಾಧಿಕಾರಿ ಗೀತಾ ಹುಡೇದ, ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕ ಮುನಿರಾಜು, ಪದವಿಪೂರ್ವ ಶಿಕ್ಷಣ ಇಲಾಖೆ ಉಪ ನಿರ್ದೇಶಕ ಮಂಜುನಾಥ ಪ್ರಸನ್ನ, ಜಿಲ್ಲಾ ಮಟ್ಟದ ಅಧಿಕಾರಿಗಳು, ಸಮುದಾಯದ ಮುಖಂಡರು, ವಿವಿಧ ಸಂಘಟನೆಗಳ ಪ್ರತಿನಿಧಿಗಳು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಡಿ.10, ಬೆಳಗಾವಿ ಸುವರ್ಣಸೌಧಕ್ಕೆ ಮುತ್ತಿಗೆ



ಸುದ್ದಿಗೋಷ್ಠಿಯಲ್ಲಿ ಪಂಚಮಸಾಲಿ ಸಮನ್ವಯ ಸಮಿತಿ ಸಂಚಾಲಕ ಅಮ್ಮನಪುರ ಮಲ್ಲೇಶ್ ಮಾತನಾಡಿದರು.

ಚಾಮರಾಜನಗರ: ಗೌಡ ಲಿಂಗಾಯತ, ಪಂಚಮಸಾಲಿ ಲಿಂಗಾಯತರಿಗೆ 2ಎ ಮೀಸಲಾತಿ ಹಾಗೂ ಓಬಿಸಿ ಪಟ್ಟಿಗೆ ಸೇರಿಸಲು ಕೇಂದ್ರಕ್ಕೆ ಶಿಫಾರಸು ಮಾಡಬೇಕು ಎಂದು ಆಗ್ರಹಿಸಿ ಡಿ.10ರಂದು ಬೆಳಗಾವಿಯ ಸುವರ್ಣಸೌಧಕ್ಕೆ ಮುತ್ತಿಗೆ ಹಾಕಲಾಗುವುದು ಎಂದು ಪಂಚಮಸಾಲಿ ಸಮನ್ವಯ ಸಮಿತಿ ಸಂಚಾಲಕ ಅಮ್ಮನಪುರ ಮಲ್ಲೇಶ್ ತಿಳಿಸಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಳೆದ ಮೂರ್‍ನಾಲ್ಕು ವರ್ಷಗಳಿಂದಲೂ 2ಎ ಮೀಸಲಾತಿ, ಓಬಿಸಿ ಪಟ್ಟಿಗಾಗಿ ಹೋರಾಟ ಮಾಡುತ್ತಾ ಬಂದಿದ್ದೇವೆ. ಆದರೂ ಸರ್ಕಾರ ನಿರ್ಲಕ್ಷ್ಯ ವಹಿಸಿವೆ. ಆದ್ದರಿಂದ ಸಾವಿರಕ್ಕೂ ಹೆಚ್ಚು ಟ್ರ್ಯಾಕ್ಟರ್‌ಗಳ ರ್‍ಯಾಲಿ ನಡೆಸಿ, ಸುವರ್ಣಸೌಧಕ್ಕೆ ಮುತ್ತಿಗೆ ಹಾಕಲಾಗುವುದು ಎಂದರು. ಪಂಚಮಸಾಲಿ, ಮಲೆಗೌಡ, ಗೌಡ ಲಿಂಗಾಯತ, ದೀಕ್ಷಾ–ಚತುರ್ಥ ಲಿಂಗಾಯತರ ಮಕ್ಕಳ ಶಿಕ್ಷಣ ಹಾಗೂ ಉದ್ಯೋಗಕ್ಕಾಗಿ ರಾಜ್ಯ ಸರ್ಕಾರ 2ಎ ಮೀಸಲಾತಿ ನೀಡಲೇಬೇಕು. ಲಿಂಗಾಯತ ಉಪ ಪಂಗಡಗಳ ಮೀಸಲಾತಿಗಾಗಿ ಓಬಿಸಿ ಪಟ್ಟಿಗೆ ಸೇರಿಸುವಂತೆ ಕೇಂದ್ರಕ್ಕೆ ರಾಜ್ಯ ಸರ್ಕಾರ ಕೂಡಲೇ ಶಿಫಾರಸು ಮಾಡುವಂತೆ ಮುತ್ತಿಗೆ ಮೂಲಕ ಹಕ್ಕೊತ್ತಾಯ ಮಂಡಿಸಲಾಗುವುದು ಎಂದರು.

ಸುದ್ದಿಗೋಷ್ಠಿಯಲ್ಲಿ ಮುಖಂಡರಾದ ಚೆನ್ನಂಜಪ್ಪ, ಸತೀಶ್, ಮಂಜೇಶ್, ನಟರಾಜು ಇದ್ದರು.

ಆಡಳಿತ ವ್ಯವಸ್ಥೆಗೆ ಹೊಸ ಆಯಾಮ



ಚಾಮರಾಜನಗರ ಜಿಲ್ಲಾ ಕಾಂಗ್ರೆಸ್ ಸಮಿತಿ ಕಚೇರಿಯಲ್ಲಿ ಅಂಬೇಡ್ಕರ್ ಪರಿನಿರ್ವಾಣ ದಿನ ಆಚರಿಸಲಾಯಿತು.

ಚಾಮರಾಜನಗರ, ಡಿ.6–ನಗರದ ಜಿಲ್ಲಾ ಕಾಂಗ್ರೆಸ್ ಸಮಿತಿ ಕಚೇರಿಯಲ್ಲಿ ಅಂಬೇಡ್ಕರ್ ಪರಿನಿರ್ವಾಣ ದಿನ ಆಚರಿಸಲಾಯಿತು.

ಶಾಸಕ ಸಿ.ಪುಟ್ಟರಂಗಶೆಟ್ಟಿ ಮಾತನಾಡಿ, ಅಂಬೇಡ್ಕರ್ ಇಡೀ ಜಗತ್ತು ಮೆಚ್ಚುವ ಸಂವಿಧಾನವನ್ನು ರಚಿಸಿದ್ದಾರೆ. ಈ ಮೂಲಕ ದೇಶದ ಆಡಳಿತ ವ್ಯವಸ್ಥೆಗೆ ಹೊಸ ಆಯಾಮ ತಂದುಕೊಟ್ಟಿದ್ದಾರೆ. ಹೀಗಾಗಿ ನಾವೆಲ್ಲರೂ ಅಂಬೇಡ್ಕರ್ ಅವರನ್ನು ಸದಾ ಸ್ಮರಿಸಬೇಕು ಎಂದರು.

ಕಾಂಗ್ರೆಸ್ ಜಿಲ್ಲಾಧ್ಯಕ್ಷ ಪಿ.ಮರಿಸ್ವಾಮಿ ಮಾತನಾಡಿ, ಅಂಬೇಡ್ಕರ್ ವ್ಯಕ್ತಿ ಅಲ್ಲ ಅವರೊಬ್ಬ ಮಹಾನ್ ಶಕ್ತಿಯಾಗಿದ್ದಾರೆ. ದಲಿತರು, ಮಹಿಳೆಯರು ಹಾಗೂ ಕಾರ್ಮಿಕರ ಪರ ಹೋರಾಟ ನಡೆಸಿದ್ದಾರೆ. ಅಂಬೇಡ್ಕರ್ ವಿಚಾರಧಾರೆ, ಆದರ್ಶಗಳನ್ನು ಪ್ರತಿಯೊಬ್ಬರು ಅಳವಡಿಸಿಕೊಳ್ಳಬೇಕು ಎಂದು ತಿಳಿಸಿದರು.

ಚುಡಾ ಅಧ್ಯಕ್ಷ ಮಹಮದ್ ಅಸ್ಗರ್ ಮುನ್ನಾ, ಜಿಲ್ಲಾ ಕಾಂಗ್ರೆಸ್ ಉಪಾಧ್ಯಕ್ಷ ಬಿ.ಕೆ.ರವಿಕುಮಾರ್, ಪ್ರಧಾನ ಕಾರ್ಯದರ್ಶಿ ಆರ್.ಮಹದೇವ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎ.ಎಸ್.ಗುರುಸ್ವಾಮಿ, ಕೆಪಿಸಿಸಿ ಸದಸ್ಯ ಸೈಯದ್ ರಫಿ, ನಸ್ರುಲ್ ಖಾನ್, ಆಯೂಬ್ ಖಾನ್, ಎಪಿಎಂಸಿ ಅಧ್ಯಕ್ಷ ಸೋಮೇಶ್, ಸದಸ್ಯ ಆಲೂರು ಪ್ರದೀಪ್, ಕರಿನಂಜನಪುರ ಸ್ವಾಮಿ, ಬಸವಣ್ಣ, ಜಿಪಂ ಮಾಜಿ ಸದಸ್ಯ ಸದಾಶಿವಮೂರ್ತಿ, ಕೆರಹಳ್ಳಿ ನವೀನ್, ಕಾವೇರಿ ಶಿವಕುಮಾರ್, ರಮೇಶ್, ರವಿಗೌಡ, ಪ್ರಕಾಶ್, ಕಾಗಲವಾಡಿ ಚಂದ್ರು, ಮರಿಯಾಲದಹುಂಡಿ ಕುಮಾರ್, ಅಪ್ಸರ್ ಅಹಮದ್, ಉಡಿಗಾಲ ಮಹದೇವ್, ಎಂ.ಸಿ.ನಾಗರಾಜು, ಕುಮಾರ್, ರಾಜು, ರವೀಂದ್ರ ಹಾಜರಿದ್ದರು.

ಜ್ಯೋತಿಗೌಡನಪುರದಲ್ಲಿ ಭೀಮಜ್ಯೋತಿ ರ್‍ಯಾಲಿಗೆ ಚಾಲನೆ



ಜ್ಯೋತಿಗೌಡನಪುರದಲ್ಲಿ ಭೀಮಜ್ಯೋತಿ ರ್‍ಯಾಲಿಗೆ ಚಾಲನೆ ನೀಡಲಾಯಿತು.

ಚಾಮರಾಜನಗರ, ಡಿ.6–ಡಾ.ಬಿ.ಆರ್. ಅಂಬೇಡ್ಕರ್ ಪರಿನಿರ್ವಾಣ ದಿನದ ಅಂಗವಾಗಿ ಭಾರತೀಯ ಬೌದ್ಧ ಮಹಾಸಭಾ ಜಿಲ್ಲಾ ಶಾಖೆ ಆಯೋಜಿಸಿರುವ ಭೀಮಜ್ಯೋತಿ ರ್‍ಯಾಲಿಗೆ ಕೊಳ್ಳೇಗಾಲದ ಜೇತವನ ಬೌದ್ಧಭಿಕ್ಕು ಸುಗತಪಾಲ ಚಾಲನೆ ನೀಡಿದರು.

ತಾಲೂಕಿನ ಜ್ಯೋತಿಗೌಡನಪುರದ ಲುಂಬಿನಿ ಬುದ್ಧ ವಿಹಾರದಲ್ಲಿ ಸಾಮೂಹಿಕ ಬುದ್ಧ ವಂದನೆ ಸಲ್ಲಿಸಿ, ಚಾಲನೆಗೊಂಡ ರ್‍ಯಾಲಿ ನಾಗವಳ್ಳಿ, ಚಂದಕವಾಡಿ, ದಡದಹಳ್ಳಿ, ಹೆಬ್ಬಸೂರು, ಸಿದ್ದಯ್ಯನಪುರ, ಕೋಡಿಉಗನೆ, ಮಲ್ಲಯ್ಯನಪುರ, ಯಡಪುರ, ರಾಮಸಮುದ್ರದಲ್ಲಿ ಸಂಚರಿಸಿ, ಜಾಗೃತಿ ಮೂಡಿಸಿ ಸಾರನಾಥ ಬೌದ್ಧ ವಿಹಾರದಲ್ಲಿ ಮುಕ್ತಾಯಗೊಂಡಿತು.

ಭಾರತೀಯ ಬೌದ್ಧ ಮಹಾಸಭಾ ಜಿಲ್ಲಾಧ್ಯಕ್ಷ ಆರ್.ಬಸವರಾಜು ಮಾತನಾಡಿದರು. ಜಿಲ್ಲಾ ಉಪಾಧ್ಯಕ್ಷರಾದ ಮಲ್ಲಿಕ್ ಯಲಕ್ಕೂರು, ಉಮೇಶ್ ಕುದರ್, ನಿವೃತ್ತ ಪ್ರಾಂಶುಪಾಲ ಶಿವಣ್ಣ, ಕಾರ್ಯದರ್ಶಿ ನಂಜುಂಡಯ್ಯ, ಜ್ಯೋತಿಗೌಡನಪುರ ಯಜಮಾನರಾದ ಕೇಶವಮೂರ್ತಿ, ಸಿದ್ದಯ್ಯ ಕೆಂಪ, ಮಾದಯ್ಯ ಕುಟುಂಬದವರು ಹಾಜರಿದ್ದರು.

ಅಂಬೇಡ್ಕರ್ ಮಹಾನ್ ಮಾನವತಾವಾದಿ

ಕೇಂದ್ರ ಪರಿಹಾರ ಸಮಿತಿ ಮಾಜಿ ಅಧ್ಯಕ್ಷ ರಾಮಚಂದ್ರ ಅಭಿಮತ

ಚಾಮರಾಜನಗರ, ಡಿ.6–ಅಂಬೇಡ್ಕರ್ ಮಹಾನ್ ಮಾನವತಾವಾದಿಯಾಗಿದ್ದರು ಎಂದು ಕೇಂದ್ರ ಪರಿಹಾರ ಸಮಿತಿ ಮಾಜಿ ಅಧ್ಯಕ್ಷ ಎಂ.ರಾಮಚಂದ್ರ ಹೇಳಿದರು.

ನಗರದ ಜಿಲ್ಲಾ ಬಿಜೆಪಿ ಕಚೇರಿಯಲ್ಲಿ ನಡೆದ ಅಂಬೇಡ್ಕರ್ ಪರಿನಿರ್ವಾಣ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಅಂಬೇಡ್ಕರ್ ನ್ಯಾಯ ಶಾಸ್ತ್ರ, ಅರ್ಥಶಾಸ್ತ್ರಜ್ಞರಾಗಿ, ಸಮಾಜ ಸುಧಾರಕರಾಗಿ, ಮಹಿಳೆಯರು, ದಲಿತರು, ಅಲ್ಪಸಂಖ್ಯಾತರು ಸೇರಿದಂತೆ ಅಸ್ಪೃಶ್ಯತೆ, ಅಸಮಾನತೆಯ ವಿರುದ್ಧ ದಿಟ್ಟತನದಿಂದ ಹೋರಾಡಿ ಸಮಾಜದ ಕಟ್ಟಕಡೆಯ ವ್ಯಕ್ತಿಗೂ ನ್ಯಾಯ ಸಿಗುವಂತೆ ಮಾಡಿದ ಮಹಾನ್ ಮಾನವತಾವಾದಿ. ಅವರ ಹೋರಾಟದ ಫಲವಾಗಿ ಇಂದು ದೇಶಾದ್ಯಂತ ಕೋಟ್ಯಾಂತರ ಜನ ನೆಮ್ಮದಿಯ ಜೀವನ ನಡೆಸುತ್ತಿದ್ದಾರೆ ಎಂದರು.


ಬಿಜೆಪಿ ಓಬಿಸಿ ಮೋರ್ಚಾ ರಾಷ್ಟ್ರೀಯ ಕಾರ್ಯಕಾರಿಣಿ ಸದಸ್ಯ ನೂರೊಂದು ಶೆಟ್ಟಿ ಮಾತನಾಡಿ, ಸರ್ವರಿಗೂ ಸಮಾನತೆ ಅವಕಾಶವನ್ನು ಸಂವಿಧಾನದಡಿ ನೀಡಿರುವ ಅಂಬೇಡ್ಕರ್ ಅವರ ಆದರ್ಶಗಳನ್ನು ಪ್ರತಿಯೊಬ್ಬರೂ ಅಳವಡಿಸಿಕೊಂಡಿದರೆ ಅವರ ಕನಸಿನ ಭವ್ಯ ಭಾರತ ನಿರ್ಮಾಣ ಮಾಡಲು ಸಾಧ್ಯ ಎಂದರು.

ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮೂಡ್ನಾಕೂಡು ಪ್ರಕಾಶ್ ಮಾತನಾಡಿದರು. ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮಹದೇವಸ್ವಾಮಿ, ಎಸ್‌ಸಿ ಮೋರ್ಚಾ ಜಿಲ್ಲಾಧ್ಯಕ್ಷ ಮೂಡಹಳ್ಳಿ ಮೂರ್ತಿ, ಮಾಂಬಳ್ಳಿ ರಾಮಣ್ಣ, ಟಗರಪುರ ರೇವಣ್ಣ, ನಗರ ಮಂಡಲಾಧ್ಯಕ್ಷ ಪರಶಿವ, ನಲ್ಲೂರು ಪರಮೇಶ್ವರ, ಡ್ರೈವರ್ ಮಹದೇವಯ್ಯ, ವೇಣುಗೋಪಾಲ, ರಾಜಣ್ಣ, ರಾಮಸಮುದ್ರ ಶಿವು, ರಂಗಸ್ವಾಮಿ, ಶ್ರೀನಿವಾಸ, ಮುತ್ತಿಗೆ ಮೂರ್ತಿ ಹಾಜರಿದ್ದರು.



ಜಿಲ್ಲಾ ಬಿಜೆಪಿ ಕಚೇರಿಯಲ್ಲಿ ನಡೆದ ಪರಿನಿರ್ವಾಣ ದಿನಾಚರಣೆಯಲ್ಲಿ ಅಂಬೇಡ್ಕರ್ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಲಾಯಿತು.

ನಂಜುಂಡಪ್ಪ ನಿಧನ



ಚಾಮರಾಜನಗರ, ಡಿ.6– ತಾಲೂಕಿನ ಮರಿಯಾಲ ಗ್ರಾಮದ ನಿವಾಸಿ ನಂಜುಂಡಪ್ಪ(76) ಅನಾರೋಗ್ಯದಿಂದ ಶುಕ್ರವಾರ ಮುಂಜಾನೆ ನಿಧನರಾದರು.

ಮೃತರಿಗೆ ಪತ್ನಿ, ಪುತ್ರ, ಪುತ್ರಿ ಇದ್ದಾರೆ. ಗ್ರಾಮದ ಮೃತರ ಜಮೀನಿನಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಯಿತು.

ಅಪಘಾತದಲ್ಲಿ ಗಾಯಗೊಂಡಿದ್ದ ಗ್ರಾಪಂ ಸದಸ್ಯ ಸಾವು



ಬೇಗೂರು: ಲಾರಿ ಮತ್ತು ಬೈಕ್ ನಡುವೆ ಸಂಭವಿಸಿದ್ದ ಅಪಘಾತದಲ್ಲಿ ತೀವ್ರ ಗಾಯಗೊಂಡಿದ್ದ ಗ್ರಾಪಂ ಸದಸ್ಯ ಚಿಕಿತ್ಸೆ ಫಲಕಾರಿಯಾಗದೆ ಗುರುವಾರ ರಾತ್ರಿ ಮೃತಪಟ್ಟಿದ್ದಾರೆ.

ಗುಂಡ್ಲುಪೇಟೆ ತಾಲೂಕಿನ ಕೊಡಗಾಪುರ ಗ್ರಾಮದ ನಿವಾಸಿ ಹಾಗೂ ಸೋಮಹಳ್ಳಿ ಗ್ರಾಪಂ ಸದಸ್ಯ ಬಸವಣ್ಣಸ್ವಾಮಿ(45) ಮೃತಪಟ್ಟಿದ್ದಾರೆ. ಬೇಗೂರು ಸಮೀಪ ಕಳೆದ ವಾರ ಲಾರಿ ಮತ್ತು ಬೈಕ್ ನಡುವೆ ಅಪಘಾತ ಸಂಭವಿಸಿದ್ದರಿಂದ ಬಸವಣ್ಣಸ್ವಾಮಿ ತೀವ್ರವಾಗಿ ಗಾಯಗೊಂಡಿದ್ದರು. ಚಿಕಿತ್ಸೆ ಫಲಕಾರಿಯಾಗದೆ ಗುರುವಾರ ರಾತ್ರಿ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾರೆ. ಕೊಡಗಾಪುರ ಗ್ರಾಮದಲ್ಲಿ ಶುಕ್ರವಾರ ಅಂತ್ಯಕ್ರಿಯೆ ನೆರವೇರಿತು. ಈ ಸಂಬಂಧ ಬೇಗೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ

ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ತಕ್ಷಣ ಬೇಕಾಗಿದ್ದಾರೆ
ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು ಮಹಿಳೆಯರು ಹುಡುಗಿಯರು ಬೇಕಾಗಿದ್ದಾರೆ. ಸಮಯ: ಬೆಳಿಗ್ಗೆ 9.30 ಯಿಂದ ರಾತ್ರಿ 8.30/9.00 ರವರೆಗೆ, ಸಂಬಳ 9000 ದಿಂದ ಆರಂಭ, ಸ್ಥಳ: ಹೆಬ್ಬಾಳ ಮತ್ತು ಅಗ್ರಹಾರ
9986311444
9986322444

WANTED
Office Sales executive for Housing Loan with knowing Computer Skills
Contact for
9986144999

FOR SALE
1. MUDA APPROVED Sites @ Bogadi, after Trends Apartments (Including Registration 20L)
2. 30x40 Sites @ JnanaBharathi Layout, JP Nagar
3. 30x40 House @ Vijaya Nagar with Rooftop Garden & Water falls
4. 30x40, Sites Near RT Nagar.
5. Apartments For Sale @ Ramakrishna Ngr
PRAKRUTHI PROPERTIES
95386 90359, 90359 90359

ಒಡನಾಡಿ ಸೇವಾ ಸಂಸ್ಥೆ (ರಿ)
#15/2ಬಿ, ಎಸ್.ಆರ್.ಎಸ್.ಕಾಲೋನಿ, ಹೂಟಗಳ್ಳಿ, ಮೈಸೂರು
ಕೆಲಸಕ್ಕೆ ಬೇಕಾಗಿದ್ದಾರೆ
1) ಸಮಾಜಸೇವಾ ಕಾರ್ಯಕರ್ತರು–03 ವಿದ್ಯಾರ್ಹತೆ: ಬಿ.ಎ, ಸಮಾಜಶಾಸ್ತ್ರ/ಮನಃಶಾಸ್ತ್ರ (ಮಹಿಳಾ ಅಭ್ಯರ್ಥಿ) ಸಂದರ್ಶನ ದಿನಾಂಕ: 10–12–2024 ರಂದು ಸಮಯ: ಬೆಳಿಗ್ಗೆ 11 ಗಂಟೆಗೆ
9986363897
0821-2403664

ಸಿಪಾಯಿ ಪ್ರಾಪರ್ಟೀಸ್
1) ಕುಬೇರಾನಂದ ಸಾಗರ ಲೇಔಟ್‌ನಲ್ಲಿ ಈಸ್ಟ್ ಫೇಸ್ 30x40 ಅಳತೆಯ ಸೈಟ್ ಮಾರಾಟಕ್ಕಿದೆ. ಬೆಲೆ 25 ಲಕ್ಷ, ನೆಗೋಷಿಯಬಲ್
2) ಇಲವಾಲ ಬಸ್ ನಿಲ್ದಾಣ ಹಿಂಭಾಗದಲ್ಲಿರುವ ಬಸವಸಾಗರ ಫೇಸ್ 2ನೇ ಹಂತದಲ್ಲಿ 60 ಅಡಿ ರಸ್ತೆಯಲ್ಲಿ 40x60 ಅಳತೆಯ ಸೈಟ್‌ಗಳು ಮಾರಾಟಕ್ಕಿವೆ. ಬೆಲೆ 55 ಲಕ್ಷ ನೆಗೋಷಿಬಲ್
ನಂಜುಂಡಸ್ವಾಮಿ ಹೆಚ್.ಎಸ್. ಮಾಜಿ ಸೈನಿಕರು
9483862050
7829779070

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

2BHK HOUSE FOR RENT
Near Mahalakshmi Sweets Vidyaranyapuram, Mysore (Only For Vegetariun
9880961150
9844059138

SITES FOR SALE
ROPA NAGAR
40X50
GOOD LOCATION NEAR DOUBLE ROAD CLEAR DOCUMENTS
7676830832

28x40 S/W
ಕಾರ್ನರ್ ಸೈಟು ಮಾರಾಟಕ್ಕಿದೆ 15 ಲಕ್ಷಗಳು, 30x46 N/F ಸೈಟು ಮಾರಾಟಕ್ಕಿದೆ. 18 ಲಕ್ಷದ 50 ಸಾವಿರಗಳು GSS ಲೇಔಟ್ ತಳೂರು TVS ಫ್ಯಾಕ್ಟರಿ ಹತ್ತಿರ, ಮೈಸೂರು
9972557534

SITE FOR SALE
20X30, 30X40 (BANK LOAN AVAILABLE) SRIRAMPURA RING ROAD, MYSORE
8050345574

WANTED TAXI DRIVER
(Yellow Board)
FOR A REPUTED TRAVEL AGENCY
Badge is Mandatory with 2 Years Experience
Ph : 97400 02735

BECOME A TEACHER
NURSERY TEACHERS TRAINING
For SSLC PASS, PUC, Degree pass or fail Job soon after training, Come join, pass the exam and earn
JNANA GANGOTHRI CONVENT
Call/WA-
9113980741

ನೇರ II PUC & SSLC
I PUC Fail / 10th Pass ನೇರ II PUC
(PCMB/C,ARTS & Comm)
6,7,8,9 Fail ನೇರ SSLC
Yuva InfoTech
Open Schooling & Correspondence Degree college, Kuvempunagar, Mysore-23
9986492001

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 7996497954

ದಾಖಲಾತಿ ಕಳೆದಿದೆ
ಫಜಲ್ ಇ ಕರೀಮ್ S/o ಇನಾಯತುಲ್ಲಾ ಆದ ನನಗೆ ಸೇರಿದ ಮನೆ ನಂ.1145 ಹೊಸ ನಂ F2/2 ಎಸ್.ಜಿ.ಹೆಚ್.ರಸ್ತೆ, 7ನೇ ಮೇನ್, ವಿದ್ಯಾರಣ್ಯಪುರಂ, ಖಿಲ್ಲೆ ಮೊಹಲ್ಲಾ, ಮೈಸೂರು ಈ ಸ್ವತ್ತಿನ ಮೂಲ ದಾನ ಪತ್ರ ಸಂಖ್ಯೆ MYS1 10449 2012 13 ಸಿಡಿ ನಂ. MYSD198 ಕಳೆದಿದ್ದು, ಸಿಕ್ಕಿದವರು ಸಂಪರ್ಕಿಸಿ
8884519052

SITE FOR SALE
30X40, West face, Tranquil Layout Attached to New RT Nagar
8217042841

SBIT TRAVELS
Group Tours
Vietnam 7 Days
23,28 Jan | 6,12,22 Feb | 1,15,27 Mar 5,14,26,31 Apr | 2,8,10,24 May
Singapore, Malaysia & Thailand 10 Days
17,21,30 Jan | 1,14,28 Feb | 7,14,21 Mar | 3, 10,17 Apr | 7,14,28 May
9343524127
(Saraswathipuram, Mysuru)

House for Rent
1 BHK, ground floor #300/1, D. Subbaiah Road, Next to Sa.Ra. Mahesh house, Mysore.
Mob: 9480169436

SITE FOR SALE
30x40, S/F, Corporation Khatha, Bogadi North (Near Harsha Bar). Price: Rs. 11,000 per sq.ft. (Nego.)
Mob: 7019769205

ಬೇಕಾಗಿದ್ದಾರೆ
5 ವರ್ಷ ಅನುಭವವುಳ್ಳ Security Field Officer ಬೇಕಾಗಿದ್ದಾರೆ. ಹಾಗೂ ಅನುಭವವುಳ್ಳ ಸೆಕ್ಯೂರಿಟಿ ಗಾರ್ಡುಗಳು ಬೇಕಾಗಿದ್ದಾರೆ. ಕೆ.ಆರ್.ಎಸ್. ವರುಣಾ, ಆಲನಹಳ್ಳಿ ಮತ್ತು ಜೆ.ಪಿ.ನಗರ ಮೈಸೂರಿನ ಸುತ್ತಮುತ್ತ ವಿದ್ಯಾರ್ಹತೆ: SSLC PASS or Fail
9538886328

ಪ್ರವಾಸ
ಕಾಶಿ–ರಾಮೇಶ್ವರ–ಕನ್ಯಾಕುಮಾರಿ
ವಿಶಿಷ್ಟ ಪ್ಯಾಕೇಜ್ - 9ದಿನಗಳು
ದಿನಾಂಕ : 29, ಜನವರಿ 2025
DUBAI - 5N/ 6 days
On 8th Feb. 2025
SINGAPORE - 7N/ 8 days MALASIA
On 29th march. 2025
Call - 8660051998

WANTED
Marketing Executive (Male)
Collecting quality Leads with where is activities (fieldwork)
Fix Salary+incentive 15k up to 20k 12th and above
Birla Sun Life (SAP Office)
Saraswatipuram, Mysore
9900844455

ಮನೆ ಮಾರಾಟಕ್ಕಿದೆ
ಷಷ್ಠಿ ರಿಯಾಯಿತಿ 20x30 ಪೂರ್ವ ದಿಕ್ಕು ಎರಡು ಅಂತಸ್ತು ವಿಜಯನಗರ 4ನೇ ಹಂತ, 2ನೇ ಫೇಸ್, ಮರಿಮಲ್ಲಪ್ಪ ಕಾಂಪೌಂಡ್ ಹತ್ತಿರ
8660726140

MUDA APPROVED SITES FOR SALE
30x40
Near Infosys & BEML
88614 40528
97314 00249

ಬೇಕಾಗಿದ್ದಾರೆ
1) ಸಿವಿಲ್ ಇಂಜಿನಿಯರಿಂಗ್, ಡಿಪ್ಲೋಮೋ ಅಥವಾ ಪದವೀಧರರು (1 ಅಥವಾ 2 ವರ್ಷ ಲೇಔಟ್ ಕಾಮಗಾರಿಗಳಲ್ಲಿ ಅನುಭವ).
ಸಂಪರ್ಕಿಸಿ:
Mob: 9449863015

ಬೋಳು ತಲೆಯ ಸಮಸ್ಯೆಯೇ?

ಕಿಮೋತೆರಪಿ ಚಿಕಿತ್ಸೆಗೆ ಒಳಪಡುತ್ತಿರುವ ರೋಗಿಗಳಿಗೆ ಸ್ಥಳಾಂತ್ರಕ ಬೆಲೆಯಲ್ಲಿ ಹೇರ್ ವಿಗ್‌ಗಳು ದೊರೆಯುತ್ತವೆ.
SMART HAIR FIXING
574, 9th Cross, Anikethana Road, kuvempunagar, Mysuru
MYSURU 9611028523 BANGALORE 9343142258

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 8861401315

CHANGE OF NAME
I, Adeeb Ahmed, aged 30 years S/o Alim Ahmed R/o 667, 1st Main. S.S. Nagar, Mysore-570015, Karnataka, India, hereby state that both the said names. i.e., Adeeb Ahmed & Adeeb Ahmed Alim are of one and the same person i.e myself Vide affidavit dated 02.11.2024 sworn before Advocate and Notary Asadulla Khan, Mysore.

HOUSE FOR SALE
40x55 House For Sale
Aishwarya Layout
Behind Christ Public School
35x45 3 Floor House
Bogadi 2nd Stage
9900154322

FOR SALE
20X30 E/F Duplex House for Sale
30x40 E/F Duplex House for Sale
40x60 N/F Site for Sale
Vijayanagar 4th Stage Mysore
8660318495

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 8618373596

BUNGALOW for SALE at NIVEDITANAGAR
4 Bedroom Duplex Bungalow,50x60,MUDA, 12 years Old,East Facing,Max Cheque Payment Prefered
PRICE - 2.98 CR
Behind Bharath Petrol Pump
Contact Owner,Brokers Excuse
8296493739

SITES for SALE
JP Nagar Ring Road
30x40,34Lakhs
Near Gurur Bus Stop, Ramabainagar,Mysore.
(Corporation limits with E Katha)
DTCP approved 1.5 Kms from JP Nagar Ring Road
8660105902

Premium Site for Sale
30x40 S/W Corner
in Lakshmipuram, Vasan Eye Care backside.
8792207164, 9986300002

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 7204494854

ATTENTION MYSOREANS
Seize this exceptional 7500 sqft building on HD Kote Highway Enjoy 1600 Sqft of ground floor space+10 Spacious rooms with att. Bathrooms + 2 Nos. 2BHK House+3500 Sqft Open garden and ample car Parking Ideal for a CL7 Bar & Restaurant / Hospital / Old age home etc.
9148846385

ಬೇಕಾಗಿದ್ದಾರೆ
ಶ್ರೀ ಛಾಯಾದೇವಿ ಅನಾಥಾಶ್ರಮ ಮೈಸೂರು. ಇಲ್ಲಿ ಚಿಕ್ಕ–ಚಿಕ್ಕ ಮಕ್ಕಳನ್ನು ಸಂಸ್ಥೆಯಲ್ಲೇ ಉಳಿದುಕೊಂಡು ನೋಡಿಕೊಳ್ಳುವವರು ಕೆಲಸಕ್ಕೆ ಬೇಕಾಗಿದ್ದಾರೆ. ಉಚಿತ ವಸತಿ ಮತ್ತು ಊಟದ ವ್ಯವಸ್ಥೆ ಇರುತ್ತದೆ.
8431750240
9482163177

SITE FOR SALE
East facing corner site, Jnanbharathi Layout, Near Dadada Halli, No. 349, Highway Road, Behind Airport, Direct Owner, MUDA Khata (e-khata), 8.7 Mtrs x 12 Mtrs (Totally 1124 Sq.ft.) Rs. 3500 per sq.ft. Slightly negotiable.
Mob: 9342123373

ನಿರ್ಮಲ ಸರ್ವೀಸ್
ಸಂಪು ಕ್ಲೀನಿಂಗ್‌ಗಾಗಿ ಸಂಪರ್ಕಿಸಿ:
6364079244

WANTED FOR RENT
2 BHK house / flat nearby K.M. Puram, S. Puram, Kuvempunagar for small family. Brokers excuse.
Mob: 7975764862

SITE FOR SALE
N/E Corner 60x70
Suvarna Nagara, Bogadi Road.
Mob: 8050821108

N.S. Lingaraju
WATER PROOFING WORK
Terrace, Wallcrack, water tank, etc.
Call: 9844609788

ತಕ್ಷಣ ಬೇಕಾಗಿದ್ದಾರೆ
ಹುಣಸೂರಿನ ಕಟ್ಟೆಮಳಲವಾಡಿ ಏರಿಯಾದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡುಗಳು ಬೇಕಾಗಿದ್ದಾರೆ.
ವಿದ್ಯಾರ್ಹತೆ : SSLC
ಸಂಬಳ: 17,000/-
ESI & PF ಸೌಲಭ್ಯವಿರುತ್ತದೆ.
9620667819
9880727819

NEW HOUSE FOR RENT
ಹೊಸ ಮನೆ ಬಾಡಿಗೆಗೆ ಇದೆ
1 BHK, D. subbaya Road
1 ಬಿಹೆಚ್‌ಕೆ ಡಿ.ಸುಬ್ಬಯ್ಯ ರಸ್ತೆ–ಮೈಸೂರು–570024
6362055291
9482072361

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 7975101020

ಬೇಕಾಗಿದ್ದಾರೆ
ಒಂದೂವರೆ ವರ್ಷದ ಮಗುವನ್ನು ನೋಡಿಕೊಳ್ಳಲು ಮಹಿಳಾ ಸಹಾಯಕಿ ಬೇಕಾಗಿದ್ದಾರೆ, ಬೆಳಿಗ್ಗೆ 8 ಗಂಟೆಯಿಂದ ಸಂಜೆ 7 ಗಂಟೆಯವರೆಗೆ. ಕರೆ ಮಾಡಿ
Mob: 9632866616

ಹೊಸ ಮನೆ ಮಾರಾಟಕ್ಕಿದೆ
3BHK 30x40
Built up Area 1500 SF
ಮುಡಾ ಅಪ್ರೂವ್ಡ್
ಸೆಂಟ್ ಜೋಸೆಫ್ ಶಾಲೆಯ ಹತ್ತಿರ ಹುಯಿಲಾಳು, ಮೈಸೂರು
8217851695

ಬೇಕಾಗಿದ್ದಾರೆ
*ಗ್ರಾಫಿಕ್ ಡಿಸೈನರ್, ಸಂಬಳ – (18000-20000)
*ಫ್ಲೆಕ್ಸ್ ಅಂಟಿಸಲು ಹೆಲ್ಪರ್ ಸಂಬಳ –15000
ಯಶಸ್ವಿತಾ ಬಿಗ್ ಪ್ರಿಂಟ್
ಫೋನ್ : 88841 40303

ಬೇಕಾಗಿದ್ದಾರೆ
MARUTHI SUZUKI ARENA AND TATA MOTORS CAR SHOWROOM ಗಳಿಗೆ ಮತ್ತು ಆಫೀಸ್ ಕೆಲಸದ ಉದ್ಯೋಗಗಳಿಗೆ ತಕ್ಷಣ ಯುವಕ ಯುವತಿಯರು ಬೇಕಾಗಿದ್ದಾರೆ ಯಾವುದೇ ಸಂದರ್ಶನ ಇರುವುದಿಲ್ಲ ಪ್ರಸಿದ್ಧ ಕಂಪನಿಗಳಲ್ಲಿ, ಅಕೌಂಟೆಂಟ್, ಡೇಟಾ ಆಪರೇಟರ್, ಟೆಲಿಕಾಲರ್, ಕ್ಯಾಶಿಯರ್, ಆಫೀಸ್ ಬಾಯ್, ಮತ್ತು ಮ್ಯಾನುಫ್ಯಾಕ್ಚರಿಂಗ್ ಕೆಲಸಕ್ಕೆ ಬೇಕಾಗಿದ್ದಾರೆ, ಶಿಕ್ಷಣ 4ನೇ ತರಗತಿ ಇಂದ ಯಾವುದೇ ಪದವೀಧರರು, (*ಸಂಬಳ: 18000 Rs ಇಂದ 30000 Rs + ಇನ್ಸೆಂಟಿವ್*) ಹೆಚ್ಚಿನ ಮಾಹಿತಿಗಾಗಿ ಇಂದೇ ಸಂಪರ್ಕಿಸಿ.
9535849148, 7411273440

ಹೊಸ ಮನೆ ಮಾರಾಟಕ್ಕಿದೆ
20x30 S/E
Ground & First Floor
ವಿನಾಯಕ ಗಾರ್ಡನ್ ಸಿಟಿ Gold Opp. Rajashekar Hospitals Narasipura Road
8867424074

ವಧು–ವರಾನ್ವೇಷಣೆ
ಒಕ್ಕಲಿಗ/ಕುರುಬ/ಲಿಂಗಾಯತ/ನಾಯಕ/SC & ಎಲ್ಲಾ ಜಾತಿಯ ವಧು–ವರರಿಗಾಗಿ ಕೂಡಲೇ ಸಂಪರ್ಕಿಸಿ:
(II Marriage Also)
9343175000

ಉದ್ಯೋಗ ಅವಕಾಶ
ಒಂದ ದಿನವೇ ಕೆಲಸ (ಮಾರ್ಕೆಟಿಂಗ್ ಇಲ್ಲ) ಮೈಸೂರಿನ ಪ್ರತಿಷ್ಠಿತ MNC ಹಾಗೂ IT ಕಂಪನಿಗಳಿಗೆ 4th, SSLC, PUC, ITI, Any Degree ಪಾಸ್ / ಫೇಲ್ ಆದ ಯುವಕ / ಯುವತಿಯರು ಬೇಕಾಗಿದ್ದಾರೆ. ESI / PF ಜೊತೆಗೆ ಊಟ, ವಸತಿಯೊದಗಿಸುತ್ತದೆ ಸಂಬಳ – ರೂ. 15200 – 86,000
7337645977, 7892046990



SUNZONE SOLAR SYSTEM
Vishwamanava Double Road, Kuvempunagar, Mysuru
9845175443

ಕೇರಳ ಕೊಳ್ಳೇಗಾಲದ ಶ್ರೀ ಭದ್ರಕಾಳಿ ಶ್ರೀ ಭಗವತಿ ಜ್ಯೋತಿಷ್ಯರು
ಪಂಡಿತ|| ಕುಮಾರ್ ಗುರುನಂದನ್
9972290933
ಇವರು ಕೇರಳದ ಮಡಯಿಕಾವು ಶ್ರೀರಾಜರಾಜೇಶ್ವರಿ ಭದ್ರಕಾಳಿ ಶ್ರೀ ಭಗವತಿ, ಶಕ್ತಿಯಿಂದ, ಅಕಪೂಜಾ, ಗುರುಸಿ ಕರೀಂಕಳಸ, ತವಪಲಿದೀಪ, ರಕ್ತಪುಷ್ಪಾಂಜಲಿ ಮತ್ತು ಕೊಳ್ಳೇಗಾಲದ ಚೌಡಿ, ಭೂತರಾಯ, ಆಗೋಚರ, ಕಾಟೇರಿ, ಪ್ರಯೋಗದಿಂದ, ಸ್ತ್ರೀ ಪುರುಷ, ಪ್ರೇಮ ದಾಂಪತ್ಯ ಸಮಸ್ಯೆ, ವ್ಯಾಪಾರ, ಸಂತಾನ, ಮದುವೆ, ಸಾಲ ಬಾಧೆ, ಶತ್ರುಸಂಹಾರ, ವಿದೇಶ ಪ್ರಯಾಣ, ರಾಜಕೀಯ, ತನ್ನವರೆ ತನಗೆ ಶತ್ರು, ಪ್ರೇತಬಾಧೆ, ಇನ್ನೂ ಯಾವುದೇ ಗುಪ್ತಗೂಢ, ಸಮಸ್ಯೆಗಳಿಗೆ ಮೇಲಿನ ಪೂಜಾ ಶಕ್ತಿಯಿಂದ 2 ದಿನದಲ್ಲಿ ಪರಿಹಾರ ಶತಸಿದ್ಧ
ವಿಳಾಸ: ನಂ.19, ಶಿವಕಾಂಪ್ಲೆಕ್ಸ್, ಅಂಬಾರಿ ಹೋಟೆಲ್ ಪಕ್ಕ, ದೇವೇಗೌಡ ಸರ್ಕಲ್, ಮೈಸೂರು

ಸೋಲಾರ್ ವಾಟರ್ ಹೀಟರ್
Solar Water Heater

ಸೇಲ್ಸ್, ಸರ್ವೀಸ್ ರಿಪೇರಿ, ಎಕ್ಸ್‌ಚೇಂಜ್ ಹಾಗೂ ಬಿಡಿ ಭಾಗಗಳಿಗಾಗಿ ಸಂಪರ್ಕಿಸಿ
Vinaykrishna
9611648636

PG ಹಾಸ್ಟೆಲ್ ಮಾರಾಟಕ್ಕಿದೆ
ತಿಂಗಳಿಗೆ 36 ಸಾವಿರ ರೂಪಾಯಿ ಬಾಡಿಗೆ ಬರುತ್ತಿರುವ 30x60 ಅಳತೆಯಲ್ಲಿ ನಿರ್ಮಿಸಿರುವ ಮುಂಬರುವ Outer Ring Road ಪಕ್ಕದಲ್ಲಿರುವ PG ಹಾಸ್ಟೆಲ್ ತಕ್ಷಣ ಮಾರಾಟಕ್ಕಿದೆ. ಬ್ಯಾಂಕ್ ಲೋನ್ ಇರುತ್ತದೆ. TVS ಫ್ಯಾಕ್ಟರಿ ಹತ್ತಿರ ಕಡಕೊಳ ಸಂಪರ್ಕಿಸಬೇಕಾದ ನಂಬರ್
9008680972

ಮ್ಯಾಂಗೋ ಟ್ರೀ ಬಡಾವಣೆ
Fully Developed
ಸೈಟ್‌ಗಳೂ ಮಾರಾಟಕ್ಕಿವೆ
30x40 ಅಳತೆ
ಇಲವಾಲ ನಂತರ
8050009696

ಸೆಕ್ಯೂರಿಟಿ ಬೇಕಾಗಿದ್ದಾರೆ
1) ಲೇಡಿ ಹಾಗೂ ಜೆಂಟ್ಸ್ ಸೆಕ್ಯೂರಿಟಿ (ಸಂಬಳ ESI+PF+Week off)
2) ನೈಟ್ ಸೆಕ್ಯೂರಿಟಿ ಗಾರ್ಡ್ (ಸಂಬಳ ESI+PF)
ಸ್ಥಳ: ಲಲಿತಾದ್ರಿಪುರ+ಅಗ್ರಹಾರ
9886219793

ಕೊಳ್ಳೇಗಾಲದ ಜ್ಯೋತಿಷ್ಯರು
ಪಂ. ಎಸ್. ಕುಮಾರಸ್ವಾಮಿ (ಮೋಡಿ ಮಾಂತ್ರಿಕರು)
MOB: 9880583804
ಇವರು ಕೊಳ್ಳೇಗಾಲದ ಚೌಡಿ, ಭೂತರಾಯ ಅಘೋಚರ ಶಕ್ತಿಯಿಂದ ಸ್ತ್ರೀ ಪುರುಷ ಪ್ರೇಮ, ದಾಂಪತ್ಯ ಸಮಸ್ಯೆ, ಶತ್ರು ದೋಷ, ಸಾಲ ಬಾಧೆ, ಯಾವುದೇ ಸಮಸ್ಯೆಗಳಿಗೆ ಮೋಡಿ ಮಾಂತ್ರಿಕ ಶಕ್ತಿಯಿಂದ ಚೌಡಿ ಮತ್ತು ಭೂತರಾಯನ ಪ್ರಯೋಗದಿಂದ ಎರಡೇ ದಿನದಲ್ಲಿ ಪರಿಹಾರ ಮಾಡಿಕೊಡುತ್ತಾರೆ.
ಖಾಯಂ ವಿಳಾಸ: ಎಟಿಎಂ ಪಕ್ಕ, ಟಿಕೆಟ್ ಬುಕ್ಕಿಂಗ್ ಕೌಂಟರ್ ಹತ್ತಿರ (ರಿಲಾಯನ್ಸ್ ಮಾಲ್) (ಕೆ.ಎಸ್.ಆರ್.ಟಿ.ಸಿ) ಸಬರ್ಬ್ ಬಸ್ ಸ್ಟ್ಯಾಂಡ್, ಮೈಸೂರು–1

ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್
ಜರ್ಮನ್ ಟೆಕ್ನಾಲಜಿ ಬಳಸಿ ಸಂಪು, ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್ ಮಾಡಲಾಗುತ್ತದೆ.
Mob: 9008711654

ಸೈಟು ಬೇಕಾಗಿದೆ
ವರುಣ ಬಸವೇಶ್ವರ ಲೇಔಟ್, JSS ಲೇಔಟ್, ನಿರ್ಮಾಣ್ ನಗರ ಹಾಗೂ ಸುತ್ತಮುತ್ತ ಇರುವ ಲೇಔಟ್‌ಗಳಲ್ಲಿ.
Mob: 9844436672

ತಕ್ಷಣ ಬೇಕಾಗಿದ್ದಾರೆ
ಸೆಕ್ಯೂರಿಟಿ ಗಾರ್ಡ್ ಸೆಕ್ಯೂರಿಟಿ ಸೂಪರ್ ವೈಸರ್ ವಯಸ್ಸಿನ ಅಭ್ಯಂತರವಿಲ್ಲಾ ಕೂರ್ಗಳ್ಳಿ ಮತ್ತು ಮೇಟಗಳ್ಳಿ ಇಂಡಸ್ಟ್ರಿಯಲ್ ಏರಿಯಾದಲ್ಲಿ
9035367083
6361548626

MUDA Approved Sites for Sale
Bogadi Road
Suvarna Layout, attached Sanvi Layout (G9 Project)
30x40 & 30x43
Per Sq. Ft. 1900/-
9483862050, 8951144240

ಹೊಸ ಮನೆ ಮಾರಾಟಕ್ಕಿದೆ
20x30 ಮಾತೃಶ್ರೀ ಲೇಔಟ್ ರಿಂಗ್ ರೋಡ್ ಹತ್ತಿರ, ಮಲೆಗಾಲ ಮಾರಮ್ಮನ ದೇವಸ್ಥಾನದ ಹಿಂಭಾಗ, ಡ್ಯೂಪ್ಲೆಕ್ಸ್ East Face ಶ್ರೀರಾಂಪುರ
9066434446
9448050655

ಪ್ರಸಿದ್ಧ ಕೇರಳ ಶ್ರೀ ಭಗವತಿ ಜ್ಯೋತಿಷ್ಯರು
ಪಂ|| ಕುಮಾರ್ ಪ್ರಸಾದ್ ಗುರೂಜಿ
Mob: 9731839596
ಸ್ತ್ರೀ–ಪುರುಷಪ್ರೇಮ, ಸಂತಾನ, ದಾಂಪತ್ಯ, ಸಮಸ್ಯೆ, ನಿಮ್ಮ ಯಾವುದೇ ಗುಪ್ತ, ಸಮಸ್ಯೆಗಳಿಗೆ, ಅಷ್ಟಮಂಗಳ, ಪ್ರಶ್ನೆಯಿಂದ, ನೇರ ಉತ್ತರ ಹಾಗೂ ಶಾಶ್ವತ, ಪರಿಹಾರಕ್ಕಾಗಿ, ಚೋಟನೀಕರ, ಭಗವತಿ ತಾಯಿ, ರಾಜರಾಜೇಶ್ವರಿ, ಕುಟ್ಟಿಚೇತನ್, ಕೇರಳದ, ಮಾಂತ್ರಿಕ ಶಕ್ತಿಯಿಂದ, 2 ದಿನದಲ್ಲಿ ಪರಿಹಾರ ಮಾಡಿಕೊಡುತ್ತಾರೆ.
ಖಾಯಂ ಮನೆ ವಿಳಾಸ: ಲಕ್ಷ್ಮಿ ನಿವಾಸ ನಂ.19/D2, ಬುದ್ಧ ಮಾರ್ಗ, ಹೋಟೆಲ್ ದೋಸೆ ಕಾರ್ನರ್ ಪಕ್ಕ, ಹೊಸ DC ಆಫೀಸ್ ಎದುರು, ಸಿದ್ಧಾರ್ಥ ಲೇಔಟ್, ಮೈಸೂರು

ಕಳೆದಿದೆ
ಬಿ.ಎಂ. ಲಕ್ಷ್ಮಮ್ಮ ನವರ ಹೆಸರಿನಲ್ಲಿರುವ ಮನೆ ನಂ. 1085, 2ನೇ ಹಂತ, ದೇವನೂರು ಈ ಸ್ವತ್ತಿನ ಮಂಜೂರಾತಿ ಪತ್ರವು ಕಳೆದು ಹೋಗಿದ್ದು, ಸಿಕ್ಕವರು ಸಂಪರ್ಕಿಸಿ:
9449841042

ಚಾಲಕರು ಬೇಕಾಗಿದ್ದಾರೆ
ಟಾಟಾ ಏಸ್ ದೊಡ್ಡ ವಾಹನ ಚಾಲಕರು ಬೇಕಾಗಿದ್ದಾರೆ. ಟೈರ್ ಸಾಗಾಣಿಕೆ ಮಾಡಲು ಮೈಸೂರಿನಿಂದ ಕೊಡಗು, ಮಂಡ್ಯ, ಮೈಸೂರು ಸುತ್ತಮುತ್ತಲಿನ ಸ್ಥಳಗಳಿಗೆ. ಸಂಬಳ: 14–15 ಸಾವಿರ ಸಂಪರ್ಕಿಸಿ
9916842472
9535231311

ಮನೆ ಬಾಡಿಗೆಗೆ ಇದೆ
2BHK
ಒಂದನೇ ಮಹಡಿ ನಿವೇದಿತನಗರ ನಿವೇದಿತನಗರ ಪಾರ್ಕ್ ಹತ್ತಿರ
9980985550

WANTED OFFICE AND TEACHING STAFF
* Wanted office and teaching staff for school with any degree *
Candidates with fluency in English communication can apply. Place KR Nagar
8792952652

ಸೈಟು ಮಾರಾಟಕ್ಕಿವೆ
ಕಮರ್ಷಿಯಲ್ ಸೆಮಿಕಮರ್ಷಿಯಲ್ ಟಿ.ನರಸೀಪುರ ರಸ್ತೆ
9686071750

CHANGE OF NAME
I, Shrinidhi Sharma, S/o Harish Babu, residing at # 267, Behind Allama Prabhu Park, Sardar Vallabha Bhai Patel Nagar, Mysuru, Karnataka, 570028, have officially changed my name from Shrinidhi through affidavit No.212/2024, sworn before the Notary Public, Mysuru, on 5th December 2024. I shall henceforth be known as Shrinidhi Sharma for all purposes.
Sd/- Shrinidhi Sharma

CHANGE OF NAME
I, Shreevatsa Sharma, S/o Harish Babu, residing at# 267, Cauvery Enclave Layout, Behind Allama Prabhu Park, Sardar Vallabha Bhai Patel Nagar, Alanahalli, Mysuru, Karnataka, 570028, have officially changed my name from Shreevatsa through affidavit No.211/ 2024, sworn before the Notary Public, Mysuru, on 5th December 2024. I shall henceforth be known as Shreevatsa Sharma for all purposes.
Sd/- Shreevatsa Sharma

ಮನೆ ಬಾಡಿಗೆಗೆ ಇದೆ
30x40 ಹೊಸ ತಾಲ್ಲೂಕು ಕಛೇರಿ ಹಿಂಭಾಗ ಪದವಿ ಪೂರ್ವ ಕಾಲೇಜ್ ಎದುರು ಅಲ್ಲಾ ಮಹಾಪ್ರಭು ಎರಡನೇ ಅಡ್ಡ ರಸ್ತೆ, ಬಿ.ಎಂ.ಲೇಔಟ್ ನಂಜನಗೂಡು, ಮೈಸೂರು ಜಿಲ್ಲೆ
7975023201
9036282654

ಸುವರ್ಣಾವಕಾಶ
ಪ್ರಸಿದ್ಧ ಶೋರೂಮ್ ಮತ್ತು ಕಂಪನಿ & ವರ್ಕ್ ಫ್ರಮ್ ಹೋಂ ಕೆಲಸಕ್ಕೆ, ಯುವಕರು ಮತ್ತು ಯುವತಿಯರು, ತಕ್ಷಣ ಬೇಕಾಗಿದ್ದಾರೆ 100% ಗ್ಯಾರೆಂಟಿ ಕೆಲಸ
7353049700
7795704282

ಮನೆ ಬಾಡಿಗೆಗೆ ಇದೆ
ರಾಜಶೇಖರ ಆಸ್ಪತ್ರೆ ಹಿಂಭಾಗ ಮನೆ ನಂ.172, ರಾಗಿಮಿಲ್ 2ನೇ ಅಡ್ಡ ರಸ್ತೆ, ಮೊದಲನೇ ಮಹಡಿ, 3 ಬೆಡ್ ರೂಂ, ಹಾಲ್, ಅಡುಗೆ ಮನೆ, ಊಟದ ಹಾಲ್, ದೇವರ ಮನೆ, ಸ್ನಾನದ ಮನೆ ಸೋಲಾರ್, ಗೀಸರ್, ನೀರಿನ ಸೌಕರ್ಯ ಉತ್ತರ ಬಾಗಿಲು
7975023201
7815812948

ಮತ್ತಷ್ಟು ವರ್ಗೀಕೃತ ಜಾಹೀರಾತು ಪುಟ 10 ರಲ್ಲಿ

ಬೆಂಗಳೂರಿನ ಗಿರಿನಗರದಲ್ಲಿ ಶ್ರೀಶಿವಕುಮಾರ ಸ್ವಾಮೀಜಿ ಪುತ್ಥಳಿ ವಿರೂಪ ಖಂಡಿಸಿ

ತಿ.ನರಸೀಪುರ, ನಂಜನಗೂಡಲ್ಲಿ ವೀರಶೈವ ಮುಖಂಡರ ಪ್ರತಿಭಟನೆ





ಬೆಂಗಳೂರಿನ ಗಿರಿನಗರದಲ್ಲಿ ಶ್ರೀಶಿವಕುಮಾರಸ್ವಾಮೀಜಿ ಪುತ್ಥಳಿ ವಿರೂಪ ಖಂಡಿಸಿ ತಿ.ನರಸೀಪುರ ಹಾಗೂ ನಂಜನಗೂಡು ತಾಲೂಕಿನ ಹದಿನಾರು ಗ್ರಾಮದಲ್ಲಿ ಶುಕ್ರವಾರ ಪ್ರತಿಭಟನೆ ನಡೆಸಲಾಯಿತು.

ತಿ.ನರಸೀಪುರ/ ನಂಜನಗೂಡು, ಡಿ.6– ಬೆಂಗಳೂರಿನ ಗಿರಿನಗರದಲ್ಲಿ ತುಮಕೂರು ಶ್ರೀಸಿದ್ಧಗಂಗಾ ಮಠದ ಶ್ರೀಶಿವಕುಮಾರಸ್ವಾಮಿಗಳ ಪುತ್ಥಳಿ ವಿರೂಪ ಖಂಡಿಸಿ ತಿ.ನರಸೀಪುರ ಹಾಗೂ ನಂಜನಗೂಡು ತಾಲೂಕಿನ ಹದಿನಾರು ಗ್ರಾಮದಲ್ಲಿ ಶುಕ್ರವಾರ ಪ್ರತಿಭಟನೆ ನಡೆಸಲಾಯಿತು.

ತಿ.ನರಸೀಪುರ: ಪಟ್ಟಣದ ವಿದ್ಯೋದಯ ಕಾಲೇಜು ವೃತ್ತದಲ್ಲಿ ಜಮಾಯಿಸಿದ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಹಾಗೂ ಶಿವಕುಮಾರ ಸ್ವಾಮಿ ಸೇವಾ ಟ್ರಸ್ಟ್ ಸದಸ್ಯರು ಮತ್ತು ವೀರಶೈವ ಮುಖಂಡರು ಡಾ.ಶಿವಕುಮಾರ ಸ್ವಾಮಿಯವರ ಪುತ್ಥಳಿ ಧ್ವಂಸಗೊಳಿಸಿದ ರಾಜು ಎಂಬಾತನ ವಿರುದ್ಧ ಘೋಷಣೆ ಕೂಗಿ ತಾಲೂಕು ಕಚೇರಿವರೆಗೆ ಮೆರವಣಿಗೆಯಲ್ಲಿ ತೆರಳಿ ಆಕ್ರೋಶ ವ್ಯಕ್ತಪಡಿಸಿದರು.

ಇತ್ತೀಚೆಗೆ ಕ್ರೈಸ್ತ ಧರ್ಮಕ್ಕೆ ಮತಾಂತರಗೊಂಡ ರಾಜು ಎಂಬಾತ ಶಿವಕುಮಾರ ಸ್ವಾಮಿಗಳ ಪುತ್ಥಳಿಯನ್ನು ಯೇಸು ಆದೇಶದಂತೆ ಧ್ವಂಸಗೊಳಿಸಿದ್ದಾಗಿ ಹೇಳಿಕೆ ನೀಡಿರುವುದು ಆತನ ಮತಾಂಧತೆ ತೋರಿಸುತ್ತದೆ. ರಾಜ್ಯ ಸರ್ಕಾರ ಕೂಡಲೇ ಆತನನ್ನು ರಾಜ್ಯದಿಂದ ಗಡಿಪಾರು ಮಾಡಿ ಶಿವಕುಮಾರ ಸ್ವಾಮಿಗಳಿಗೆ ಗೌರವ ಸಲ್ಲಿಸಬೇಕೆಂದು ಆಗ್ರಹಿಸಿದರು.

ಮಾಡ್ರಹಳ್ಳಿ ಮಠದ ಶಾಂತ ಮಲ್ಲಿಕಾರ್ಜುನಸ್ವಾಮಿ ಮಾತನಾಡಿ, ಕಾಯಕ ನಿಷ್ಠರು, ಸಮಾಜಕ್ಕಾಗಿ ತಮ್ಮನ್ನು ಅರ್ಪಿಸಿಕೊಂಡ ಶಿವಕುಮಾರಸ್ವಾಮಿಗಳು ಮಹಾತ್ಮರಾಗಿದ್ದು, ಯಾವುದೇ ಧರ್ಮ, ಜಾತಿ, ಭೇದ ಇಲ್ಲದೇ ಎಲ್ಲರನ್ನೂ ಸಮಾನವಾಗಿ ಕಂಡು ವಿದ್ಯೆ, ಬುದ್ಧಿ, ಜ್ಞಾನ ನೀಡಿದ್ದಾರೆ. ಆದರೆ ಅವರ ಪುತ್ಥಳಿ ವಿಕೃತಗೊಳಿಸಿರುವ ನಡೆ ಖಂಡನೀಯ. ಇಂತಹ ದುಷ್ಟರು, ಧರ್ಮ ದ್ರೋಹಿಗಳಿಗೆ ತಕ್ಕ ಶಿಕ್ಷೆ ನೀಡಬೇಕು. ಧರ್ಮ ಉಳಿದರೆ ದೇಶ ಉಳಿಯುತ್ತದೆ. ಆದರೆ ಇಂತಹ ಘಟನೆಗಳಿಂದ ಧರ್ಮ ಅವನತಿಯತ್ತ ಸಾಗುತ್ತಿದೆ ಎಂದು ಆತಂಕ ವ್ಯಕ್ತಪಡಿಸಿದರು.

ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಅಧ್ಯಕ್ಷ ಎಸ್‌ಎಂಆರ್ ಪ್ರಕಾಶ್, ಡಾ.ಶಿವಕುಮಾರಸ್ವಾಮಿ ಸೇವಾ ಟ್ರಸ್ಟ್ ಅಧ್ಯಕ್ಷ ನಿಂಗಪ್ಪ ಮಾತನಾಡಿದರು. ಬಳಿಕ ಶಿರಸ್ತೇದಾರ್ ಮಂಜುಳಾಗೆ ಮನವಿ ಸಲ್ಲಿಸಲಾಯಿತು.

ಪ್ರತಿಭಟನೆಯಲ್ಲಿ ಬಿಜೆಪಿ ಕ್ಷೇತ್ರಾಧ್ಯಕ್ಷ ಸತ್ಯಪ್ಪ, ರಾಜಶೇಖರ ಸ್ವಾಮೀಜಿ, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಉಪಾಧ್ಯಕ್ಷ ಎಸ್.ಕೆ.ಕಿರಣ್, ಪ್ರಧಾನ ಕಾರ್ಯದರ್ಶಿ ಕುರುಬೂರು ಕೆ.ವಿ.ಶಿವಶಂಕರ್, ಕಾರ್ಯದರ್ಶಿಗಳಾದ ಕಾರ್ಮಲ್ಲಪ್ಪ, ಹಲವಾರ ಪರಮೇಶ್ ಪಟೇಲ್, ಕೋಶಾಧ್ಯಕ್ಷ ದೊಡ್ಡನಹುಂಡಿ ಜಿ.ನಂಜುಂಡಸ್ವಾಮಿ, ಕಾರ್ಯಕಾರಿಣಿ ಸದಸ್ಯರಾದ ತೊಂಟೇಶ್, ಎಂ.ಪರಶಿವಮೂರ್ತಿ, ಮೆಡಿಕಲ್ ಕುಮಾರ್, ಎಂ.ಮಹೇಶ್, ಕೆ.ಜಿ.ವೀರಣ್ಣ, ಕೆಬ್ಬೇಹುಂಡಿ ಸೋಮಶೇಖರಪ್ಪ, ಅಶೋಕ್, ಮಲ್ಲಣ್ಣ, ಶೇಖರ್, ಮಹದೇವಪ್ರಸಾದ್, ಮೋಹನ್, ಪುರಸಭಾ ಸದಸ್ಯ ರೂಪಾ ಪರಮೇಶ್, ಮಾಜಿ ಸದಸ್ಯ ಎನ್.ಲೋಕೇಶ್, ನಾಗೇಶ್, ಮಾದಪ್ಪ ರಮೇಶ್, ಕುಮಾರಸ್ವಾಮಿ ಮತ್ತಿತರಿದ್ದರು.

ನಂಜನಗೂಡು: ತಾಲೂಕಿನ ಹದಿನಾರು ಗ್ರಾಮದ ಬಸವೇಶ್ವರ ವೃತ್ತದಲ್ಲಿ ಜಮಾಯಿಸಿದ ವೀರಶೈವ ಮುಖಂಡರು ಮತ್ತು ಗ್ರಾಮಸ್ಥರು ಕಿಡಿಗೇಡಿಗಳನ್ನು ಬಂಧಿಸುವಂತೆ ಘೋಷಣೆ ಕೂಗಿ ಟೈಯರ್‌ಗೆ ಬೆಂಕಿ ಹಚ್ಚಿ ಆಕ್ರೋಶ ವ್ಯಕ್ತಪಡಿಸಿದರು.

ಮುಖಂಡ ಮಲ್ಲಿಕಾರ್ಜುನ ಮಾತನಾಡಿ, ಬೆಂಗಳೂರಿನ ಗಿರಿನಗರದಲ್ಲಿ ತ್ರಿವಿಧ ದಾಸೋಹಿ, ನಡೆದಾಡುವ ದೇವರೆಂದೇ ಖ್ಯಾತಿ ಪಡೆದಿದ್ದ ಶ್ರೀಶಿವಕುಮಾರ ಸ್ವಾಮೀಜಿ ಅವರ ಪುತ್ಥಳಿಗೆ ಕಿಡಿಗೇಡಿಗಳು ಹಾನಿ ಮಾಡಿರುವುದು ಖಂಡನೀಯ. ಜಾತಿ–ಧರ್ಮದ ಭೇದವಿಲ್ಲದೇ ಲಕ್ಷಾಂತರ ಬಡ ಮಕ್ಕಳಿಗೆ ಅನ್ನ–ಅಕ್ಷರ–ಆಶ್ರಯ ನೀಡಿದ ನಡೆದಾಡುವ ದೇವರ ಮೇಲೂ ಮತಾಂಧರ ಕೆಂಗಣ್ಣು ಬಿದ್ದಿರುವುದು ದುರ್ದೈವ ಸಂಗತಿ. ಇಂತಹವರ ಹೆಡೆಮುರಿ ಕಟ್ಟಬೇಕಿದ್ದ ಸರ್ಕಾರವೇ, ಸಾಧು–ಸಂತರ ಮೇಲೆ ಎಫ್‌ಐಆರ್ ದಾಖಲಿಸುವ ಮೂಲಕ ಈ ಭಯೋತ್ಪಾದಕರಿಗೆ ನೈತಿಕ ಬೆಂಬಲ ನೀಡುತ್ತಿದೆ. ಸರ್ಕಾರಗಳ ಓಲೈಕೆ, ತುಷ್ಟೀಕರಣ, ವೋಟ್ ಬ್ಯಾಂಕ್ ರಾಜಕಾರಣವೇ ಇಂತಹ ಘಟನೆಗಳು ರಾಜ್ಯದಲ್ಲಿ ಪದೇ ಪದೇ ಮರುಕಳಿಸುತ್ತಿರುವುದಕ್ಕೆ ನೇರ ಕಾರಣ ಎಂದು ಆರೋಪಿಸಿದರು.

ಪ್ರತಿಭಟನೆಯಲ್ಲಿ ಗ್ರಾಪಂ ಸದಸ್ಯ ರವಿಕುಮಾರ, ಮಾಜಿ ಅಧ್ಯಕ್ಷ ಅಭಿಲಾಶ್, ತಾಪಂ ಮಾಜಿ ಸದಸ್ಯ ರೇವಣ್ಣ, ಮೋಹನ, ನಂಜುಂಡಸ್ವಾಮಿ, ಮಹೇಶ್, ಡಿ.ಕೆ.ಶಿವಕುಮಾರ್, ಗುರುಪ್ರಸಾದ್ ಸೇರಿದಂತೆ ಇತರರಿದ್ದರು.

ಬೀಚನಹಳ್ಳಿ ಗ್ರಾಪಂಗೆ ಬಸವರಾಜ ನಾಯಕ ಉಪಾಧ್ಯಕ್ಷ



ಬೀಚನಹಳ್ಳಿ ಗ್ರಾಪಂ ಉಪಾಧ್ಯಕ್ಷರಾಗಿ ಬಸವರಾಜ ನಾಯಕ ಆಯ್ಕೆಯಾಗಿದ್ದಾರೆ.

ಹೆಚ್.ಡಿ.ಕೋಟೆ, ಡಿ.6– ತಾಲೂಕಿನ ಬೀಚನಹಳ್ಳಿ ಗ್ರಾಪಂ ಉಪಾಧ್ಯಕ್ಷರಾಗಿ ಬಸವರಾಜ ನಾಯಕ (ಬಸು) ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಮೊದಲ ಅವಧಿ ಗ್ರಾಪಂ ಉಪಾಧ್ಯಕ್ಷರಾಗಿದ್ದ ಪ್ರೇಮ್ ಕುಮಾರ್ ಅವರು ತಮ್ಮ 15 ತಿಂಗಳ ಆಡಳಿತಾವಧಿ ಪೂರ್ಣಗೊಳಿಸಿ ತಮ್ಮ ಸ್ಥಾನಕ್ಕೆ ರಾಜೀ ನಾಮೆ ನೀಡಿದ ಹಿನ್ನೆಲೆಯಲ್ಲಿ ಪಂಚಾಯಿತಿ ಆವರಣ ದಲ್ಲಿ ನಡೆದ ಚುನಾವಣೆಯಲ್ಲಿ ಉಪಾಧ್ಯಕ್ಷ ಸ್ಥಾನಕ್ಕೆ ಬಸವರಾಜ ನಾಯಕ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿ ರಾಮೇಗೌಡ ಘೋಷಿಸಿದರು.

ಸದಸ್ಯ ಕಬಿನಿ ಭಾಸ್ಕರ್ ಮಾತನಾಡಿ, ಪಂಚಾಯಿತಿಯ ಎಲ್ಲಾ ಸದಸ್ಯರ ಸಹಕಾರದೊಂದಿಗೆ ಮೊದಲ 15 ತಿಂಗಳ ಅವಧಿಗೆ ಪ್ರೇಮ್ ಕುಮಾರ್ ಉಪಾಧ್ಯಕ್ಷರಾಗಿ ಆಯ್ಕೆಯಾಗಿದ್ದರು. ಇದೀಗ ಬಸವರಾಜ ನಾಯಕ ಅವರು ಉಳಿದ 15 ತಿಂಗಳ ಅವಧಿಗೆ ಆಯ್ಕೆಯಾಗಿದ್ದಾರೆ. ಚುನಾವಣೆಯಲ್ಲಿ ಎಲ್ಲಾ ಸದಸ್ಯರು ಒಮ್ಮತದಿಂದ ಯಾವುದೇ ಗೊಂದಲವಿಲ್ಲದೇ ಉಪಾಧ್ಯಕ್ಷರನ್ನು ಆಯ್ಕೆ ಮಾಡಿದ್ದೇವೆ ಎಂದರು.

ಇದೇ ವೇಳೆ ಅಧ್ಯಕ್ಷ, ಉಪಾಧ್ಯಕ್ಷರು ಹಾಗೂ ಸದಸ್ಯರು ಸಿಹಿ ಹಂಚಿ ಸಂಭ್ರಮಿಸಿದರು. ಅಧ್ಯಕ್ಷೆ ರತ್ನಮ್ಮ, ಸದಸ್ಯರಾದ ಸುಬ್ರಹ್ಮಣ್ಯ, ನಂದಿನಿ, ಪಾಪೇಗೌಡ, ಪ್ರೇಮ್ ಕುಮಾರ್, ಲಕ್ಷ್ಮೀ, ಗೌರಮ್ಮ, ಶಿವಮ್ಮ, ಮಂಜುಳಾ, ಎಂ.ಎಸ್.ರವಿ, ಪಿಡಿಓ ಪ್ರಭಾಕರ, ಮುಖಂಡ ಗೋವಿಂದರಾಜು ಹಾಜರಿದ್ದರು.

ಕೃಷಿ, ಹೈನುಗಾರಿಕೆಯಿಂದ ಆರ್ಥಿಕಾಭಿವೃದ್ಧಿ ಸಾಧ್ಯ

ಶಾಸಕ ಜಿ.ಟಿ.ದೇವೇಗೌಡ



ಡೈರಿ ಮೇಲಂತಸ್ತಿನ ಸಭಾಂಗಣವನ್ನು ಶಾಸಕ ಜಿ.ಟಿ. ದೇವೇಗೌಡರು ಉದ್ಘಾಟಿಸಿದರು.

ಜಯಪುರ, ಡಿ.6– ಕೃಷಿ ಜೊತೆಗೆ ಹೈನುಗಾರಿಕೆಯಲ್ಲಿ ತೊಡಗಿಸಿಕೊಳ್ಳುವುದರಿಂದ ಆರ್ಥಿಕವಾಗಿ ಅಭಿವೃದ್ಧಿ ಹೊಂದಬಹುದು ಎಂದು ಶಾಸಕ ಜಿ.ಟಿ.ದೇವೇಗೌಡ ತಿಳಿಸಿದರು.

ಮೈಸೂರು ತಾಲೂಕು ಜಯಪುರ ಹೋಬಳಿ ಕೆಲ್ಲಹಳ್ಳಿ ಗ್ರಾಮದಲ್ಲಿ ಹಾಲಿನ ಡೈರಿಯ ಮೇಲಂತಸ್ತಿನ ಸಭಾಂಗಣ ಉದ್ಘಾಟಿಸಿ ಮಾತನಾಡಿದ ಅವರು, ಮೈಸೂರು ಸುತ್ತಮುತ್ತ ಭೂಮಿ ಬೆಲೆ ಗಗನಕ್ಕೇರಿದೆ. ಹೀಗಾಗಿ ರೈತರು ತಮ್ಮ ಭೂಮಿಯನ್ನು ಆಡಂಬರದ ಮದುವೆ ಮಾಡಲು ಮಾರಿಕೊಳ್ಳಬಾರದು. ಸರಳ ಮದುವೆ ಮಾಡಿ ಮಕ್ಕಳಿಗೆ ಭೂಮಿ ನೀಡಬೇಕು. ಮಕ್ಕಳಿಗೆ ಒಳ್ಳೆ ವಿದ್ಯಾಭ್ಯಾಸ ಕೊಡಿಸಿ, ಸಮಾಜದಲ್ಲಿ ಅವರನ್ನು ಆದರ್ಶ ವ್ಯಕ್ತಿಯಾಗಿ ರೂಪಿಸಬೇಕು. ಹಾಲು ಉತ್ಪಾದಕರು ಡೇರಿಗೆ ಗುಣಮಟ್ಟದ ಹಾಲು ಪೂರೈಸಬೇಕು. ಸಹಕಾರ ಕ್ಷೇತ್ರ ರೈತರ ಬೆನ್ನೆಲುಬಾಗಿ ಇದೆ. ಸರ್ಕಾರಿ ಸಾಲ ಸೌಲಭ್ಯದ ಸಹಾಯಧನ ಪಡೆದು ಸ್ವಾವಲಂಬಿ ಜೀವನ ನಡೆಸಬೇಕು ಎಂದು ಕರೆ ನೀಡಿದರು.

ಕಾರ್ಯಕ್ರಮದಲ್ಲಿ ಮೈಮುಲ್ ನಿರ್ದೇಶಕರಾದ ಉಮಾಶಂಕರ್, ಲೀಲಾ, ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನಾ ನಿರ್ದೇಶಕ ವಿಜಯ್ ಕುಮಾರ್ ನಾಗನಾಳ, ಎಪಿಎಂಸಿ ಮಾಜಿ ನಿರ್ದೇಶಕ ಮಹದೇವು, ಸಮಾಜ ಸೇವಕ ಎಸ್.ಶ್ರೀಕಾಂತ್, ಜಯಪುರ ಗ್ರಾಪಂ ಅಧ್ಯಕ್ಷ ಮಹದೇವಯ್ಯ, ಸದಸ್ಯರಾದ ಭೈರೇಶ್, ರಾಣಿ, ಮಂಗಳಮ್ಮ, ಎಂ. ನಾಗರಾಜು, ಬಿ.ರೇಣುಕಾ, ಪಿಡಿಓ ಬಸವಣ್ಣ, ಮೈಮುಲ್ ವ್ಯವಸ್ಥಾಪಕ ಆರ್.ಕರಿಬಸವರಾಜು, ಮೈಮುಲ್ ಮೇಲ್ವಿಚಾರಕ ಸಂತೋಷ್ ಕುಮಾರ್, ವಿಸ್ತರಣಾಧಿಕಾರಿ ಪ್ರವೀಣ್, ಆಡಳಿತ ಸಹಾಯಕ ಎಸ್.ಶಂಕರ್, ಕೆಲ್ಲಹಳ್ಳಿ ಡೇರಿ ಅಧ್ಯಕ್ಷ ಕೆಂಪೇಗೌಡ, ಉಪಾಧ್ಯಕ್ಷ ಶಿಳ್ಳೇಗೌಡ, ನಿರ್ದೇಶಕರಾದ ದೇವೇಗೌಡ, ಭೈರಪ್ಪ, ಕೆ.ರಾಮಣ್ಣ, ಸ್ವಾಮಿ, ವೆಂಕಟಕೃಷ್ಣಪ್ಪ, ರಾಮಲಿಂಗೇಗೌಡ, ಚಿಕ್ಕತಾಯಮ್ಮ, ಲೋಕೇಶಮ್ಮ, ಮುಖ್ಯ ಕಾರ್ಯ ನಿರ್ವಾಹಕಿ ಎನ್.ಪಾರ್ವತಿ, ಸುಮಿತ್ರಾ, ಭಾಗ್ಯ, ಜಯಪುರ ಡೇರಿ ಅಧ್ಯಕ್ಷ ಮುಗನಾಯಕ, ಕಾರ್ಯ ನಿರ್ವಾಹಕ ಪಿ.ಬಸವರಾಜು, ಮುಖಂಡರಾದ ಟಿ.ಪಿ.ನಾಗರಾಜು, ಅಬ್ದುಲ್ ಮುತಲೀಫ್, ಶಿವರಾಜು, ಸಣ್ಣಸ್ವಾಮಿ, ವೆಂಕಟೇಶ್ ಇತರರಿದ್ದರು.

ನಂಜನಗೂಡಲ್ಲಿ ಆರ್.ಧ್ರುವನಾರಾಯಣ್ ಮೆಮೋರಿಯಲ್ ಕಪ್

ತಂದೆ ನೆನಪಿಗಾಗಿ ಫುಟ್‌ಬಾಲ್ ಪಂದ್ಯಾವಳಿ



ರಾಜ್ಯ ಮಟ್ಟದ ಫುಟ್‌ಬಾಲ್ ಪಂದ್ಯಾವಳಿಗೆ ಶಾಸಕ ದರ್ಶನ್ ಚಾಲನೆ ನೀಡಿದರು.

ನಂಜನಗೂಡು, ಡಿ.6– ನನ್ನ ತಂದೆ ಆರ್.ಧ್ರುವನಾರಾಯಣ್ ಕ್ರೀಡಾ ಪ್ರೇಮಿಯಾಗಿದ್ದರು. ಅವರ ನೆನಪಿಗಾಗಿ ಫುಟ್‌ಬಾಲ್ ಪಂದ್ಯಾವಳಿ ಆಯೋಜಿಸಲಾಗಿದೆ ಎಂದು ಶಾಸಕ ದರ್ಶನ್ ತಿಳಿಸಿದರು.

ನಗರದ ಜೂನಿಯರ್ ಕಾಲೇಜು ಮೈದಾನದಲ್ಲಿ ಶುಕ್ರವಾರ ಧ್ರುವನಾರಾಯಣ್ ಅಭಿಮಾನಿ ಬಳಗ ಆಯೋಜಿಸಿದ್ದ ಆರ್.ಧ್ರುವನಾರಾಯಣ್ ಮೆಮೋರಿಯಲ್ ಕಪ್ ರಾಜ್ಯಮಟ್ಟದ ಫುಟ್‌ಬಾಲ್ ಪಂದ್ಯಾವಳಿಯನ್ನು ಫುಟ್‌ಬಾಲ್ ಕಿಕ್ ಮಾಡುವ ಮೂಲಕ ಚಾಲನೆ ನೀಡಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನನ್ನ ತಂದೆ ಸವಿನೆನಪಿಗಾಗಿ ಪಂದ್ಯಾವಳಿ ಆಯೋಜಿಸಲಾಗಿದೆ. ನಂಜನಗೂಡು ಸ್ಪೋರ್ಟ್ಸ್ ಯೂನಿಯನ್ ಫುಟ್‌ಬಾಲ್ ಕ್ಲಬ್ ರಾಜ್ಯದಲ್ಲೇ ಉತ್ತಮ ತಂಡವಾಗಿ ಹೆಸರುವಾಸಿಯಾಗಿತ್ತು. ನಂಜನಗೂಡಿನಲ್ಲಿ ಫುಟ್‌ಬಾಲ್ ಕ್ರೀಡೆಯನ್ನು ಪುನರುತ್ಥಾನಗೊಳಿಸುವ ಸಲುವಾಗಿ ಉತ್ತಮ ತಂಡ ರೂಪಿಸಿ, ತಂಡದ ಸಂಪೂರ್ಣ ಪ್ರಯೋಜಕತ್ವ ವಹಿಸಲು ಸಿದ್ಧನಿದ್ದೇನೆ. ತಂಡದ ಆಟಗಾರರಿಗೆ ಸ್ಥಳೀಯ ಕಾರ್ಖಾನೆಗಳಲ್ಲಿ ಉದ್ಯೋಗಾವಕಾಶ ಮಾಡಿಕೊಡುವ ನಿಟ್ಟಿನಲ್ಲಿ ಯೋಚಿಸಲಾಗುತ್ತಿದೆ ಎಂದು ಹೇಳಿದರು.

ಶಾಸಕ ಅನಿಲ್ ಮಾತನಾಡಿ, ನನ್ನ ರಾಜಕೀಯ ಗುರು ಧ್ರುವನಾರಾಯಣ್ ಅವರ ಸವಿನೆನಪಿಗಾಗಿ ರಾಜ್ಯಮಟ್ಟದ ಫುಟ್‌ಬಾಲ್ ಪಂದ್ಯಾವಳಿ ಆಯೋಜಿಸಲಾಗಿದೆ. ಕ್ರೀಡಾಪಟುಗಳಿಗೆ ಸ್ಥಳೀಯ ಕಾರ್ಖಾನೆಗಳಲ್ಲಿ ಉದ್ಯೋಗಾವಕಾಶ ಲಭ್ಯವಾಗಬೇಕು ಎಂದರು.

18 ತಂಡಗಳು ಭಾಗಿ: ಪಂದ್ಯಾವಳಿಯಲ್ಲಿ 18 ತಂಡಗಳು ಪಾಲ್ಗೊಂಡಿದ್ದು, ನಂಜನಗೂಡಿನ ಎಫ್‌ಯುಎಫ್‌ಸಿ–ಹಾಸನ ನಡುವಿನ ಉದ್ಘಾಟನಾ ಪಂದ್ಯದಲ್ಲಿ 3–0 ಗೋಲು ಗಳಿಸುವ ಮೂಲಕ ಹಾಸನ ಜಯಗಳಿಸಿತು. ಶುಂಠಿಕೊಪ್ಪ–ಮೈಸೂರು ನಡುವಿನ ಪಂದ್ಯ ಸಮಬಲದ ಹೋರಾಟದಿಂದ ಯಾವುದೇ ಗೋಲು ದಾಖಲಾಗದೇ ಡ್ರಾ ಗೊಂಡಿತು. ನಂತರ ಸಡನ್ ಡೆತ್ ನಿಯಮ ಅಳವಡಿಸಿದಾಗ ಮೈಸೂರು 1 ಗೋಲು ಅಂತರದಿಂದ ಜಯಗಳಿಸಿತು.

ಪಂದ್ಯಾವಳಿಯಲ್ಲಿ ಸ್ವತಃ ಫುಟ್ಬಾಲ್ ಆಟಗಾರರಾಗಿರುವ ಶಾಸಕ ದರ್ಶನ್ 10 ನಿಮಿಷಗಳ ಕಾಲ ನಂಜನಗೂಡು ತಂಡದ ಮಿಡ್ಲ್ ಫಿಲ್ಡರ್ ಆಗಿ ಆಡಿ ಪ್ರೇಕ್ಷಕರನ್ನು ರಂಜಿಸಿದರು. ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ವಿಧಾನಸಭಾ ಉಸ್ತುವಾರಿ ಸೋಮೇಶ್, ಸಮಾಜ ಸೇವಕ ಯು.ಎನ್.ಪದ್ಮನಾಭರಾವ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಹೇಶ್, ಸಿ.ಎಂ.ಶಂಕರ್, ಜಿಪಂ ಮಾಜಿ ಸದಸ್ಯ ಕೆ.ಮಾರುತಿ, ಕಾಂಗ್ರೆಸ್ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪ್ರದೀಪ್ ಕುಮಾರ್, ವಿಶ್ವಕರ್ಮ ಅಭಿವೃದ್ಧಿ ನಿಗಮ ಮಾಜಿ ಅಧ್ಯಕ್ಷ ನಂದಕುಮಾರ್, ಮುಖಂಡರಾದ ಎನ್.ಟಿ.ಗಿರೀಶ್, ಕುಳ್ಳಯ್ಯ, ರಂಗದಾಸ್, ನಾಗರಾಜಯ್ಯ, ದೊರೆಸ್ವಾಮಿ ನಾಯಕ, ರವಿಪ್ರಕಾಶ್, ಎನ್.ಎಸ್.ಮಾದಪ್ಪ, ಸಿದ್ದಶೆಟ್ಟಿ, ಶ್ರೀನಿವಾಸ ಮೂರ್ತಿ, ವಿಜಯ್ ಕುಮಾರ್, ಮುದ್ದುಮಾದಶೆಟ್ಟಿ, ಮುರುಗೇಶ್, ಹುಚ್ಚಯ್ಯ, ನಗರಸಭಾ ಸದಸ್ಯರಾದ ಎಸ್.ಪಿ.ಮಹೇಶ್, ಗಂಗಾಧರ್, ಗಾಯತ್ರಿ ಸೇರಿದಂತೆ ಇತರರಿದ್ದರು.

ಡಾ. ಅಂಬೇಡ್ಕರ್ ತತ್ವ ಸಿದ್ಧಾಂತ ಅಳವಡಿಸಿಕೊಳ್ಳಿ

ಸರಗೂರು, ಡಿ.6– ಡಾ.ಬಿ.ಆರ್.ಅಂಬೇಡ್ಕರ್ ಅವರ ತತ್ವ ಸಿದ್ಧಾಂತಗಳನ್ನು ಪ್ರತಿಯೊಬ್ಬರೂ ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಆದಿಕರ್ನಾಟಕ ಮಹಾಸಭಾ ತಾಲೂಕು ಅಧ್ಯಕ್ಷ ಶಿವಣ್ಣ ತಿಳಿಸಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ತಾಲೂಕು ಆದಿಕರ್ನಾಟಕ ಮಹಾಸಭಾ ಹಾಗೂ ಅಂಬೇಡ್ಕರ್ ಟ್ರಸ್ಟ್ ಸಹಯೋಗದೊಂದಿಗೆ ನಡೆದ ಅಂಬೇಡ್ಕರ್ ಅವರ 68ನೇ ಪರಿನಿಬ್ಬಾಣ ದಿನಾಚರಣೆಯಲ್ಲಿ ಮಾತನಾಡಿದ ಅವರು, ಭಾರತೀಯ ಸಂವಿಧಾನದ ಪಿತಾಮಹ ಅಂಬೇಡ್ಕರ್ ಅವರು, ಅಸಮಾನತೆ ಮತ್ತು ಜಾತಿ ಪದ್ಧತಿ ಸೇರಿದಂತೆ ಸಾಮಾಜಿಕ ಅನಿಷ್ಟಗಳನ್ನು ಬೇರು ಸಮೇತ ಕಿತ್ತೆಸೆದು ಸಮಾಜವನ್ನು ಪುನರ್ ನಿರ್ಮಾಣ ಮಾಡುವ ಉದ್ದೇಶದಿಂದ ಕಟುವಾಗಿ ಹೋರಾಡಿದರು. ಅವರು ಆದರ್ಶಗಳ ಆಧಾರದ ಮೇಲೆ ಸುಧಾರಿತ ಸಮಾಜ ಬಯಸಿದ್ದರು. ಸಮಾಜವನ್ನು ಜಾತಿ ವ್ಯವಸ್ಥೆ ದುಷ್ಟರಿಂದ ಮುಕ್ತಗೊಳಿಸಲು ಬಯಸಿದ್ದರು ಎಂದರು.

ಡಾ.ಅಂಬೇಡ್ಕರ್ ಟ್ರಸ್ಟ್ ತಾಲೂಕು ಅಧ್ಯಕ್ಷ ನಾಗರಾಜು, ಕಾರ್ಯದರ್ಶಿ ಮಲ್ಲೇಶ್, ಕಸಾಪ ತಾಲೂಕು ಅಧ್ಯಕ್ಷ ಎಂ.ಕೆಂಡಗಣ್ಣಸ್ವಾಮಿ, ಅಕ್ರಮ ಸಕ್ರಮ ಸಮಿತಿ ಸದಸ್ಯ ಶಿವಶಂಕರನ್, ಜಿಪಂ ಮಾಜಿ ಸದಸ್ಯ ಚಿಕ್ಕವೀರನಾಯಕ, ಆರ್ಯ ಈಡಿಗ ಸಮಾಜದ ತಾಲೂಕು ಅಧ್ಯಕ್ಷ ಎಸ್.ಎನ್.ನಾಗರಾಜು, ಜಿ.ಗೋಪಾಲಸ್ವಾಮಿ, ಪಪಂ ಸದಸ್ಯ ಚಲುವಕೃಷ್ಣ, ಮಹೇಶ್, ದೊಡ್ಡಯ್ಯ, ತಿಮ್ಮಯ್ಯ, ಶ್ರೀನಿವಾಸ್, ಬಿಲ್ಲೇಶ್ ಇತರರಿದ್ದರು.

ಹಾಸನದ ಜನಕಲ್ಯಾಣ ಸಮಾವೇಶ ಯಶಸ್ವಿ: ಜನತೆಯ ಪ್ರೀತಿ ವಿಶ್ವಾಸದ ಎದುರು

ಸಿಎಂ ಸಿದ್ದರಾಮಯ್ಯ ವಿರುದ್ಧದ ಹಗರಣಗಳು ಧೂಳೀಪಟ

ಪಿಕಾರ್ಡ್ ಬ್ಯಾಂಕ್ ಮಾಜಿ ಅಧ್ಯಕ್ಷ ಕೆ.ವಜ್ರೇಗೌಡ



ಸುದ್ದಿಗೋಷ್ಠಿಯಲ್ಲಿ ಪಿಕಾರ್ಡ್ ಬ್ಯಾಂಕ್ ಮಾಜಿ ಅಧ್ಯಕ್ಷ ಕೆ.ವಜ್ರೇಗೌಡ ಮಾತನಾಡಿದರು.

ತಿ.ನರಸೀಪುರ, ಡಿ.6– ಹಾಸನದಲ್ಲಿ ನಡೆದ ಜನಕಲ್ಯಾಣ ಸಮಾವೇಶದಲ್ಲಿ ನೆರೆದಿದ್ದ ಜನಸಾಗರದ ಎದುರು ಸಿಎಂ ಸಿದ್ದರಾಮಯ್ಯ ಮೇಲೆ ವಿಪಕ್ಷಗಳು ಹೊರಿಸಿದ್ದ ಆಧಾರ ರಹಿತ ಹಗರಣಗಳು ಕೊಚ್ಚಿಕೊಂಡು ಹೋಗಿವೆ ಎಂದು ಪಿಕಾರ್ಡ್ ಬ್ಯಾಂಕ್ ಮಾಜಿ ಅಧ್ಯಕ್ಷ ಕೆ.ವಜ್ರೇಗೌಡ ತಿಳಿಸಿದರು.

ಪಟ್ಟಣದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜನಶಕ್ತಿ ಎದುರು ಯಾವುದೇ ಕಾನೂನು ಇಲ್ಲ. ಸಮಾವೇಶದಲ್ಲಿ ಸೇರಿದ್ದ ಲಕ್ಷಾಂತರ ಕಾರ್ಯಕರ್ತರು ಸಿದ್ದರಾಮಯ್ಯ ಹಗರಣ ರಹಿತ ರಾಜಕಾರಣಿ ಎಂಬ ಸಂದೇಶ ರವಾನೆ ಮಾಡಿದ್ದಾರೆ. ಹಾಗಾಗಿ ವಿಪಕ್ಷಗಳು ಸಮಾವೇಶಕ್ಕೆ ಸೇರಿದ್ದ ಜನರನ್ನು ನೋಡಿ ದಂಗಾಗಿ ಹೋಗಿದ್ದಾರೆ ಎಂದರು.

ಹಾಸನದ ಐತಿಹಾಸಿಕ ಜನಕಲ್ಯಾಣ ಸಮಾವೇಶದಲ್ಲಿ ಸೇರಿದ್ದ ಜನಸಾಗರ ಗಮನಿದರೆ ಸಿದ್ದರಾಮಯ್ಯ ಮೇಲೆ ಜನತೆಗೆ ಪ್ರೀತಿ ಎಷ್ಟಿದೆ ಎಂಬುದು ತಿಳಿಯುತ್ತದೆ. ಅಲ್ಲದೇ ಮುಂದೆಯೂ ಸಿದ್ದರಾಮಯ್ಯನವರೇ ಮುಖ್ಯಮಂತ್ರಿಯಾಗಿ ಮುಂದುವರೆಯಬೇಕು ಎಂದು ಸ್ಪಷ್ಟವಾಗಿ ಹೇಳಿದಂತಿದೆ. ಹೀಗಾಗಿ ಅವರೇ ಮುಂದಿನ ಅವಧಿಗೂ ರಾಜ್ಯವನ್ನು ಮುನ್ನಡೆಸಲಿದ್ದಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಸಿದ್ದರಾಮಯ್ಯ ಮತ್ತು ಕಾಂಗ್ರೆಸ್ ಪಕ್ಷದ ಮೇಲೆ ಬಂದಿದ್ದ ಮುಡಾ, ವಾಲ್ಮೀಕಿ ಸೇರಿದಂತೆ ಮತ್ತಿತರ ಹಗರಣಗಳು ಜನತೆಯ ಪ್ರೀತಿ ವಿಶ್ವಾಸದ ಎದುರು ಧೂಳೀಪಟವಾಗಿದೆ. ಸಿದ್ದರಾಮಯ್ಯ ಯಾವುದೇ ಹಗರಣದಲ್ಲಿ ಭಾಗಿಯಾಗಿಲ್ಲ. ಒಂದು ವೇಳೆ ಭಾಗಿಯಾಗಿದ್ದರೇ ಸಮಾವೇಶದಲ್ಲಿ ಲಕ್ಷಾಂತರ ಮಂದಿ ಸೇರುತ್ತಿದ್ದರೇ ಎಂಬುದನ್ನು ವಿನಾಕಾರಣ ಅವರ ಮೇಲೆ ಆರೋಪ ಮಾಡುತ್ತಿರುವ ವಿಪಕ್ಷಗಳು ಅರ್ಥ ಮಾಡಿಕೊಳ್ಳಬೇಕಿದೆ ಎಂದರು.

150 ಸ್ಥಾನದಲ್ಲಿ ಕಾಂಗ್ರೆಸ್ ಗೆಲುವು: ಇಂದಿರಾ ಗಾಂಧಿ, ಡಿ.ದೇವರಾಜು ಅರಸು ಆಳ್ವಿಕೆಯಲ್ಲಿ ಕಾಂಗ್ರೆಸ್ ಪಕ್ಷ 150 ಕ್ಷೇತ್ರಗಳಲ್ಲಿ ಗೆಲುವು ಸಾಧಿಸಿತ್ತು. 2028ರಲ್ಲಿ ಮತ್ತೆ ಇತಿಹಾಸ ಮರುಕಳಿಸಲಿದ್ದು ಸಿದ್ದರಾಮಯ್ಯ ನೇತೃತ್ವದಲ್ಲಿ 150ಕ್ಕೂ ಹೆಚ್ಚು ಸ್ಥಾನ ಗೆದ್ದು ಅತಿ ದೊಡ್ಡ ಪಕ್ಷವಾಗಿ ಕಾಂಗ್ರೆಸ್ ಪಕ್ಷ ಹೊರ ಹೊಮ್ಮಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಗುಲಗಂಜಿಯಂತೆ ಪವಿತ್ರ: ವಿರೋಧ ಪಕ್ಷದವರು ಸಿದ್ದರಾಮಯ್ಯ ಮೇಲೆ ವಿನಾಕಾರಣ ಆರೋಪ ಹೊರಿಸಿ ಅವರ ಹೆಸರಿಗೆ ಕಳಂಕ ತರಲು ಹೊರಟಿದ್ದಾರೆ. ಆದರೆ ಸಿದ್ದರಾಮಯ್ಯ ಅವರು ಗುಲಗಂಜಿ ಯಂತೆ ಪರಿಶುದ್ಧರಾಗಿದ್ದಾರೆ. ಗುಲಗಂಜಿಗೆ ಎಷ್ಟೇ ಮಸಿ ಬಳಿದರೂ ಅದು ತನ್ನ ಬಣ್ಣ ಕಳೆದುಕೊಳ್ಳುತ್ತದೆಯೇ ಎಂದು ಬಣ್ಣಿಸಿದರು.

ಗ್ರಾಪಂ ಮಾಜಿ ಅಧ್ಯಕ್ಷ ಎ.ಜೆ.ವೆಂಕಟೇಶ್ ಮಾತನಾಡಿ, ಸಿಎಂ ಸಿದ್ದರಾಮಯ್ಯ ವರುಣ ಕ್ಷೇತ್ರಕ್ಕೆ ನೂರಾರು ಕೋಟಿ ಅನುದಾನ ನೀಡಿ ಕ್ಷೇತ್ರ ಅಭಿವೃದ್ಧಿ ಪಡಿಸಿದ್ದಾರೆ. ಈಗ ಇನ್ನೂ ಹೆಚ್ಚಿನ ಅನುದಾನ ನೀಡಲಿದ್ದು, ಕ್ಷೇತ್ರ ಸಮಗ್ರವಾಗಿ ಅಭಿವೃದ್ಧಿ ಆಗಲಿದೆ. ಕ್ಷೇತ್ರಕ್ಕೆ ಅನುದಾನ ಕೊಡುವಂತೆ ಮುಖ್ಯಮಂತ್ರಿಗಳಿಗೆ ಮನವಿ ಮಾಡಿದ್ದೇವೆ ಎಂದರು.

ಬನ್ನೂರು ಪುರಸಭೆ ಮಾಜಿ ಅಧ್ಯಕ್ಷ ಮುನಾವರ್ ಪಾಷ ಮಾತನಾಡಿ, ಹಾಸನದ ಜನಕಲ್ಯಾಣ ಸಮಾವೇಶ ನಿರೀಕ್ಷೆಗೂ ಮೀರಿ ಯಶಸ್ವಿಯಾಗಿದೆ. 2028ರ ಚುನಾವಣೆಯಲ್ಲಿ ಕಾಂಗ್ರೆಸ್ 150ಕ್ಕೂ ಹೆಚ್ಚು ಸ್ಥಾನ ಗೆಲ್ಲಲಿದೆ. ಪಕ್ಷದಲ್ಲಿ ಯಾವುದೇ ಒಳಜಗಳ ಇಲ್ಲ. ಯಾವುದೇ ಷೇರಿಂಗ್ ಮಾತುಕತೆ ನಡೆದಿಲ್ಲ. ಬಿಜೆಪಿಯವರು ಮಾತ್ರ ಅಧಿಕಾರ ಹಂಚಿಕೆಯಾಗಿದೆ ಎಂದು ಹೇಳಿಕೊಂಡು ಗೊಂದಲ ಸೃಷ್ಟಿಸಲು ಮುಂದಾಗಿದ್ದಾರೆ. ಡಿ.ಕೆ.ಶಿವಕುಮಾರ್ ಅವರೇ ಸಿದ್ದರಾಮಯ್ಯರೊಂದಿಗೆ ಜೀವ ಇರುವವರೆಗೂ ಇರುತ್ತೇನೆ ಎಂದು ಹೇಳುವ ಮೂಲಕ ಷೇರಿಂಗ್ ಕುರಿತ ಸುದ್ದಿಗೆ ಬ್ರೇಕ್ ಹಾಕಿದ್ದಾರೆ ಎಂದರು.

ಎಸ್‌ಸಿ, ಎಸ್‌ಟಿ ಹಿತರಕ್ಷಣಾ ಸಮಿತಿ ಸದಸ್ಯ ಸೋಸಲೆ ಮಹದೇವ ಸ್ವಾಮಿ ಮಾತನಾಡಿದರು. ಎಪಿಎಂಸಿ ಮಾಜಿ ಅಧ್ಯಕ್ಷ ಎಂ.ರಾಜಣ್ಣ ಹಾಜರಿದ್ದರು.

ಮುಖ್ಯಮಂತ್ರಿಗೆ 14 ಸಾವಿರ ನಿವೇಶನ ಕೊಡುವವರಿದ್ದಾರೆ

ಸಿಎಂ ಸಿದ್ದರಾಮಯ್ಯ ಮುಡಾದಲ್ಲಿ 14 ನಿವೇಶನ ನೀಡಿಕೆಯಲ್ಲಿ ಪಾತ್ರ ವಹಿಸಿದ್ದು, ಅವರನ್ನೇ ಆರೋಪಿ ಎಂದು ವಿಪಕ್ಷದವರು ಬಿಂಬಿಸುತ್ತಿದ್ದಾರೆ. ಕೇವಲ 14 ನಿವೇಶನ ಪಡೆಯಲು ಒಬ್ಬ ಮುಖ್ಯಮಂತ್ರಿ ಹಗರಣಕ್ಕೆ ಸಿಲುಕಬೇಕಿಲ್ಲ. ಅವರಿಗೆ ನನ್ನಂತವನೇ 14 ಸೈಟ್ ಕೊಡಲು ಸಿದ್ಧನಿದ್ದೇನೆ. ನನ್ನಂತೆಯೇ 14 ಸಾವಿರ ಸೈಟ್ ಕೊಡಲು ಲಕ್ಷಾಂತರ ಅಭಿಮಾನಿಗಳು ಇದ್ದಾರೆ ಎಂದು ಪಿಕಾರ್ಡ್ ಬ್ಯಾಂಕ್ ಮಾಜಿ ಅಧ್ಯಕ್ಷ ಕೆ.ವಜ್ರೇಗೌಡ ತಿಳಿಸಿದರು.

ಮೈಸೂರು ಮಿತ್ರ

ಮೈಸೂರಲ್ಲಿ ಡಾ. ಅಂಬೇಡ್ಕರ್ 68ನೇ ಮಹಾ ಪರಿನಿರ್ವಾಣ ದಿನ ಆಚರಣೆ

ನಮಗಿನ್ನು ಧಾರ್ಮಿಕ, ಸಾಮಾಜಿಕ ಸ್ವಾತಂತ್ರ್ಯ ಸಿಕ್ಕಿಲ್ಲ: ಕಲ್ಯಾಣ ಶ್ರೀ ಬಂತೇಜಿ ವಿಷಾದ



ಮೈಸೂರಿನ ಪುರಭವನದ ಆವರಣದಲ್ಲಿರುವ ಡಾ. ಅಂಬೇಡ್ಕರ್ ಪ್ರತಿಮೆಗೆ ಪುಷ್ಪಾರ್ಚನೆ ಮಾಡಲಾಯಿತು.

ಮೈಸೂರು, ಡಿ. 6(ಆರ್‌ಕೆ)– ಮೈಸೂರಿನಲ್ಲಿ ಇಂದು ಸಂವಿಧಾನ ಶಿಲ್ಪಿ ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ 68ನೇ ಮಹಾ ಪರಿನಿರ್ವಾಣ ದಿನವನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು.

ಜಿಲ್ಲಾಡಳಿತದ ವತಿಯಿಂದ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಪುರಭವನದ ಆವರಣದಲ್ಲಿರುವ ಡಾ. ಅಂಬೇಡ್ಕರ್ ಪ್ರತಿಮೆಗೆ ಪುಷ್ಪಾರ್ಚನೆ ಮಾಡಲಾಯಿತು. ಜಿಲ್ಲಾಧಿಕಾರಿ ಜಿ. ಲಕ್ಷ್ಮೀಕಾಂತ ರೆಡ್ಡಿ, ಕಲ್ಯಾಣ ಶ್ರೀ ಬಂತೇಜಿ, ಬೋಧಿ ರತ್ನ ಬಂತೇಜಿ, ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್, ಮೈಸೂರು ಮಹಾನಗರ ಪಾಲಿಕೆ ಆಯುಕ್ತ ಅಶಾದ್ ಉರ್ ರೆಹಮಾನ್ ಷರೀಫ್, ಜಿಲ್ಲಾ ಪಂಚಾಯಿತಿ ಸಿಇಓ ಕೆ.ಎಂ. ಗಾಯತ್ರಿ, ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕ ರಂಗೇಗೌಡ ಸೇರಿದಂತೆ ಹಲವರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಈ ವೇಳೆ ಪುರಭವನದ ಆವರಣದಲ್ಲಿ ಆಯೋಜಿಸಿದ್ದ ವೇದಿಕೆ ಕಾರ್ಯಕ್ರಮದಲ್ಲಿ ಮಾತನಾಡಿದ ಕಲ್ಯಾಣ ಶ್ರೀ ಬಂತೇಜಿ ಅವರು, ವಿವಿಧ ಭಾಷೆ, ಜನಾಂಗ ಮತ್ತು ಸಂಸ್ಕೃತಿ ಹೊಂದಿರುವ ನಮ್ಮ ದೇಶದಲ್ಲಿ ಸಮಾನತೆ ಸಾರುವ ಸಂವಿಧಾನ ನೀಡಿದ ಡಾ. ಬಿ.ಆರ್. ಅಂಬೇಡ್ಕರ್ ಅವರ ಆದರ್ಶ ವ್ಯಕ್ತಿತ್ವ ಎಲ್ಲರಿಗೂ ಸ್ಫೂರ್ತಿಯಾಗಿದೆ ಎಂದರು.

68 ನೇ ಪುಣ್ಯಸ್ಮರಣೆಯ ದಿನ ಬಾಬಾ ಸಾಹೇಬರ ಚಿಂತನೆ ಹಾಗೂ ಸಾಮಾಜಿಕ ಮೌಲ್ಯಗಳಿಗೆ ಬೆಲೆ ಕೊಡಬೇಕು. ನಮ್ಮ ದೇಶದಲ್ಲಿ ಇಂದಿಗೂ ಜಾತಿ ವ್ಯವಸ್ಥೆ ಇದ್ದು, ನಗರದ ಜೀವನಕ್ಕೆ ಒಗ್ಗಿಕೊಂಡು ಸಾಮಾಜಿಕ ವ್ಯವಸ್ಥೆ ಸುಧಾರಣೆ ಕಂಡಿದ್ದರೂ ಮಾನಸಿಕ ವ್ಯವಸ್ಥೆ ಸುಧಾರಣೆಗೊಂಡಿಲ್ಲ. ಎಲ್ಲಿಯವರೆಗೂ ಜಾತಿ ಹಾಗೂ ತಾರತಮ್ಯ ಹೋಗುವುದಿಲ್ಲವೋ, ನಮ್ಮಲ್ಲಿ ಮಾನವೀಯ ಗುಣಗಳು ಬರುವುದಿಲ್ಲವೋ ಅಲ್ಲಿಯವರೆಗೂ ನಮಗೆ ನಿಜವಾದ ಸ್ವಾತಂತ್ರ್ಯ ಇರುವುದಿಲ್ಲ. ಎಲ್ಲರೂ ಸಂತೋಷದ ಜೀವನವನ್ನು ಬಯಸುತ್ತೇವೆ. ಆದರೆ ಆ ನಿಟ್ಟಿನಲ್ಲಿ ಯಾವುದೇ ಮಾರ್ಗವನ್ನು ಪಾಲಿಸುವುದಿಲ್ಲ, ಹಾಗಾಗಿಯೇ ಭ್ರಾತೃತ್ವದ ಭಾವನೆಯಿಂದ ಬದುಕಬೇಕಾದಂತಹ ನಮ್ಮ ಸಮಾಜದಲ್ಲಿ ಇಂದು ಜಾತಿ ಕಾರ್ಯಕ್ರಮವು ತಾಂಡವವಾಡಿ ಮೇಲು ಕೀಳೆಂಬ ಭಾವನೆಯನ್ನು ಮೂಡಿಸುತ್ತಿದೆ ಎಂದು ಅವರು ನುಡಿದರು.

ಮನುಷ್ಯರಾದ ನಾವು ಬೇರೆಯವರನ್ನು ನಿಂದಿಸುವ ಬದಲು ನಮ್ಮ ತಪ್ಪುಗಳನ್ನು ನಾವು ತಿದ್ದಿ ನಡೆಯಬೇಕು. ಅದಕ್ಕೆ ಮೊದಲು ಪ್ರಾಧಾನ್ಯತೆ ನೀಡಿದರೆ ಮತ್ತೊಬ್ಬರ ತಪ್ಪನ್ನು ತಿದ್ದಲು ಸಾಧ್ಯ. ಅನ್ಯರನ್ನು ಹಿಂದಿಕ್ಕಲು ನೋಡಬಾರದು ಹಾಗೂ ಮತ್ತೊಬ್ಬರು ಮಾಡುವ ಟೀಕೆಗೆ ಕಿವಿಗೊಡದೆ ತಮ್ಮ ಸಾಧನೆಯ ಕಡೆ ಗಮನ ನೀಡಿ ಯಶಸ್ಸಿನೆಡೆಗೆ ಸಾಗಬೇಕು. ಪ್ರತಿದಿನವೂ ಸಮಾಜವು ಒಂದಲ್ಲ ಒಂದು ರೀತಿಯ ಪಾಠವನ್ನು ಕಲಿಸುತ್ತದೆ. ಅದರಲ್ಲಿ ತಪ್ಪು–ಸರಿಯನ್ನು ಆಯ್ಕೆ ಮಾಡಿ ಯೋಚಿಸಿ ಮುನ್ನಡೆಯಬೇಕು. ಮತ್ತೊಬ್ಬರ ಬಗ್ಗೆ ಕೆಟ್ಟದಾಗಿ ಮಾತನಾಡಿ ಕೆಡುಕು ತರಬಾರದು ಎಂದು ಸಲಹೆ ನೀಡಿದ ಬಂತೇಜಿ ಅವರು, ತೀಕ್ಷ್ಣವಾದ, ಪ್ರಬುದ್ಧವಾದಂತಹ ಮನಸ್ಥಿತಿಯನ್ನು ಹೊಂದಿದ್ದ ಬಾಬಾ ಸಾಹೇಬರು ಪಂಚಶೀಲದ ಪ್ರತಿರೂಪವಾಗಿದ್ದಾರೆ. ಅವರ ಜೀವನದುದ್ದಕ್ಕೂ ಯಾವುದೇ ಒಂದು ಕಪ್ಪು ಕಲೆಯಿಲ್ಲದಂತೆ ಬದುಕಿ, ನಮ್ಮಂತಹ ಅವರ ಮುಂದಿನ ಪೀಳಿಗೆಗಳಿಗೆ ಒಳ್ಳೆಯ ಮಾರ್ಗದರ್ಶಕರಾಗಿದ್ದಾರೆ ಎಂದರು.

ಧಾರ್ಮಿಕ, ಸಾಮಾಜಿಕವಾಗಿ ಸ್ವಾತಂತ್ರ್ಯವನ್ನು ಇನ್ನೂ ನಾವು ಪಡೆದಿಲ್ಲ. ಅದು ಸಿಗಬೇಕೆಂದರೆ ಭಾರತೀಯರೆಲ್ಲರೂ ಸಹೋದರತೆಯಿಂದ ಬದುಕಬೇಕು. ಯಾವುದೇ ವ್ಯಕ್ತಿಯನ್ನು ಜಾತಿ –ಧರ್ಮ ಹಾಗೂ ವರ್ಣದಿಂದ ಅಳೆಯದೆ, ಪ್ರೀತಿಯಿಂದ, ಭ್ರಾತೃತ್ವ ಭಾವನೆಯಿಂದ ಕಾಣಬೇಕೆಂಬುದೇ ಅಂಬೇಡ್ಕರ್ ಅವರ ಆಶಯ. ಇಂದು ಪ್ರಪಂಚದಾದ್ಯಂತ ಸುಭದ್ರವಾಗಿ ನಿಂತಿರುವ ಅವರ ಪರಿಪೂರ್ಣವಾದ ವ್ಯಕ್ತಿತ್ವ ಎಲ್ಲರಿಗೂ ಆದರ್ಶ. ಬುದ್ಧ ಎಂಬ ಸುಜ್ಞಾನ ಸಾಗರಕ್ಕೆ ಮಹಾ ನದಿಯಾಗಿರುವುದು ಬಾಬಾ ಸಾಹೇಬರು ಅವರೊಂದಿಗೆ ನಾವು ಉಪ ನದಿಗಳಾಗಿ ಸೇರಿ, ಪ್ರಬುದ್ಧ ಸಂವಿಧಾನವನ್ನು ಅನುಸರಿಸೋಣ ಎಂದು ಅವರು ತಿಳಿಸಿದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಧೀರ ಭಗತ್‌ರಾಯ್(ಕ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಭೈರತಿ ರಣಗಲ್(ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಪುಷ್ಪಾ–2 (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಭೈರತಿ ರಣಗಲ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಭೈರತಿ ರಣಗಲ್ (ಕ)	4 ಪ್ರದರ್ಶನಗಳು
ರಾಜಕಮಲ್	
ಬಘೀರ (ಕ)	4 ಪ್ರದರ್ಶನಗಳು
ಸಂಗಂ	
ಪುಷ್ಪಾ–2 (ತೆ)	4 ಪ್ರದರ್ಶನಗಳು
ಲಿಡೋ	
ಲಕ್ಕಿ ಭಾಸ್ಕರ್ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಜೀಬ್ರಾ (ಕ)	4 ಪ್ರದರ್ಶನಗಳು
ಪ್ರಭಾ	
ಬಘೀರಾ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಪುಷ್ಪಾ 2 (ಕ): ಬೆ.9.45ಕ್ಕೆ, ಮ.1.45ಕ್ಕೆ, ಪುಷ್ಪಾ 2 (ಹಿಂ): ಸಂ.5.50ಕ್ಕೆ, ಪುಷ್ಪಾ 2 (ತೆ): ರಾ.9.50ಕ್ಕೆ.
ಸ್ಕ್ರೀನ್ 2	ಮೋನಾ 2 (3ಡಿ)(ಇಂ): ಬೆ.11ಕ್ಕೆ, ಮ.3.45ಕ್ಕೆ, ಸಂ.6ಕ್ಕೆ, ಸೋಲೋ ಲೀವಿಂಗ್ ರಿವಾಕ್ (ಜ): ಮ.1.10ಕ್ಕೆ, ಪುಷ್ಪಾ 2 (ತೆ): ರಾ.8.10ಕ್ಕೆ.
ಸ್ಕ್ರೀನ್ 3	ದಿ ಸಬರ್‌ಮತಿ ರಿಪೋರ್ಟ್ (ಹಿಂ): ಬೆ.10.25ಕ್ಕೆ, ಭೈರತಿ ರಣಗಲ್ (ಕ): ಮ.1.05ಕ್ಕೆ, ಹರಿದಾಸರ ದಿನಚರಿ (ಕ): ಸಂ.4ಕ್ಕೆ, ಪುಷ್ಪಾ 2 (ಕ): ಸಂ.6.15ಕ್ಕೆ, ರಾ.10.10ಕ್ಕೆ.
ಸ್ಕ್ರೀನ್ 4	ಪುಷ್ಪಾ 2 (ತೆ): ಬೆ.10.10ಕ್ಕೆ, ಮ.2.10ಕ್ಕೆ, ಸಂ.6.05ಕ್ಕೆ, ರಾ.10ಕ್ಕೆ.

INOX LIVE THE MOVIE — ಐನಾಕ್ಸ್ ಮೂವೀಸ್
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಅಮರನ್ (ಕ): ಬೆ.10.30ಕ್ಕೆ, ರಾ.7.30ಕ್ಕೆ, ಭೈರತಿ ರಣಗಲ್ (ಕ): ಮ.1.45ಕ್ಕೆ, ಧೀರ ಭಗತ್ ರಾಯ್ (ಕ): ಸಂ.4.30ಕ್ಕೆ.
ಸ್ಕ್ರೀನ್ 2	ಭೈರತಿ ರಣಗಲ್ (ಕ): ಬೆ.10.40ಕ್ಕೆ, ಪುಷ್ಪಾ 2 (ಕ): ಮ.1.15ಕ್ಕೆ, ಸಂ.5.15ಕ್ಕೆ, ರಾ.9.15ಕ್ಕೆ.
ಸ್ಕ್ರೀನ್ 3	ಪುಷ್ಪಾ 2 (ಕ): ಬೆ.11.30ಕ್ಕೆ, ರಾ.7.45ಕ್ಕೆ, ಪುಷ್ಪಾ 2 (ತೆ): ಸಂ.4ಕ್ಕೆ.
ಸ್ಕ್ರೀನ್ 4	ಪುಷ್ಪಾ 2 (ತೆ): ಬೆ.10.30ಕ್ಕೆ, ಸಂ.6ಕ್ಕೆ, ರಾ.9.45ಕ್ಕೆ, ಪುಷ್ಪಾ 2 (ಕ): ಮ.2.15ಕ್ಕೆ.

PVR CINEMAS — ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಮೈಮುಲ್‌ಗೆ ಅತ್ಯುತ್ತಮ ಡೇರಿ ಪ್ರಶಸ್ತಿ



ಮುಂಬೈನಲ್ಲಿ ನಡೆದ ಇಂಟರ್ ಡೇರಿ ಅವಾರ್ಡ್ಸ್ ಸ್ಪರ್ಧೆಯಲ್ಲಿ ಪ್ರತಿಷ್ಠಿತ ಮೈಸೂರು ಜಿಲ್ಲಾ ಹಾಲು ಉತ್ಪಾದಕರ ಸಹಕಾರ ಸಂಘಗಳ ಒಕ್ಕೂಟ(ಮೈಮುಲ್)ಕ್ಕೆ ಅತ್ಯುತ್ತಮ ಡೇರಿ ಪ್ರಶಸ್ತಿಯನ್ನು ಮೈಮುಲ್ ಅಧ್ಯಕ್ಷ ಆರ್.ಚೆಲುವರಾಜು ಸ್ವೀಕರಿಸಿದರು.

ಮೈಸೂರು, ಡಿ.6(ಎಂಟಿವೈ)– ಮುಂಬೈನಲ್ಲಿ ನಡೆದ ಇಂಟರ್ ಡೇರಿ ಅವಾರ್ಡ್ಸ್ ಸ್ಪರ್ಧೆಯಲ್ಲಿ ಪ್ರತಿಷ್ಠಿತ ಮೈಸೂರು ಜಿಲ್ಲಾ ಹಾಲು ಉತ್ಪಾದಕರ ಸಹಕಾರ ಸಂಘಗಳ ಒಕ್ಕೂಟ(ಮೈಮುಲ್)ಕ್ಕೆ ಅತ್ಯುತ್ತಮ ಡೇರಿ ಪ್ರಶಸ್ತಿ ಲಭಿಸಿದೆ.

ಇಂಡಿಯನ್ ಡೇರಿ ಅಸೋಸಿಯೇಷನ್ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮೈಮುಲ್ ಹಾಗೂ ನಂದಿನಿ ಉತ್ಪನ್ನಗಳ ಡೇರಿಗೆ ಅತ್ಯುತ್ತಮ ಡೇರಿ ಪ್ರಶಸ್ತಿ ಲಭಿಸಿದೆ. ಇತ್ತೀಚೆಗೆ ನಡೆದ ಕಾರ್ಯಕ್ರಮದಲ್ಲಿ ಮೈಸೂರು ಜಿಲ್ಲಾ ಸಹಕಾರಿ ಹಾಲು ಒಕ್ಕೂಟದ ಅಧ್ಯಕ್ಷ ಆರ್.ಚೆಲುವರಾಜು ಪ್ರಶಸ್ತಿ ಸ್ವೀಕರಿಸಿ ಮಾತನಾಡಿ, ನಂದಿನಿ ಬ್ರಾಂಡ್‌ಗೆ ಪ್ರಶಸ್ತಿ ಸಿಗಲು ನಮ್ಮ ಆಡಳಿತ ಮಂಡಳಿ ನಿರ್ದೇಶಕರು, ಅಧಿಕಾರಿಗಳು, ಸಿಬ್ಬಂದಿ ವರ್ಗದವರು, ಉತ್ಪಾದಕರು ಮತ್ತು ಗ್ರಾಹಕರ ಸಹಕಾರವೇ ಕಾರಣ ಎಂದರು.

ಈ ಸಂದರ್ಭದಲ್ಲಿ ಮೈಮುಲ್ ವ್ಯವಸ್ಥಾಪಕ ನಿರ್ದೇಶಕ ಕೆ. ಎನ್.ಸುರೇಶ್ ನಾಯ್ಕ್, ಡೈರಿ ವ್ಯವಸ್ಥಾಪಕರಾದ ಬಿ.ಎಲ್. ಶ್ವೇತ, ಎಸ್. ಗಿರಿಜಾ, ಎಲ್.ಆರ್.ಕರಿಬಸವ ರಾಜು, ಉಪ ವ್ಯವಸ್ಥಾಪಕರಾದ ಎಸ್. ಲಾವಣ್ಯವತಿ, ಪಿ.ಶ್ರುತಿ ಮತ್ತು ಸಿ.ಬಬಿತಾ, ಸಹಾಯಕ ವ್ಯವಸ್ಥಾಪಕ ಶ್ರೀನಿವಾಸ್ ಪ್ರಸಾದ್, ಜಮುನಾ ಹಾಗೂ ತಾಂತ್ರಿಕ ಅಧಿಕಾರಿ ಸಂಜಯ್ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಅಭಿವೃದ್ಧಿ ಕಾಮಗಾರಿಗಳಿಗೆ ಗುದ್ದಲಿ ಪೂಜೆ



ಮೈಸೂರು ಮಹಾನಗರ ಪಾಲಿಕೆಯ ವಾರ್ಡ್ ನಂ. 22 ಪಡುವಾರಹಳ್ಳಿ (ವಿನಾಯಕನಗರ) ವ್ಯಾಪ್ತಿಯಲ್ಲಿ ಮಹಾರಾಣಿ ಮಹಿಳಾ ವಾಣಿಜ್ಯ ಕಾಲೇಜು ಪಕ್ಕದ ರಸ್ತೆಯ ಅಭಿವೃದ್ಧಿ ಕಾಮಗಾರಿ ಹಾಗೂ ಒಳಚರಂಡಿ ಅಭಿವೃದ್ಧಿ ಸೇರಿದಂತೆ ಒಟ್ಟು ಅಂದಾಜು 2 ರೂ ವೆಚ್ಚದ 4 ಕಾಮಗಾರಿಗಳಿಗೆ ಚಾಮರಾಜ ವಿಧಾನಸಭಾ ಕ್ಷೇತ್ರದ ಶಾಸಕ ಕೆ. ಹರೀಶ್ ಗೌಡ ಗುದ್ದಲಿ ಪೂಜೆ ನೆರವೇರಿಸಿದರು. ವಾರ್ಡ್ ಅಧ್ಯಕ್ಷ ಬಿ.ಕುಮಾರ್, ಮುಖಂಡರಾದ ಭೈರಪ್ಪ ಎಂ, ಸೋಮಣ್ಣ, ರುಚಿ ಸುರೇಶ್, ರಾಮಸ್ವಾಮಿ, ಸಿದ್ದಪ್ಪ, ತಿಮ್ಮಯ್ಯ ಬಸವರಾಜು, ಸ್ವಾಮಿ, ಮಾಹದೇಶ್, ಎಂ.ಜೆ. ಯೋಗೀಶ್, ಸಿ. ಮರಿಸ್ವಾಮಿ ಹಾಗೂ ಇತರರು ಹಾಜರಿದ್ದರು.

ನಕಲಿ ದಾಖಲೆ ಸೃಷ್ಟಿಸಿ ಕೆರೆ ಜಾಗ ಕಬಳಿಕೆ ಆರೋಪ

ಮೈಸೂರು,ಡಿ.6(ಎಂಟಿವೈ)– ಮೈಸೂರು ತಾಲೂಕಿನ ನಾಚನಹಳ್ಳಿ ಪಾಳ್ಯದ ಕಸಬಾ ಹೋಬಳಿಯ ವಿವಿಧ ಸರ್ವೆ ನಂಬರ್‌ಗೆ ಸೇರಿದ ಕೆರೆ ಜಾಗವನ್ನು ನಕಲಿ ದಾಖಲೆ ಸೃಷ್ಟಿಸಿ ಮಾರಾಟ ಮಾಡಲಾಗುತ್ತಿದ್ದು, ಕೆರೆ ಜಾಗ ಸಂರಕ್ಷಿಸಿ, ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವಂತೆ ನಾಚನಹಳ್ಳಿ ಪಾಳ್ಯದ ನಿವಾಸಿ ಎಸ್.ಮಂಜುನಾಥ್ (ಮಹೇಶ್) ಆಗ್ರಹಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಾಚನಹಳ್ಳಿ ಪಾಳ್ಯದ ಕಸಬಾ ಹೋಬಳಿ ಸರ್ವೆ ನಂ.38, ಸರ್ವೆ ನಂ.93 ಹಾಗೂ ದಟ್ಟಗಳ್ಳಿ ಗ್ರಾಮದ ಸರ್ವೆ ನಂ.82, 52, ಹಾಗೂ 61ಕ್ಕೆ ಸೇರಿದ ಜಮೀನುಗಳು ಮೂಲತಃ ಕೆರೆಗೆ ಸೇರಿದ ಜಮೀನಾಗಿವೆ. ಆದರೆ ಕೆರೆ ಜಮೀನಿಗೆ ಸುಳ್ಳು ದಾಖಲೆ ಸೃಷ್ಟಿಸಿಕೊಂಡು ನಾಚನಹಳ್ಳಿ ಪಾಳ್ಯದ ಗೋವಿಂದಸ್ವಾಮಿ, ಅವರ ಮಗ ರಾಘವೇಂದ್ರ ಅವರು ನಿವೇಶನ ರಚಿಸಿಕೊಂಡು ಮಾರಾಟ ಮಾಡುವ ಮೂಲಕ ಅಕ್ರಮ ಎಸಗಿದ್ದಾರೆ. ಈ ಬಗ್ಗೆ ಸಂಬಂಧಿಸಿದ ಎಲ್ಲರಿಗೂ ದೂರು ನೀಡಿದರೂ ಪ್ರಯೋಜನವಾಗಿಲ್ಲ ಎಂದು ಆರೋಪಿಸಿದರು.

ಈ ಸ್ವತ್ತುಗಳು ಶೆರ್ವೆಗಾರ್ ಲಕ್ಷ್ಮಿ ಬೋವಿಗೆ ಎಂಬುವರಿಗೆ ಸೇರಿದೆ ಎಂದು ಸುಳ್ಳು ದಾಖಲೆ ಸೃಷ್ಟಿಕೊಂಡಿದ್ದಾರೆ. ಬಳಿಕ ಇದು ತಮ್ಮ ಅಜ್ಜನಿಗೆ ಸೇರಿದ ಸ್ವತ್ತು ಎಂದು ಹೇಳಿಕೊಂಡು ಮುಡಾ ಹಾಗೂ ಪಾಲಿಕೆ ಅಧಿಕಾರಿಗಳೊಡನೆ ಶಾಮೀಲಾಗಿ ನಿವೇಶನ ಮಾಡಿ ಮಾರಾಟ ಮಾಡಿದ್ದಾರೆ. ಇದಲ್ಲದೆ, ಸರ್ಕಾರದ ವಿರುದ್ಧ ಪ್ರಕರಣ ದಾಖಲು ಮಾಡಿ ರಾಜೀ ಮಾಡಿಕೊಂಡಂತೆ ನಾಟಕ ಮಾಡಿದ್ದಾರೆ. ವಾಸ್ತವವಾಗಿ ಇದು ಕೆರೆಗೆ ಸೇರಿದ ಜಾಗವಾಗಿದೆ. ಈ ಕುಟುಂಬದವರಿಗೆ ಮಹಾರಾಜರು ದಾನ ಕೊಟ್ಟಿದ್ದಾರೆ ಎಂದು ಸುಳ್ಳು ದಾಖಲೆ ಸೃಷ್ಟಿಸಿಕೊಂಡಿದ್ದಾರೆ. ಈ ರೀತಿ ಸರ್ಕಾರಕ್ಕೆ ಕೋಟ್ಯಂತರ ರೂ., ವಂಚನೆ ಮಾಡಿದ್ದಾರೆ. ಈ ಕುರಿತು ತಾವು ಲೋಕಾಯುಕ್ತರು, ಡಿಸಿಗೆ ದೂರು ನೀಡಿದ್ದೇವೆ. ಕೂಡಲೇ ಕ್ರಮ ಕೈಗೊಂಡು ಸರ್ಕಾರದ ಆಸ್ತಿ ವಶ ಪಡಿಸಿಕೊಳ್ಳಬೇಕೆಂದು ಮನವಿ ಮಾಡಿದರು. ಸುದ್ದಿಗೋಷ್ಠಿಯಲ್ಲಿ ನಾಚನಹಳ್ಳಿ ಪಾಳ್ಯದ ನಿವಾಸಿಗಳಾದ ಜಿ.ಎಂ. ಮಹದೇವ, ಎಂ. ಮಹದೇವ ಇದ್ದರು.

ನಾಳೆ ‘ನೀರ್ಮಾದಳ ಹೂವಿನೊಂದಿಗೆ’ ನಾಟಕ ಪ್ರದರ್ಶನ

ಮೈಸೂರು, ಡಿ.6(ಎಂಟಿವೈ)– ಮೈಸೂರಿನ ರಾಮಕೃಷ್ಣ ನಗರದ ನಟನ ರಂಗಮಂದಿರದಲ್ಲಿ ಡಿ.8ರಂದು ಸಂಜೆ 6.30ಕ್ಕೆ ಏಕವ್ಯಕ್ತಿ ರಂಗ ಪ್ರಯೋಗ ‘ನೀರ್ಮಾದಳ ಹೂವಿನೊಂದಿಗೆ’ ಕನ್ನಡ ರೂಪಾಂತರ ನಾಟಕ ಪ್ರದರ್ಶನಗೊಳ್ಳಲಿದೆ ಎಂದು ಹಿರಿಯ ರಂಗಕರ್ಮಿ ಇಂದಿರಾ ನಾಯರ್ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಮತೆಂತೋ ರಂಗ ಪ್ರಸ್ತುತಪಡಿಸುತ್ತಿರುವ ‘ನೀರ್ಮಾದಳ ಹೂವಿನೊಂದಿಗೆ’ ನಾಟಕ ಕಮಲಾ ದಾಸ್ ಅವರ ಬರಹಗಳಿಂದ ಪ್ರೇರಿತವಾದ ರೂಪಕವಾಗಿದೆ. ಈ ಏಕವ್ಯಕ್ತಿ ನಾಟಕದಲ್ಲಿ ಅಭಿನಯಿಸುತ್ತಿರುವುದು ಸಂತೋಷದ ಸಂಗತಿ. ಇದು ಕಮಲಾ ದಾಸ್ ಅವರ ಕನ್ನಡದ ಮೊದಲ ನಾಟಕವೂ ಆಗಿದೆ. ರಂಗಪಠ್ಯ, ವಿನ್ಯಾಸ, ನಿರ್ದೇಶನ ಶ್ರೀಪಾದ್ ಭಟ್ ಅವರದ್ದಾಗಿದೆ ಎಂದು ತಿಳಿಸಿದರು.

ಕಮಲಾ ದಾಸ್ ಹೇಗಿದ್ದರು ಎಂಬುದನ್ನು ತೋರಿಸುವ ಪ್ರಯತ್ನ ಇದಲ್ಲ, ಬದಲಾಗಿ ತಮ್ಮ ಬರಹಗಳ ಮೂಲಕ ನಮಗೆ ಹೇಗೆ ಕಂಡಿದ್ದಾರೆ ಎಂಬುದಾಗಿದೆ. ಇದು ಸುಮಾರು ಒಂದೂವರೆ ಗಂಟೆ ಅವಧಿಯ ನಾಟಕವಾಗಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಹಿರಿಯ ರಂಗಕರ್ಮಿ ರಾಮೇಶ್ವರಿ ವರ್ಮ, ಡಾ. ಶ್ರೀಪಾದ್ ಭಟ್ ಇದ್ದರು.

ಉಚಿತ ಆರೋಗ್ಯ ತಪಾಸಣಾ ಶಿಬಿರ

ಮೈಸೂರು, ಡಿ. 6– ಎನ್‌ಜೆಪಿಸ್ ಚಾರಿಟಬಲ್ ಟ್ರಸ್ಟ್, ಮೈಸೂರು ವೀರಶೈವ ಸಜ್ಜನ ಸಂಘದ ಸಂಯುಕ್ತಾಶ್ರಯದಲ್ಲಿ ಡಿ. 10 ರಂದು ಬೆಳಗ್ಗೆ 9.30 ರಿಂದ ಮಧ್ಯಾಹ್ನ 2 ಗಂಟೆಯವರೆಗೆ ಮಂಡಿ ಮೊಹಲ್ಲಾದ ಕಬೀರ್ ರಸ್ತೆ, ಮಂಡಿ ಪೊಲೀಸ್ ಸ್ಟೇಷನ್ ಹತ್ತಿರವಿರುವ ಕಂಠಿ ಮಲ್ಲಣ್ಣನವರ ಕಲ್ಯಾಣ ಮಂದಿರದಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರ ಏರ್ಪಡಿಸಲಾಗಿದೆ. ಹೆಚ್ಚಿನ ಮಾಹಿತಿಗೆ ಹೆಚ್.ಎಸ್. ಬಸವರಾಜ್, ಮೊ. 94487 53597, ಎಂ.ಎನ್. ಜೈ ಪ್ರಕಾಶ್,ಮೊ. 9916155453, 94487 38657 ಸಂಪರ್ಕಿಸಬಹುದು.

ಅಭಿನಂದನೆ



ಮೈಸೂರು ತಾಲೂಕು ಹಾರೋಹಳ್ಳಿ(ಜಯಪುರ) ಗ್ರಾಮ ಪಂಚಾಯಿತಿಗೆ ನೂತನವಾಗಿ ಅಧ್ಯಕ್ಷರಾಗಿ ಆಯ್ಕೆಯಾದ ಹೆಚ್.ಎಲ್.ರೇವಣ್ಣನವರನ್ನು ಗ್ರಾ.ಪಂ.ಮಾಜಿ ಅಧ್ಯಕ್ಷ ದೊಡ್ಡಹುಂಡಿ ಸೋಮಣ್ಣ ಅಭಿನಂದಿಸಿದರು. ಈ ವೇಳೆ ಕಾಂಗ್ರೆಸ್ ಮುಖಂಡರಾದ ಡಿ.ಸಿ.ಬಸವೇಗೌಡ, ಸಿ.ಚಿಕ್ಕಣ್ಣ, ಸಿ.ನಾಗೇಂದ್ರ ಮತ್ತು ಅಂಗಡಿ ಬಸವಲಿಂಗ ಉಪಸ್ಥಿತರಿದ್ದರು.

ಬಾಂಗ್ಲಾದಲ್ಲಿ ಹಿಂದುಗಳ ಮೇಲಿನ ದೌರ್ಜನ್ಯ ಖಂಡಿಸಿ ಎಸ್‌ಯುಸಿಐ ಪ್ರತಿಭಟನೆ



ಮೈಸೂರಿನ ಮಹಾತ್ಮಗಾಂಧಿ ವೃತ್ತದಲ್ಲಿ ಬಾಂಗ್ಲಾದೇಶ ಹಾಗೂ ಭಾರತದಲ್ಲಿ ಹೆಚ್ಚುತ್ತಿರುವ ಕೋಮುವಾದಕ್ಕೆ ಕಡಿವಾಣ ಹಾಕುವಂತೆ ಒತ್ತಾಯಿಸಿ ಸೋಷಿಯಲಿಸ್ಟ್ ಯೂನಿಟಿ ಸೆಂಟರ್ ಆಫ್ ಇಂಡಿಯಾ(ಕಮ್ಯುನಿಸ್ಟ್–ಎಸ್‌ಯುಸಿಐ) ಕಾರ್ಯಕರ್ತರು ಪ್ರತಿಭಟನೆ ನಡೆಸಿದರು

ಮೈಸೂರು, ಡಿ.6(ಎಂಟಿವೈ)– ಬಾಂಗ್ಲಾದೇಶ ಹಾಗೂ ಭಾರತದಲ್ಲಿ ಹೆಚ್ಚುತ್ತಿರುವ ಕೋಮುವಾದಕ್ಕೆ ಕಡಿವಾಣ ಹಾಕುವಂತೆ ಒತ್ತಾಯಿಸಿ ಸೋಷಿಯಲಿಸ್ಟ್ ಯೂನಿಟಿ ಸೆಂಟರ್ ಆಫ್ ಇಂಡಿಯಾ(ಕಮ್ಯುನಿಸ್ಟ್–ಎಸ್‌ಯುಸಿಐ) ಕಾರ್ಯಕರ್ತರು ಮೈಸೂರಲ್ಲಿ ಅಖಿಲ ಭಾರತ ಪ್ರತಿರೋಧ ದಿನದ ಅಂಗವಾಗಿ ಪ್ರತಿಭಟನೆ ನಡೆಸಿದರು.

ಮೈಸೂರಿನ ಮಹಾತ್ಮಗಾಂಧಿ ವೃತ್ತದಲ್ಲಿ ಪ್ರತಿಭಟನೆ ನಡೆಸಿ, ಬಾಂಗ್ಲಾದೇಶದಲ್ಲಿ ಅಲ್ಪಸಂಖ್ಯಾತ ಹಿಂದುಗಳ ಮೇಲೆ ಅಮಾನವೀಯವಾಗಿ ದಾಳಿ ನಡೆಸಲಾಗುತ್ತಿದೆ. ಬಾಂಗ್ಲಾ ವಿಮೋಚನಾ ಹೋರಾಟದಲ್ಲಿ ಹಿಂದುಗಳು ಭಾಗಿಯಾಗಿದ್ದರು. ಅಲ್ಲದೆ, ಬಾಂಗ್ಲಾಪರ ಭಾರತ ಬೆಂಬಲ ನೀಡಿತ್ತು. ಆದರೆ, ಇದೀಗ ಅಲ್ಪಸಂಖ್ಯಾತ ಹಿಂದುಗಳ ಮೇಲೆ ದಾಳಿ ನಡೆಸುತ್ತಿರುವುದು ಖಂಡನೀಯ. ಅಲ್ಲಿನ ರಾಜಕೀಯ ಪರಿಸ್ಥಿತಿಯನ್ನು ಕೋಮವಾದಿಗಳು ದುರುಪಯೋಗ ಮಾಡಿಕೊಂಡು ಹಿಂದುಗಳ ಮೇಲೆ ದಾಳಿ ನಡೆಸುತ್ತಿವೆ ಎಂದು ಪ್ರತಿಭಟನಾಕಾರರು ಕಿಡಿಕಾರಿದರು.

ಭಾರತದಲ್ಲೂ ಕೋಮುವಾದಿ ಶಕ್ತಿಗಳು ಅಟ್ಟಹಾಸ ಮೆರೆಯುತ್ತಿವೆ. ಬಿಜೆಪಿ ಮತ್ತು ಸಂಘಪರಿವಾರದ ಕುಮ್ಮಕ್ಕಿನಿಂದ ಬಾಬರಿ ಮಸೀದಿ ಧ್ವಂಸಗೊಳಿಸಿದ ನಂತರ ದೇಶದಲ್ಲಿ ಕೋಮುವಾದಿಗಳ ಕೃತ್ಯ ಹೆಚ್ಚಾಗುತ್ತಿದೆ. ಇದರಿಂದ ಶಾಂತಿ–ಸುವ್ಯವಸ್ಥೆಗೆ ಭಂಗವುಂಟಾಗುತ್ತಿದೆ ಎಂದು ಆರೋಪಿಸಿದರು.

ಎರಡೂ ದೇಶದಲ್ಲಿ ಶಾಂತಿ ನೆಲೆಸಲು ಕ್ರಮ ಕೈಗೊಳ್ಳಬೇಕು. ಜನಸಾಮಾನ್ಯರು ಹಾಗೂ ಅಲ್ಪ ಸಂಖ್ಯಾತರಿಗೆ ಆಗುತ್ತಿರುವ ತೊಂದರೆಗೆ ಕಡಿವಾಣ ಹಾಕಬೇಕು. ಕೋಮುಸೌಹಾರ್ದತೆ ಮೂಡಿಸಲು ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಎಸ್‌ಯುಸಿಐ ಜಿಲ್ಲಾ ಕಾರ್ಯದರ್ಶಿ ಬಿ.ರವಿ, ಮುಖಂಡರಾದ ಉಮಾದೇವಿ, ಚಂದ್ರಶೇಖರ್ ಮೇಟಿ, ಪಿ.ಎಸ್.ಸಂಧ್ಯಾ, ಯಶೋಧರ್, ಜಿ.ಎಸ್.ಸೀಮಾ, ಹರೀಶ್, ಸುನೀಲ್, ಬಸವರಾಜು, ಸುಮಾ, ಚಂದ್ರಕಲಾ, ಆಸಿಯಾ ಬೇಗಂ ಇದ್ದರು.

ಹೆಚ್ಚುವರಿ ಭೂ ಪರಿಹಾರ ನೀಡುವಲ್ಲಿ ವಿಳಂಬ

ಮೈಸೂರು ಮಹಾನಗರ ಪಾಲಿಕೆ ಪೀಠೋಪಕರಣ ಜಪ್ತಿ; ಆಯುಕ್ತರ ಭರವಸೆಯಂತೆ ಪರಿಹಾರ ಮಾರ್ಗ



ಪಾಲಿಕೆ ಪೀಠೋಪಕರಣ ಜಪ್ತಿ ಮಾಡುತ್ತಿರುವ ಕೋರ್ಟ್ ಸಿಬ್ಬಂದಿ

ಮೈಸೂರು, ಡಿ.6(ಆರ್‌ಕೆ)– ಕುಡಿಯುವ ನೀರಿನ ಶುದ್ಧೀಕರಣ ಘಟಕ ನಿರ್ಮಿಸುವ ಸಲುವಾಗಿ ಸ್ವಾಧೀನಪಡಿಸಿಕೊಂಡಿದ್ದ ಭೂಮಿಯ ಮಾಲೀಕರಿಗೆ ಪರಿಹಾರ ಹಣ ನೀಡಲು ವಿಳಂಬವಾಗಿರುವ ಹಿನ್ನೆಲೆಯಲ್ಲಿ ನ್ಯಾಯಾಲಯದ ಆದೇಶದಂತೆ ಮೈಸೂರು ಮಹಾನಗರ ಪಾಲಿಕೆಯ ಪೀಠೋಪಕರಣ ಜಪ್ತಿಗೆ ಮುಂದಾದ ಪ್ರಸಂಗ ಶುಕ್ರವಾರ ನಡೆಯಿತು.

ಮೈಸೂರು ಮಹಾನಗರ ಪಾಲಿಕೆಯಿಂದ ಮೇಳಾಪುರ ಯೋಜನೆಯಡಿ 1994–95ರಲ್ಲಿ ಮೈಸೂರು ತಾಲೂಕು ರಮ್ಮನಹಳ್ಳಿ ಬಳಿ ಕುಡಿಯುವ ನೀರಿನ ಶುದ್ಧೀಕರಣ ಘಟಕ ನಿರ್ಮಿಸುವ ಸಲುವಾಗಿ 45 ಎಕರೆ ಭೂಮಿಯನ್ನು ಸ್ವಾಧೀನಪಡಿಸಿಕೊಂಡಿತ್ತು. ಭೂ ಮಾಲೀಕರಿಗೆ ಪ್ರತಿ ಎಕರೆಗೆ 45 ಸಾವಿರ ರೂ.ನಂತೆ ಪರಿಹಾರ ನೀಡಲು ಒಪ್ಪಿತ್ತು. ಆದರೆ, 14 ಮಂದಿ ಭೂ ಮಾಲೀಕರು ತಮಗೆ ಹೆಚ್ಚುವರಿ ಪರಿಹಾರ ಕಲ್ಪಿಸುವಂತೆ ಮೈಸೂರು ಜಿಲ್ಲಾ ನ್ಯಾಯಾಲಯದ ಮೊರೆ ಹೋಗಿದ್ದರು. ವಿಚಾರಣೆ ನಡೆಸಿದ ನ್ಯಾಯಾಲಯವು ಈ ಹಿಂದೆಯೇ ಸರಿಯಾದ ಮೌಲ್ಯವನ್ನು ಪರಿಹಾರವಾಗಿ ನೀಡಿದ್ದರೆ ಈಗ ಮತ್ತೆ ಹೆಚ್ಚುವರಿ ಪರಿಹಾರ ನೀಡುವ ಪ್ರಮೇಯವೇ ಉದ್ಭವಿಸುತ್ತಿರಲಿಲ್ಲ. ಜೊತೆಗೆ ಪರಿಹಾರ ಕಲ್ಪಿಸುವಲ್ಲೂ ವಿಳಂಬ ಮಾಡಿರುವುದರಿಂದ ಬಡ್ಡಿ ಸಮೇತ ಎಕರೆಗೆ 80 ಲಕ್ಷದಿಂದ 1 ಕೋಟಿ ರೂ. ಪರಿಹಾರವನ್ನು ನೀಡುವಂತೆ 2021ರಲ್ಲೇ ಆದೇಶ ನೀಡಿತ್ತು.

ಆದರೆ, ಮೈಸೂರು ಮಹಾನಗರ ಪಾಲಿಕೆ ಮತ್ತೆ ಪರಿಹಾರ ನೀಡಲು ವಿಳಂಬ ಮಾಡಿದ್ದರಿಂದ ನ್ಯಾಯಾಲಯವು ಮಹಾನಗರ ಪಾಲಿಕೆಯ ಆಸ್ತಿಗಳನ್ನು ಜಪ್ತಿ ಮಾಡುವಂತೆ ಆದೇಶ ನೀಡಿದ ಹಿನ್ನೆಲೆಯಲ್ಲಿ ಇಂದು ವಕೀಲರು ಹಾಗೂ ನ್ಯಾಯಾಲಯದ ಅಮೀನ್, ಪಾಲಿಕೆಯ ಆಯುಕ್ತರ ಆಪ್ತ ಸಹಾಯಕರ ಕಚೇರಿಯ ಪೀಠೋಪಕರಣಗಳ ಹೊರಗೆ ತಂದು ಕಾರಿಡಾರ್‌ನಲ್ಲಿ ಇರಿಸಿದ್ದರು. ಹಾಗಾಗಿ ಕಚೇರಿ ಸಿಬ್ಬಂದಿ ಮಧ್ಯಾಹ್ನದವರೆಗೆ ಪೀಠೋಪಕರಣಗಳಿಲ್ಲದೆ ನಿಂತು ಕೆಲಸ ಮಾಡುವ ದಯಾನೀಯ ಪರಿಸ್ಥಿತಿ ನಿರ್ಮಾಣವಾಗಿತ್ತು ಈ ಹಿನ್ನೆಲೆಯಲ್ಲಿ ಪಾಲಿಕೆ ಆಯುಕ್ತ ಅಶಾದ್ ಉರ್ ರೆಹಮಾನ್ ಷರೀಫ್ ಅವರು ಕೋರ್ಟ್ ಅಮೀನ್, ವಕೀಲರು ಹಾಗೂ ರಮ್ಮನಹಳ್ಳಿಯಿಂದ ಬಂದಿದ್ದ ಸಂಬಂಧಿಸಿದ ರೈತರೊಂದಿಗೆ ಮಾತನಾಡಿ, ಸೂಪರಿಂಟೆಂಡಿಂಗ್ ಇಂಜಿನಿಯರ್ ಕೆ.ಜೆ. ಸಿಂಧು ಹಾಗೂ ಲೆಕ್ಕ ಶಾಖೆಯ ಅಧಿಕಾರಿಗಳನ್ನು ಕರೆದು ಕೋರ್ಟ್ ಆದೇಶದಂತೆ ಭೂ ಮಾಲೀಕರಿಗೆ ತಕ್ಷಣ ಹೆಚ್ಚುವರಿ ಪರಿಹಾರ ಪಾವತಿಸಲು ವ್ಯವಸ್ಥೆ ಮಾಡುವಂತೆಯೂ, ಈಗಲೇ ಭಾಗಶಃ ಹಣವನ್ನು ಪಾವತಿಸುವಂತೆ ಸೂಚನೆ ನೀಡಿದ ಹಿನ್ನೆಲೆಯಲ್ಲಿ ಕೋರ್ಟ್ ಸಿಬ್ಬಂದಿ ವಾಪಸ್ಸಾದರು.

ಮೈಸೂರು ಬಸ್ ನಿಲ್ದಾಣದಲ್ಲಿ ಮಹಿಳಾ ಪ್ರಯಾಣಿಕರ ಮಾಂಗಲ್ಯ ಸರ ಕದಿಯುತ್ತಿದ್ದ ಕಳ್ಳಿ ಸೆರೆ

ಮೈಸೂರು, ಡಿ. 6(ಆರ್‌ಕೆ)– ಮೈಸೂರಿನ ಸಬರ್ಬನ್ ಬಸ್ ನಿಲ್ದಾಣದಲ್ಲಿ ಮಹಿಳಾ ಪ್ರಯಾಣಿಕರ ಚಿನ್ನದ ಸರ ಎಗರಿಸುತ್ತಿದ್ದ ಮಹಿಳೆಯನ್ನು ಬಂಧಿಸಿರುವ ಲಷ್ಕರ್ ಠಾಣೆ ಪೊಲೀಸರು, 3,90,000 ರೂ. ಮೌಲ್ಯದ 56 ಗ್ರಾಂ ತೂಕದ 2 ಚಿನ್ನದ ಸರವನ್ನು ವಶಪಡಿಸಿಕೊಂಡಿದ್ದಾರೆ.

ಡಿಸೆಂಬರ್ 3ರಂದು ಕೆಎಸ್‌ಆರ್‌ಟಿಸಿ ಗ್ರಾಮಾಂತರ ಬಸ್ ನಿಲ್ದಾಣದಲ್ಲಿ ಗಸ್ತಿನಲ್ಲಿದ್ದಾಗ ಸಂಶಯಾಸ್ಪದವಾಗಿ ಓಡಾಡುತ್ತಿದ್ದ ಮಹಿಳೆಯನ್ನು ಠಾಣೆಗೆ ಕರೆದೊಯ್ದು ವಿಚಾರಣೆ ನಡೆಸಿದ ಪೊಲೀಸರಿಗೆ ಆಕೆ ಮಹಿಳಾ ಪ್ರಯಾಣಿಕರ ಚಿನ್ನದ ಸರ ಕಳುವು ಮಾಡುತ್ತಿದ್ದಳೆಂಬುದು ತಿಳಿಯಿತು.

ಎರಡು ಪ್ರಕರಣಗಳ ಸಂಬಂಧ ಆರೋಪಿಯಿಂದ 3,90,000 ರೂ. ಮೌಲ್ಯದ ಚಿನ್ನಾಭರಣಗಳನ್ನು ಪೊಲೀಸರು ವಶಪಡಿಸಿಕೊಂಡರು. ಡಿಸಿಪಿ ಎಸ್. ಜಾಹ್ನವಿ ಮಾರ್ಗದರ್ಶನದಂತೆ, ದೇವರಾಜ ಉಪ ವಿಭಾಗದ ಎಸಿಪಿ ಶಾಂತಮಲ್ಲಪ್ಪ ಉಸ್ತುವಾರಿಯಲ್ಲಿ ನಡೆದ ಪತ್ತೆ ಕಾರ್ಯಾಚರಣೆಯಲ್ಲಿ ಲಷ್ಕರ್ ಠಾಣೆ ಇನ್‌ಸ್ಪೆಕ್ಟರ್ ಕೆ.ಆರ್. ಪ್ರಸಾದ್, ಸಬ್ ಇನ್‌ಸ್ಪೆಕ್ಟರ್‌ಗಳಾದ ಎಂ. ರಾಧಾ, ಅನಿಲ್‌ಕುಮಾರ್ ಮನ್ನೂರ, ಸಿಬ್ಬಂದಿಗಳಾದ ಸುರೇಶ್, ರವಿಕುಮಾರ್, ಗಿರೀಶ್, ಮಂಜುನಾಥ, ಚೌಡಪ್ಪ ಪಾಸೀಗರ, ಅಬ್ದುಲ್ ರೆಹಮಾನ್, ಚಿಕ್ಕಣ್ಣಸ್ವಾಮಿ, ಅಶ್ವಿನಿ ಹಳವಾರ ಪಾಲ್ಗೊಂಡಿದ್ದರು.

3.90 ಲಕ್ಷ ಮೌಲ್ಯದ 56 ಗ್ರಾಂನ 2 ಚಿನ್ನದ ಸರ ಜಪ್ತಿ

DTCP APPROVED

Sites attached to Mysuru - Hunsur Highway

Starts from 10.75 L

9845 77 11 77

CWD Limited

Electronic Manufacturing Services

We are seeking **partners** who expertise in PCBA Manufacturing SMT, Through Hole & Box build for consumer products

Contact Procurement team:
Mobile: +91 8080868182
Address: Plot No. 13/1, Koorgalli Industrial Area, Mysuru - 570017

BEFORE THE HONOURABLE VI ADDL DISTRICT AND SESSIONS PETITIONER JUDGE AT MYSORE

PROBATE PETITION NO: 72/2024

PETITIONER: Manikya W/o Late Iyengar M.S.V.K, aged about 74 years, Residing at No.685, 12 Main, Thonachikoppal, 4 stage, Mysore-9

Vs

RESPONDENTS: Nil

PAPER PUBLICATION

I, Smt. MANIKYA, w/o Late Iyengar M.S.V.K, residing at No.685, 12 main, Thonachikoppal, 4" stage, Mysore, hereby notify that I am executing the Will made by the Late Iyengar M.S.V.K. Any person having any objection to this petition on any claim related to the subject matter of this petition is hereby given to approach the Hon'ble 6th Additional Sessions and District Judge in person or through advocate in the above case on 04-01-2025 at about 11:00 A.M. if you intent to contest. If you fail to appear on the date mentioned above, the petition will be deat in your absence in accordance with law.

Given under my hand and seal of the court on this day 03-12-2024.

SCHEDULE

Residential house bearing site No. 685 located at 12th main, Thonachikoppal, 4th stage, Mysore-570009 having ground floor built measuring east to west 60 feet's and north to south 40 feet's, and bounded by: EAST: 30 feet Municipal Road, WEST: Residential House, NORTH: Residential House Bearing No. 686, SOUTH: Residential House Bearing No.684.

Date: 30/11/2024, Place: Mysuru.

BY ORDER OF THE COURT
Sd/- Chief Administration Officer
Principal district And Session Judge, Mysore.

Advocate for petitioner
Sd/- Dinakar M.P (KAR1388/2002)
Dinesh (KAR78/2018), No. 35, 11th Cross, 2nd Main Road, Jayanagar, Mysore.

BUILDING FOR RENT

Suitable for Service Apartment, Company guest house located in prime location of Dattagalli 3rd Stage adjacent to Ring Road.

For further details contact Owner

9036512621
8904523423

SITE FOR SALE

50x80

North facing site. Prime location. Opposite to park in ROOPANAGAR. Attached to SBM bogadi. Near christ public school. Price is 4000 per sqft.

8792235466 | 8884616461

SITES FOR SALE

30x50

North, East & West facing

@ KBL Gardenia


Belvadi Village, Vijayanagar 4th Stage, Near SVEI College

6364342244, 9686833300

BRAND NEW 3 BHK FOR LEASE

Lease amount 25 Lakhs Vijaynagar 4th stage, Mysore. Contact:

Mob: 9663110099





ಸಂತಸ ಫರ್ಟಿಲಿಟಿ ವತಿಯಿಂದ ಮಕ್ಕಳು ಬಯಸುವ ದಂಪತಿಗಳಿಗೆ ಉಚಿತ ತಪಾಸಣಾ ಶಿಬಿರ ನಡೆಸಲಾಗುವುದು

santasa Bringing Baby Bliss

ದಿನಾಂಕ: 13–12–2024 ಶುಕ್ರವಾರ ಹಾಗೂ 14–12–2024 ಶನಿವಾರ
ಸಮಯ: ಬೆಳಿಗ್ಗೆ 10 ರಿಂದ ಮಧ್ಯಾಹ್ನ 3 ರವರೆಗೆ

ವಿಶೇಷ ಕೊಡುಗೆಗಳು

- ಮಹಿಳೆಯರಿಗೆ ಉಚಿತ ಸ್ಕ್ಯಾನಿಂಗ್
- ಪುರುಷರಿಗೆ ಉಚಿತ ವೀರ್ಯಾಣು ಪರೀಕ್ಷೆ
- ಫರ್ಟಿಲಿಟಿ ಹಾಗೂ ಸ್ತ್ರೀರೋಗ ಸಮಸ್ಯೆಗೆ ತಜ್ಞರೊಂದಿಗೆ ಉಚಿತ ಸಮಾಲೋಚನೆ
- ಲ್ಯಾಬ್ ಟೆಸ್ಟ್‌ಗಳ ಮೇಲೆ ಶೇ. 20 ರಷ್ಟು ರಿಯಾಯಿತಿ

*ಷರತ್ತುಗಳು ಅನ್ವಯಿಸುತ್ತದೆ.

ಸಂತಸ ಫರ್ಟಿಲಿಟಿ

ಸ್ಥಳ : ಹೊಸ ಕಾಂತರಾಜ ಅರಸ್ ರಸ್ತೆ, ಪಂಚವಟಿ ಹೋಟೆಲ್ ಎದುರು, ಬಲ್ಲಾಳ್ ವೃತ್ತದ ಹತ್ತಿರ, ಲಕ್ಷ್ಮೀಪುರಂ, ಮೈಸೂರು

ಹೆಚ್ಚಿನ ಮಾಹಿತಿಗಾಗಿ ಮತ್ತು ಉಚಿತ ಶಿಬಿರಕ್ಕೆ ನಿಮ್ಮ ಹೆಸರನ್ನು ನೋಂದಾಯಿಸಿಕೊಳ್ಳಲು ಸಂಪರ್ಕಿಸಿ:

9620099936, 9845049079



